ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ



ಸುರೇಶ್ ಕುಷ್ಟಗಿ ಇನ್ನಿಲ್ಲ

ಸಂಪುಟ 11 | ಸಂಚಿಕೆ 25 | ಪುಟ 16 | ಜೂನ್ 12-18, 2017 | ರೂ. 10/-

web: www.janashakthi.co.in | e-mail : js_weekly@yahoo.com





ನಮ್ಮ ಸಂವಿಧಾನ ನಮ್ಮ ಹೆಮ್ಮೆ



ಯೆಚೂರಿ ಮೇಲೆ ಸಂಘಿ ಧಾಳಿ: ಪ್ರತಿಭಟನೆ



ಮಧ್ಯ ಭಾರತದಲ್ಲಿ ರೈತ ಬಂಡಾಯ

ಬಿಸಿಯೂಟ ನೌಕರರ "ಎಂ.ಪಿ. ಮನೆ ಚಲೋ"

ಕಾರ್ಪೋರೇಟ್ ಹಿಂದುತ್ವದ ಹೊಸ ಮಾದರಿ: ಜಾನುವಾರು ಮಾರಾಟ ನಿಷೇಧ

ವಳಗೆರೆಹಳ್ಳಿ ಭೂಮಿ ಮರು ವಶ ಹೋರಾಟ

ಮೋದಿ ಸರಕಾರದ ಮೂರು ವರ್ಷಗಳು ಜನತೆಗೆ ವಿಶ್ವಾಸಘಾತದ ವರ್ಷಗಳು

–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಮೋದಿ ಸರಕಾರದ ಮೂರು ವರ್ಷಗಳು ನಮ್ಮ ದೇಶದ ಜನಗಳಿಗೆ ಅದು ನೀಡಿರುವ ಚುನಾವಣಾ ಆಶ್ವಾಸನೆಗಳು ಹುಸಿಯಾಗಿ ಜನತೆಗೆ ವಿಶ್ವಾಸಘಾತದ ಮೂರು ವರ್ಷಗಳು, 'ಅಚ್ಛೇ ದಿನ್' ಬದಲು ಜನಗಳಿಗೆ ದಕ್ಕಿದ್ದು ಇನ್ನಷ್ಟು ನೋವುಗಳು, ಅವರ ಸಂಕಟಗಳು ಹೆಚ್ಚುತ್ತಲೇ ಇವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವಿಶ್ಲೇಷಿಸಿದೆ. ಜೂನ್ 6 ಮತ್ತು 7ರಂದು ನವದೆಹಲಿಯಲ್ಲಿ ನಡೆದ ಪೊಲಿಟ್‌ಬ್ಯುರೊ ದೇಶದಲ್ಲಿನ ಪ್ರಸ್ತುತ ವಿದ್ಯಮಾನಗಳನ್ನು ಪರಿಶೀಲಿಸಿತು. ಈಬಗ್ಗೆ ನಿಡಿರುವ ಪತ್ರಿಕಾಹೇಳಿಕೆಯ ಇತರ ವಿವರಗಳು ಈ ಕೆಳಗಿನಂತಿವೆ

ನಿರುದ್ಯೋಗದ ನಾಗಾಲೋಟ

ಪ್ರತಿವರ್ಷ ಎರಡು ಕೋಟಿ ಉದ್ಯೋಗಗಳನ್ನು ಸೃಷ್ಟಿಸಲಾಗುವುದು ಎಂದು ಯುವಜನತೆಗೆ ಆಶ್ವಾಸನೆ ನೀಡಲಾಗಿತ್ತು. ಅದರೆ ಅದರ ಬದಲು ನಾವೀಗ ಔದ್ಯಮಿಕ ವಲಯದಲ್ಲಿ ಕಳೆದ ಎಂಟು ವರ್ಷಗಳಲ್ಲೇ ಅತಿ ಕಡಿಮೆ ಉದ್ಯೋಗ ಬೆಳವಣಿಗೆಯನ್ನು ಕಾಣುತ್ತಿದ್ದೇವೆ.

ಇನ್ನು ಗ್ರಾಮೀಣ ಉದ್ಯೋಗಗಳ ಬಗ್ಗೆ ಹೇಳುವುದಾದರೆ, ಸ್ವತಃ ಸರಕಾರವೇ, ಕಳೆದ ಮೂರು ವರ್ಷಗಳಲ್ಲಿ ಪ್ರತಿ ವರ್ಷವೂ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ(ಮನರೇಗ)ಯ ಅಡಿಯಲ್ಲಿ 20,000 ಕೋಟಿ ರೂ.ಗಳಿಗಿಂತಲೂ ಹೆಚ್ಚು ಹಣ ನೀಡಲು ನಿರಾಕರಿಸಿದೆ ಎಂಬುದನ್ನು ಒಪ್ಪಿಕೊಂಡಿದೆ. ಅಂದರೆ ಈಗಾಗಲೇ ನರಳುತ್ತಿರುವ ಗ್ರಾಮೀಣ ಬಡಜನಗಳಿಗೆ ಕೂಲಿಗಳನ್ನೂ ನಿರಾಕರಿಸುತ್ತಿದೆ.

ಮಾಹಿತಿ ತಂತ್ರಜ್ಞಾನ(ಐಟಿ) ವಲಯದಲ್ಲಿ ಈಗಿರುವ 40ಲಕ್ಷ ಉದ್ಯೋಗಿಗಳಲ್ಲಿ ಸುಮಾರು 50ರಿಂದ 60 ಶೇ. ಈ ವರ್ಷದ ಅಂತ್ಯದ ವೇಳೆಗೆ ಅನಗತ್ಯರಾಗುತ್ತಾರೆ ಎಂದು ಅಂತರ್ರಾಷ್ಟ್ರೀಯ ಏಜೆನ್ಸಿ ಮೆಕಿನ್ಸೆ ಲೆಕ್ಕ ಹಾಕಿದೆ. ಇನ್ಫೊಸಿಸ್, ವಿಪ್ರೊ, ಕಾಗ್ನಿಸೆಂಟ್ 60,000 ಕೆಲಸಗಾರರನ್ನು ರಿಟ್ರೆಂಚ್ ಮಾಡಲಿದ್ದಾರೆ ಎಂದು ವರದಿಗಳಿವೆ. ಎಲ್ ಅಂಡ್ ಟಿ ಮತ್ತಿತರ ಮೂಲರಚನೆ ವಲಯದ ದೈತ್ಯ ಕಂಪನಿಗಳು ಈಗಾಗಲೇ ತಮ್ಮ ಕೆಲಸಗಾರರ ಸಂಖ್ಯೆಯನ್ನು ಗಮನಾರ್ಹವಾಗಿ ಇಳಿಸಿವೆ.

ಹೀಗೆ ವರ್ಷಕ್ಕೆ 2 ಕೋಟಿ ಉದ್ಯೋಗಗಳನ್ನು ಸೃಷ್ಟಿಸುವ ಮಾತು ಹಾಗಿರಲಿ, ಈ ಸರಕಾರದ ಧೋರಣೆಗಳಿಂದಾಗಿ ಆರ್ಥಿಕ ನಿಧಾನಗತಿ ಸಂಭವಿಸುತ್ತಿದ್ದು, ಉದ್ಯೋಗ ಇದ್ದವರೂ ನಿರುದ್ಯೋಗಿಗಳ ಸಾಲಿಗೆ ಸೇರುತ್ತಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಮನಿಸಿತು.

ಗ್ರಾಮೀಣ ಭಾರತ

ಬಿಜೆಪಿ ಮತ್ತು ಪ್ರಧಾನ ಮಂತ್ರಿ ಮೋದಿ ತಮ್ಮ ಸರಕಾರದಲ್ಲಿ ನಮ್ಮ ದೇಶದ ರೈತರೊಮದಿಗೆ ಹೊಸದೊಂದು ರೀತಿಯಲ್ಲಿ ವ್ಯವಹರಿಸಲಾಗುವುದು ಎಂದು ಆಶ್ವಾಸನೆ ನೀಡಿದ್ದರು. ಕೃಷಿ ವೆಚ್ಚಗಳು ಮತ್ತು ಬೆಲೆಗಳ ಆಯೋಗ ಲೆಕ್ಕ ಹಾಕಿದಂತೆ ಲಾಗುವಾಡುಗಳ ವೆಚ್ಚಗಳ ಒಂದೂವರೆ ಪಟ್ಟು ಕನಿಷ್ಟ ಬೆಂಬಲ ಬೆಲೆಗಳನ್ನು ಕೊಡುವುದಾಗಿ ಆಶ್ವಾಸನೆ ನೀಡಿದ್ದರು. ಇದನ್ನು ಈಡೇರಿಸಿಲ್ಲ. ಅಲ್ಲದೆ ಕೃಷಿ ಉತ್ಪನ್ನಗಳ ಮೇಲಿನ ಆಮದು ಸುಂಕಗಳಲ್ಲಿ ಕಡಿತ ಮುಂತಾದ ಈ ಸರಕಾರದ ಇತರ ಧೋರಣೆಗಳಿಂದಾಗಿ ರೈತರನ್ನು ತಮ್ಮ ಬೇಸಾಯದಿಂದ ತಮ್ಮ ಕುಟುಂಬದ ಅಗತ್ಯಗಳನ್ನು ಪೂರೈಸಲು ಮತ್ತು ಸಾಲಗಳನ್ನು ತೀರಿಸಲು ಆಗುತ್ತಿಲ್ಲ ಎಂಬುದು ಹೆಚ್ಚೆಚ್ಚು ಬಾಧಿಸುತ್ತಿದೆ. ಸಾಲಗಳ ಹೊರೆಗಳಿಂದಾಗಿ ರೈತರ ಆತ್ಮಹತ್ಯೆಗಳು ದೇಶದಲ್ಲಿ ಆತಂಕಕಾರಿಯಾಗಿ ಹೆಚ್ಚುತ್ತಿವೆ. ಸ್ವತಃ ಸರಕಾರವೇ, ಕಳೆದ ಮೂರು ವರ್ಷಗಳಲ್ಲಿ ಪ್ರತಿವರ್ಷ 12,000ಕ್ಕಿಂತ ಹೆಚ್ಚು ರೈತರು ಹತಾಶೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಸರ್ವೋಚ್ಚ ನ್ಯಾಯಾಲಯದ ಮುಂದೆ ಒಪ್ಪಿಕೊಂಡಿದೆ. ಅಂದರೆ ಈ ಮೂರು ವರ್ಷಗಳಲ್ಲಿ 36,000ಕ್ಕಿಂತಲೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಈ ಸರಕಾರ ಸಾಲಮನ್ನಾಗಳ ಮೂಲಕ ರೈತರಿಗೆ ತುಸುವಾದರೂ ಪರಿಹಾರ ಒದಗಿಸುವ ಬದಲು, ನಮ್ಮ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲಗಳನ್ನು ಪಡೆದು, ಅವನ್ನು ತೀರಿಸದೆ ಲೂಟಿ ಹೊಡೆಯುತ್ತಿರುವ ಶ್ರೀಮಂತ ಕಾರ್ಪೊರೇಟ್‌ಗಳಿಗೆ ಪರಿಹಾರ ಒದಗಿಸುವ ಬಗ್ಗೆಯೇ ಯೋಚಿಸುತ್ತಿದೆ. ಒಬ್ಬ ಬಡ ರೈತ ಸಾಲ ತೀರಿಸಲಾಗದಿದ್ದರೆ ಆತನ ಆಸ್ತಿ, ಜಾನುವಾರುಗಳನ್ನು ಮುಟ್ಟುಗೋಲು ಹಾಕಿಕೊಂಡು ದಂಡಿಸುತ್ತಿದ್ದರೆ, ಅತ್ತ ಈ ಶ್ರೀಮಂತ ಕಾರ್ಪೊರೇಟ್‌ಗಳು ಯಾವ ದಂಡನೆಯೂ ಇಲ್ಲದೆ ಹಾಯಾಗಿರುತ್ತವೆ.

ಇಂತಹ ಆರ್ಥಿಕ ನಿಧಾನಗತಿ, ಹೆಚ್ಚುತ್ತಿರುವ ನಿರುದ್ಯೋಗ, ಏರುತ್ತಿರುವ ಬೆಲೆಗಳು ಮತ್ತು ಕೃಷಿ ಸಂಕಟದ ಸಂದರ್ಭದಲ್ಲಿ ವಾರ್ಷಿಕೋತ್ಸವ ಆಚರಣೆಗೆ ಯಾವುದೇ ಕಾರಣ ಇಲ್ಲ.

ಮೋದಿ ಸರಕಾರ ಮೂರು ವರ್ಷಗಳನ್ನು ಪೂರೈಸಿರುವುದರ ಆಚರಣೆಯ ಪ್ರಚಾರವನ್ನು ಸಾರ್ವಜನಿಕ ವಲಯದ ಘಟಕಗಳು ತಮ್ಮ ಸಂಪನ್ಮೂಲಗಳಿಂದ ನಿಭಾಯಿಸಬೇಕು ಎಂದು ಸರಕಾರ ಒತ್ತಡ ಹಾಕುತ್ತಿದೆ. ಸಾರ್ವಜನಿಕ ವಲಯದ ತೈಲ ಕಂಪನಿಗಳು ಸರ್ದಾರ್ ಪಟೇಲ್ ಅವರ ದೈತ್ಯಗಾತ್ರದ ಪ್ರತಿಮೆ ನಿರ್ಮಿಸುವ ಪ್ರಧಾನ ಮಂತ್ರಿಗಳ ಮೆಚ್ಚಿನ ಪ್ರಾಜೆಕ್ಟ್‌ಗೆ ಅಪಾರ ಹಣವನ್ನು ಕಕ್ಕುವಂತೆ ಹೇಳಲಾಗಿದೆ.

ಇದು ವೈಯಕ್ತಿಕ ವೈಭವಕ್ಕಾಗಿ ಸಾರ್ವಜನಿಕ ಸಂಪನ್ಮೂಲಗಳ ನಗ್ನ ದುರುಪಯೋಗ ಮತ್ತು ಅತ್ಯುನ್ನತ ಮಟ್ಟದ ಭ್ರಷ್ಟಾಚಾರ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ರಾಷ್ಟ್ರಪತಿ/ಉಪರಾಷ್ಟ್ರಪತಿ ಚುನಾವಣೆಗಳು

ರಾಷ್ಟ್ರಪತಿ ಹುದ್ದೆಗೆ ಭಾರತೀಯ ಸಂವಿಧಾನವನ್ನು ರಕ್ಷಿಸುವ ಗುರುತರ ಹೊಣೆಯನ್ನು ನಿಭಾಯಿಸಬಲ್ಲ, ಅಕ್ಷುಣ್ಣ ಜಾತ್ಯತೀತ ಹಿನ್ನೆಲೆಯಿರುವ ವ್ಯಕ್ತಿಯೊಬ್ಬರನ್ನು ಪ್ರತಿಪಕ್ಷಗಳ ಜಂಟಿ ಸ್ಪರ್ಧಿಯಾಗಿ ನಿಲ್ಲಿಸಬೇಕು ಎಂಬ ತಿಳುವಳಿಕೆಯ ಆಧಾರದಲ್ಲಿ ಇತರ ಜಾತ್ಯತೀತ ಪ್ರತಿಪಕ್ಷಗಳೊಂದಿಗೆ ಸಿಪಿಐ(ಎಂ)ಚರ್ಚಿಸುತ್ತಿದೆ.

ಉಪರಾಷ್ಟ್ರಪತಿಗಳ ಹುದ್ದೆಗೂ, ಇದೇ ರೀತಿಯಲ್ಲಿ ನಮ್ಮ ಗಣತಂತ್ರದ ಸಂವಿಧಾನಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಒಬ್ಬ ಜಂಟಿ ಅಭ್ಯರ್ಥಿಯನ್ನು ಪ್ರತಿಪಕ್ಷಗಳ ಪರವಾಗಿ ಸ್ಪರ್ಧೆಗಿಳಿಸಬೇಕೆಂದು ಸಿಪಿಐ(ಎಂ) ಯತ್ನಿಸುತ್ತಿದೆ ಎಂದು ಪೊಲಿಟ್‌ಬ್ಯುರೊ ಹೇಳಿಕೆ ತಿಳಿಸಿದೆ.

ತ್ರಿಪುರ ವಿಧಾನಸಭಾ ಚುನಾವಣೆಗಳು

ಮುಂಬರುವ ಚುನಾವಣೆಗಳಿಗೆ ಸಿಪಿಐ(ಎಂ)ನ ತ್ರಿಪುರ ಘಟಕ ನಡೆಸುತ್ತಿರುವ ತಯ್ಯಾರಿಗಳ ಕುರಿತ ವರದಿಯನ್ನು ಪೊಲಿಟ್‌ಬ್ಯುರೊ ಆಲಿಸಿತು.

ಬಿಜೆಪಿ ಈಶಾನ್ಯ ಭಾರತದಲ್ಲಿ ಎಡಶಕ್ತಿಗಳ ಈ ಭದ್ರಕೋಟೆಯೊಳಕ್ಕೆ ನುಸುಳಲು ಭಾರೀ ಪ್ರಯತ್ನಗಳನ್ನು ನಡೆಸುತ್ತಿದೆ. ಅದು ಈಗಾಗಲೇ ಜನಗಳ ಪ್ರಜಾಸತ್ತಾತ್ಮಕ ಆಯ್ಕೆಯ ಮೇಲೆ ಪ್ರಭಾವ ಬೀರಲು ಗಮನಾರ್ಹ ರೀತಿಯಲ್ಲಿ ಸಂಪನ್ಮೂಲಗಳನ್ನು ಸುರಿಯಲಾರಂಭಿಸಿದೆ. ತನ್ನ ಎಂದಿನ ಚರ್ಯೆಯಂತೆ ಅದು ಕೋಮು ಮತ್ತು ಜನಾಂಗೀಯ ವೈಷಮ್ಯಗಳನ್ನು ಉದ್ರೇಕಿಸಲು ಪ್ರಯತ್ನಿಸುತ್ತಿದೆ, ಮತ್ತು ಚುನಾವಣಾ ಲಾಭಕ್ಕಾಗಿ ಕಾನೂನುಬಾಹಿರಗೊಂಡಿರುವ ಉಗ್ರಗಾಮಿ ಸಂಘಟನೆಗಳೊಂದಿಗೆ ಮೈತ್ರಿಗಳನ್ನು ಮಾಡಿಕೊಳ್ಳಲು ಪ್ರಯತ್ನಿಸುತ್ತಿದೆ.

ಪುಟ 14 ನೋಡಿ

ಕೇಸರಿ ಪಡೆಗಳ ಬೆದರಿಕೆ ತಂತಕ್ಕೆ ಜಗ್ಗುವುದಿಲ್ಲ



ಪೊಲಿಟ್‌ಬ್ಯುರೊ ಸಭೆಯ ನಂತರ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ನಡೆಸಲಿದ್ದ ಪತ್ರಿಕಾ ಸಮ್ಮೇಳನವನ್ನು ಛಿದ್ರಗೊಳಿಸಲು ಆರೆಸ್ಸೆಸ್‌ಗೆ ಸೇರಿದ ಸಂಘಟನೆಯ ಇಬ್ಬರು ಪ್ರಯತ್ನಿಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ತಾವು ಪತ್ರಕರ್ತರೆಂದು ಹೇಳಿಕೊಳ್ಳುತ್ತ ಸಭಾಂಗಣವನ್ನು ಪ್ರವೇಶಿಸಿದ ಇವರು ಸಿಪಿಐ(ಎಂ) ವಿರೋಧಿ ಘೋಷಣೆಗಳನ್ನು ಕೂಗಲಾರಂಭಿಸಿದರು. ಅಲ್ಲಿದ್ದ ಸಿಪಿಐ(ಎಂ) ಕಾರ್ಯಕರ್ತರು ತಕ್ಷಣ ಅವರನ್ನು ಹಿಡಿದುಕೊಂಡು ಅಲ್ಲಿ ಇದ್ದ ಪೋಲೀಸರಿಗೆ ಒಪ್ಪಿಸಿದರು.

ಇದು ಪ್ರತಿಪಕ್ಷಗಳನ್ನು ಬೆದರಿಸಿ ತಲೆಬಾಗುವಂ,ತೆ ಮಾಡುವ ಆರೆಸ್ಸೆಸ್‌ನ ವಿಧಾನ. ಇಂತಹ ತಂತ್ರಗಳು ಯಶಸ್ವಿಯಾಗಲು ಬಿಡುವುದಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಮಧ್ಯಪ್ರದೇಶದಲ್ಲಿ ರೈತರ ಮೇಲೆ ಗೋಲೀಬಾರ್ ಖಂಡನೆ ಮಹಾರಾಷ್ಟ್ರ ರೈತರ ಹೋರಾಟಕ್ಕೆ ಬೆಂಬಲ

ಪುಟ 14 ನೋಡಿ

ಮಧ್ಯಪ್ರದೇಶದ ಮಂದಸೌರ್‌ನಲ್ಲಿ ರೈತರ ಮೇಲೆ ಗೋಲೀಬಾರ್ ವಿರುದ್ಧ ದೇಶಾದ್ಯಂತ ಭಾರೀ ಖಂಡನೆಗಳು ಬಂದಿವೆ, ಪ್ರತಿಭಟನೆಗಳು ನಡೆದಿವೆ. ದೇಶದ ರಾಜಧಾನಿಯಲ್ಲಿ ಮಧ್ಯಪ್ರದೇಶ ಭವನದ ಎದುರು ಜಸಿವರಾಜ್ ಸಿಂಗ್ ಸರಕಾರದ ವಿರುದ್ಧ ಜೂನ್ 7ರಂದು ಪ್ರತಿಭಟನೆ ನಡೆಯಿತು. ಅಖಿಲ ಭಾರತ ಕಿಸಾನ್ ಸಭಾ, ಭೂಮಿ ಅಧಿಕಾರ್ ಆಂದೋಲನ್, ದಿಲ್ಲಿ ಸಾಲಿಡಾರಿಟಿ ಗ್ರುಪ್, ಜೆಎನ್‌ಯು ವಿದ್ಯಾರ್ಥಿ ಸಂಘ, ಜನವಾದಿ ಮಹಿಳಾ ಸಮಿತಿ, ದಲಿತ ಶೋಷಣ ಮುಕ್ತಿ ಮಂಚ್, ಅನ್ಹದ್ ಮತ್ತಿತರ ಸಂಘಟನೆಗಳ ಪ್ರತಿನಿಧಿಗಳು ಮತಪ್ರದರ್ಶನ ನಡೆಸಿದರು.

ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲಲ್, ಜಂಟಿ ಕಾರ್ಯದರ್ಶಿ ವಿಜೂ ಕೃಷ್ಣನ್, ಹಣಕಾಸು ಕಾರ್ಯದರ್ಶಿ ಪಿ.ಕೃಷ್ಣಪ್ರಸಾದ್, ಜೆಎನ್‌ಯು ವಿದ್ಯಾರ್ಥಿಸಂಗದ ಅಧ್ಯಕ್ಷ ಮೊಹಿತ್ ಪಾಂಡೆ, ಡಿಎಸ್‌ಜಿಯ ಶಾಂತಿ ಸ್ನಿಗ್ಧಾ ಮೊಹಂತಿ ಇವರಿದ್ದ ನಿಯೋಗವೊಮದು ಮಧ್ಯಪ್ರದೇಶ ಭವನದ ಮುಖ್ಯಸ್ಥರನ್ನು ಭೇಟಿ ಮಾಡಿ ಒಂದು ಪ್ರತಿಭಟನಾ ಪತ್ರವನ್ನು ಸಲ್ಲಿಸಿದರು.

ಮಧ್ಯಪ್ರದೇಶದಲ್ಲಿ ಎಲ್ಲೆಡೆ ಬಿಜೆಪಿ ಕಾರ್ಯಕರ್ತರ ಗೂಂಡಾಗಿರಿಯನ್ನು ಲೆಕ್ಕಿಸದೆ ಪ್ರತಿಭಟನೆಗಳು, ಮುಖ್ಯಮಂತ್ರಿಗಳ ಪ್ರತಿಕೃತಿ ದಹನ ಕಾರ್ಯಕ್ರಮಗಳು ನಡೆದವು.



ರೈತ–ವಿರೋಧಿ ಬಿಜೆಪಿ ಸರಕಾರದ ಮೂರನೇ ವಾಷಿಕೋತ್ಸವಕ್ಕೆ ಐಕ್ಯ ರೈತ ಹೋರಾಟಗಳ ಕೊಡುಗೆ! ಮಧ್ಯಪ್ರದೇಶದಲ್ಲಿ ರೈತರ ಮೇಲೆ ಗೋಲೀಬಾರ್ –ಜೂನ್ 9ರಂದು ದೇಶವ್ಯಾಪಿ ಸೌಹಾರ್ದ ಕಾಯಾಚರಣೆಗೆ ಎಐಕೆಎಸ್ ಕರೆ

–ಪುಟ 14 ನೋಡಿ

ಮಾತೆಂದರೆ ಇದು



" ಮಕ್ಕಳಿಗಾಗಿ ಆಸ್ತಿ ಮಾಡಿಡ ಬೇಡಿ.!
ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ.."

– ಡಾ. ಶಿವರಾಮ ಕಾರಂತ

ಮಳೆಗಾಗಿ ದೇವರ ಮೇಲೆ ಭಾರ ಹಾಕಿದ ಸರ್ಕಾರ


ಸಂಪಾದಕೀಯ

ಮಳೆಗಾಗಿ ಪ್ರಾರ್ಥಿಸಿ ಕೃಷ್ಣಾ ಮತ್ತು ಕಾವೇರಿ ಉಗಮ ಸ್ಥಾನದಲ್ಲಿ ಜಲಸಂಪನ್ಮೂಲ ಸಚಿವ ಎಂ.ಬಿ. ಪಾಟೀಲರು ಪರ್ಜನ್ಯ ಹೋಮ ನಡೆಸಿದ್ದಾರೆ. ಸರಕಾರವನ್ನೂ ಮುಖ್ಯಮಂತ್ರಿಗಳನ್ನು ಇಕ್ಕಟ್ಟಿಗೆ ಸಿಕ್ಕಿಸಿದ್ದಾರೆ, ತಮ್ಮ ಮತ್ತು ಅವರ ಗೋಸುಂಬೆತನವನ್ನು ಬಯಲುಗೊಳಿಸಿದ್ದಾರೆ ಕೂಡಾ.

ಉತ್ತಮ ಮುಂಗಾರು ಮಳೆಗೆ ಪ್ರಾರ್ಥಿಸಿ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಕಾವೇರಿ ನದಿಯ ಉಗಮ ಸ್ಥಳವಾದ ತಲಕಾವೇರಿಯಲ್ಲಿ ಜೂನ 3ರಂದು ಪರ್ಜನ್ಯ ಜಪ ನಡೆಸಿದರು. ತೀವ್ರ ವಿರೋಧದಿಂದ ಸರ್ಕಾರದ ಅನುದಾನದಲ್ಲಿ ನಡೆಸಲು ಉದ್ದೇಶಿಸಿದ್ದ ಪರ್ಜನ್ಯ ಹೋಮ ಕೈಬಿಟ್ಟು ಜಪ ಹಾಗೂ ವಿಶೇಷ ಪೂಜೆಯನ್ನಷ್ಟೇ ನಡೆಸಲಾಯಿತು. ಬೆಳಿಗ್ಗೆ 8ಕ್ಕೆ ನಡೆದ ಪೂಜೆಯಲ್ಲಿ ನಿಗಮದ ಕಾರ್ಯಪಾಲಕ ಎಂಜಿನಿಯರ್ ಬಸವರಾಜ್ ದಂಪತಿ ಸಮೇತ ಹಾಜರಿದ್ದರು. ಜಲಸಂಪನ್ಮೂಲ ಸಚಿವ ಎಂ.ಬಿ. ಪಾಟೀಲ ಮಾತ್ರ ಜಪದಲ್ಲಿ ಪಾಲ್ಗೊಂಡಿರಲಿಲ್ಲ. ಆದರೆ ಮಧ್ಯಾಹ್ನ 3ಕ್ಕೆ ಪ್ರತ್ಯೇಕವಾಗಿ ಭಾಗಮಂಡಲಕ್ಕೆ ಆಗಮಿಸಿದ ಸಚಿವ ಪಾಟೀಲ, ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮೀಜಿ ತ್ರಿವೇಣಿ ಸಂಗಮದಲ್ಲಿ ಬಾಗಿನ ಸಲ್ಲಿಸಿದರು. ಬಳಿಕ ಭಂಗಡೇಶ್ವರ ದೇವಸ್ಥಾನ ಹಾಗೂ ತಲಕಾವೇರಿಯಲ್ಲಿ ಪೂಜೆ ನೆರವೇರಿಸಿ, ವರುಣನ ಕೃಪೆಗೆ ಪ್ರಾರ್ಥಿಸಿದರು, ಎಂದು ವರದಿಯಾಗಿದೆ.

ಇದಕ್ಕಿಂತ ಮೊದಲು ಅವರು ಜೂನ್ 2 ರಂದು ಪತ್ನಿ ಆಶಾ, ಇಲಾಖೆಯ ಅಧಿಕಾರಿಗಳ ತಂಡದ ಜತೆ ಕೃಷ್ಣಾ ನದಿಯ ಉಗಮ ಸ್ಥಾನ ಮಹಾರಾಷ್ಟ್ರದ ಸಾತಾರಾ ಜಿಲ್ಲೆಯ ಮಹಾಬಳೇಶ್ವರ ದೇಗುಲದಲ್ಲಿ ಶುಕ್ರವಾರ ವಿಶೇಷ ಪೂಜೆ ಸಲ್ಲಿಸಿದರು. 'ಕೃಷ್ಣಾ?ಕಾವೇರಿ ರಾಜ್ಯದ ಜೀವ ನದಿಗಳು. ಈ ಹಿಂದೆ ತಲಕಾವೇರಿಯಲ್ಲಿ ಪೂಜೆ ಸಲ್ಲಿಸಿದ್ದೆ. ಇದೇ ಪ್ರಥಮ ಬಾರಿಗೆ ಕೃಷ್ಣೆಯ ಉಗಮ ಸ್ಥಾನದಲ್ಲಿ ಪೂಜೆ ಸಲ್ಲಿಸಿದ್ದು, ಉತ್ತಮ ಮಳೆ?ಬೆಳೆಗಾಗಿ ಪ್ರಾರ್ಥಿಸಿದೆ. ರಾಜ್ಯದಲ್ಲಿ ನಾಲ್ಕು ವರ್ಷಗಳಿಂದ ಮಳೆಯಿಲ್ಲ. ಮಳೆ ಆಗಲಿ ಎಂದು ನಡೆಸುವ ಪೂಜೆಗಾಗಿ ಸರ್ಕಾರದ ಒಂದು ರೂಪಾಯಿ ಹಣ ಖರ್ಚು ಮಾಡುವುದಿಲ್ಲ. ನಾನು ಮತ್ತು ನನ್ನ ಸ್ನೇಹಿತರು ಅದರ ಖರ್ಚು ಭರಿಸುತ್ತೇವೆ' ಎಂದು ಅವರು ತಮ್ಮ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ. ಮುಂದುವರೆದು 'ತಾಯಿಯ ಪೂಜೆಯನ್ನೇ ಮೌಢ್ಯ, ತಪ್ಪು ಎನ್ನುವುದಾದರೆ ಇಂತಹ ಪೂಜೆಯನ್ನು ಲಕ್ಷ ಬಾರಿ ಬೇಕಾದರೂ ಮಾಡುತ್ತೇನೆ. ಕೆಲವರು ಜೀವವಿಲ್ಲದ ಕಲ್ಲನ್ನೇ ಪೂಜಿಸುತ್ತಾರೆ. ಕೋಟ್ಯಂತರ ಜನರಿಗೆ ಆಧಾರವಾಗಿರುವ ಕಾವೇರಿಗೆ ಪೂಜೆ ಸಲ್ಲಿಸುವುದಕ್ಕೆ ಏಕೆ ವಿರೋಧ' ಎಂದು ತಮ್ಮ ಕ್ರಮವನ್ನು ಸಮರ್ಥಿಸಿಕೊಳ್ಳುತ್ತಾ ಪ್ರಶ್ನಿಸಿದ್ದಾರೆ. ವಿಧಾನಮಂಡಲದಲ್ಲಿ ಅವರ ಕ್ರಮವನ್ನು ವಿರೋಧ ಪಕ್ಷಗಳು ಪ್ರಶ್ನಿಸಿದಾಗಲೂ ಅವರು ತಮ್ಮ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ.

ಮುಂಗಾರು ಮಳೆಗಾಗಿ ಪ್ರಾರ್ಥಿಸಿ ಕೊಡಗಿನ ತಲಕಾವೇರಿಯಲ್ಲಿ ನಡೆಯುತ್ತಿರುವ ಪರ್ಜನ್ಯ ಹೋಮಕ್ಕೂ ಸರ್ಕಾರಕ್ಕೂ ಸಂಬಂಧ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು. "ಜಲಸಂಪನ್ಮೂಲ ಸಚಿವ ಎಂ.ಬಿ.ಪಾಟೀಲ ಅವರು ವೈಯಕ್ತಿಕವಾಗಿ ಪೂಜೆ ಮಾಡುತ್ತಿದ್ದಾರೆ. ನನಗೆ ಪ್ರಕೃತಿ ಮೇಲೆ ನಂಬಿಕೆ ಇದೆ. ಹೋಮ?ಪೂಜೆಗಳ ಮೇಲೆ ಅಲ್ಲ. ಎರಡು ವರ್ಷ ಭೀಕರ ಬರ ಪರಿಸ್ಥಿತಿ ನಿರ್ಮಾಣವಾಗಿ ರಾಜ್ಯವನ್ನು ಸಂಕಷ್ಟಕ್ಕೆ ದೂಡಿದೆ. ಈ ಬಾರಿ ಮುಂಗಾರು ಮಳೆ ಉತ್ತಮವಾಗಿ ಸುರಿಯುವ ನಿರೀಕ್ಷೆ ಇದೆ. ಇದು ಹುಸಿಯಾಗುವುದಿಲ್ಲ ಎಂಬುದು ನನ್ನ ನಂಬಿಕೆ" ಎಂದೂ ಹೇಳಿದರು. 'ವೈಯಕ್ತಿಕವಾಗಿ ನಾನು ಮೌಢ್ಯ ವಿರೋಧಿಸುತ್ತೇನೆ. ಪೂಜೆ, ಹೋಮ ಪಾಟೀಲರ ವೈಯಕ್ತಿಕ ವಿಷಯ. ಅವರು ಸಚಿವರಾಗಿ ಹೋಮ ಮಾಡಿಸಿಲ್ಲ. ಸ್ವಂತ ಹಣ ಖರ್ಚು ಮಾಡಿದ್ದಾರೆ. ತಲಕಾವೇರಿಯಲ್ಲಿ ಪೂಜೆ ಮಾಡಿಸಿದ್ದೇ ಅಪರಾಧ ಎಂದು ಬಿಂಬಿಸಬೇಡಿ. ಸಚಿವರು ಹೋಗಿದ್ದಾರೆ ಎಂಬ ಕಾರಣಕ್ಕೆ ಇಲಾಖೆ ಅಧಿಕಾರಿಗಳು ಹೋಗಿದ್ದಾರೆ' ಎಂದು ಮುಖ್ಯಮಂತ್ರಿ ಸದನದಲ್ಲಿ ಚರ್ಚೆಯ ಸಂದರ್ಭದಲ್ಲೂ ಸಮರ್ಥಿಸಿಕೊಂಡಿದ್ದಾರೆ. ಆದರೆ ಪರ್ಜನ್ಯ ಹೋಮಕ್ಕೂ ಸರ್ಕಾರಕ್ಕೂ ಸಂಬಂಧ ಇಲ್ಲ ಎಂದು ಅವರು ಹೇಳಿದ್ದು ಪೂರ್ಣ ನಿಜವಲ್ಲ. ಮೊದಲಿಗೆ ಹೋಮವನ್ನು ಸರಕಾರ ಮತ್ತು ನಿಗಮದಿಂದ ಅಧಿಕೃತವಾಗಿಯೇ ಯೋಜಿಸಲಾಗಿತ್ತು. ವಿರೋದ-ಬಂದ ಮೇಲಷ್ಟೇ ವೈಯಕ್ತಿಕವೆಂದು ರಾಗ ಬದಲಾಯಿಸಿದ್ದರು. "ಮೂಢನಂಬಿಕೆ ನಿಷೇಧ ಕಾಯ್ದೆ ವಿಧಾನಸಭೆಯಲ್ಲಿ ಮಂಡಿಸುತ್ತೇವೆ" ಎಂದು ಬಹುಶಃ ನೂರವೊಂದನೇ ಬಾರಿ ಆಶ್ವಾಸನೆ ಕೊಟ್ಟಿದ್ದಾರೆ! ಸಚಿವರು ಮತ್ತು ಅಧಿಕಾರಿಗಳು ಮೂಢನಂಬಿಕೆಯಲ್ಲಿ ಮುಳುಗೇಳುತ್ತಿರುವಾಗ ಕಾಯಿದೆ ಮಂಜೂರಾಗುವುದಾದರೂ, ಮಂಜೂರಾದರೆ ಜಾರಿಯಾಗುವುದಾದರೂ ಹೇಗೆ?




ಕೃಪೆ: ಪಿ. ಮಹಮ್ಮದ್, ವಿಜಯ ಕರ್ನಾಟಕ

ಸೆಕ್ಯುಲರ್ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ವೈಯಕ್ತಿಕವಾಗಿ ಸಹ ಇಂತಹ ಆಚರಣೆಗಳನ್ನು ನಡೆಸುವುದು. ತಪ್ಪು. ಅಸಂವೈಧಾನಿಕ ಕೂಡಾ. ಸಚಿವರು ಮತ್ತು ನಿಗಮದ ಅಧಿಕಾರಿಗಳೂ ಭಾಗವಹಿಸಿದ ಮೇಲೆ ಅದು ವೈಯಕ್ತಿಕ ಹೇಗಾಗುತ್ತದೆ. ವೈಜ್ಞಾನಿಕ ದೃಷ್ಟಿಕೋಣವನ್ನು ಬೆಳೆಸುವ ಪ್ರಸಾರ ಮಾಡುವ ಮೂಲಭೂತ ಕರ್ತವ್ಯ ಇರುವ ಸರಕಾರದ ಸಚಿವರೂ ಅಧಿಕಾರಿಗಳೂ ಈ ಆಚರಣೆ ಮೂಲಕ ತಮ್ಮ ಮೂಢನಂಭಿಕೆಯನ್ನು ಹರಡುತ್ತಿಲ್ಲವೇ? ಪರ್ಜನ್ಯ ಜಪ ಮಾಡಿದರೆ ಮಳೆ ಬರುತ್ತದೆ ಎಂದು ಅವರು ನಂಬಿದ್ದರೆ ಪ್ರತಿ ವರ್ಷ ಅವರು ಏಕೆ ಪರ್ಜನ್ಯ ಜಪ-ಹೋಮ ನಡೆಸುವುದಿಲ್ಲ? ಈ ಮೂಲಕ ಜನತೆಗೆ ತಪ್ಪು ಸಂದೇಶ ಕೊಡುತ್ತಿಲ್ಲವೇ? ಎಲ್ಲಾ ಸಾರ್ವಜನಿಕ ಉದ್ಘಾಟನಾ ಕಾರ್ಯಕ್ರಮಗಳಲ್ಲಿ ಪೂಜೆ ಮಾಡುವುದು ವಾಡಿಕೆಯಾಗಿರುವುದೂ ತಪ್ಪು.

ವಿರೋಧ ಪಕ್ಷ ಬಿಜೆಪಿ ಸಚಿವರನ್ನು ಈ ಕ್ರಮಕ್ಕೆ ಸರಕಾರವನ್ನು ತರಾಟೆಗೆ ತೆಗೆದುಕೊಂಡರೇನೋ ನಿಜ. ಆದರೆ ಯಥಾ ಪ್ರಕಾರ ಎರಡು ನಾಲಿಗೆಗಳಿಂದ ಮಾತನಾಡಿದ್ದಾರೆ. ಜಗದೀಶ ಶೆಟ್ಟರ್ "ಬರ ಪರಿಹಾರಕ್ಕೆ ಪಾಟೀಲರು ಪರ್ಜನ್ಯ ಹೋಮದ ಪರಿಹಾರ ಕಂಡುಕೊಂಡಿದ್ದಾರೆ. ಇದು ಮೂರ್ಖತನದ ಪರಮಾವಧಿ.. ವೈಯಕ್ತಿಕ ವಿಚಾರ ಎಂದು ಪಾಟೀಲರು ಹೇಳುವುದಾದರೆ ಸಚಿವ ಸ್ಥಾನದಿಂದ ಕಿತ್ತೊಗೆಯಿರಿ' ಎಂದು ಆಗ್ರಹಿಸಿದರು. ಆದರೆ ಅವರ ಅಧಿಕಾರದ ಅವಧಿಯಲ್ಲಿ ಅವರೂ ಬಾಗಿನ ಪೂಜೆಗಳನ್ನು ಮಾಡಿದ್ದಾರೆ. ಬಿಜೆಪಿಯ ಸಿ.ಟಿ. ರವಿ, 'ಪಾಟೀಲರು ಪರ್ಜನ್ಯ ಹೋಮ ಮಾಡಿದ್ದಕ್ಕೆ ನನ್ನ ಬೆಂಬಲವಿದೆ. ನಮ್ಮನ್ನು ಮೀರಿದ ಅಲೌಕಿಕವಾದ ಶಕ್ತಿ ಇದೆ. ಅದನ್ನು ನಾನು ನಂಬುತ್ತೇನೆ' ಎಂದಿದ್ದಾರೆ!

ಮಳೆಗೆ ದೇವರ ಮೇಲೆ ಭಾರ ಹಾಕಿ ಕೂತ ಸರಕಾರ ಜನತೆಯ ಯಾವುದೇ ಸಮಸ್ಯೆಗಳಿಗೆ ವೈಜ್ಞಾನಿಕವಾಗಿ ಪರಿಹಾರ ಹುಡುಕಲು ಪ್ರಯತ್ನಿಸುತ್ತದೆ ಎಂದು ನಂಬುವುದು ಹೇಗೆ?

ಮಧ್ಯಪ್ರದೇಶ ರೈತರ ಮೇಲೆ ದಾಳಿ-ಕೊಲೆ: ರೈತ ಸಂಘ ಖಂಡನೆ



ಮಧ್ಯಪ್ರದೇಶ ರಾಜ್ಯದ ಮಂಡಸುರ್‌ನ ಪಿಪಲಿಯ ಮಂಡಿ ಪ್ರದೇಶದಲ್ಲಿ ಶಾಂತ ರೀತಿಯ ಚಳುವಳಿಯಲ್ಲಿ ತೊಡಗಿದ್ದ ರೈತರ ಮೇಲೆ, ಮಧ್ಯಪ್ರದೇಶದ ಸರಕಾರ ಮತ್ತು ಅಲ್ಲಿನ ಪೋಲೀಸರು ಗೋಲಿಬಾರ್ ನಡೆಸಿ 5 ಜನ ರೈತರನ್ನು ಕೊಂದು ಹಾಕಿರುವ ಮತ್ತು ನೂರಾರು ಜನರನ್ನು ಗಾಯಗೊಳ್ಳುವಂತೆ ಮಾಡಿರುವ ಬರ್ಬರ ಧಾಳಿಯನ್ನು ಕರ್ನಾಟಕ ಪ್ರಾಂತ ರೈತ ಸಂಘ ಬಲವಾಗಿ ಖಂಡಿಸುತ್ತದೆ.

ರೈತರ ಸಾಲ ಮನ್ನಾ ಮಾಡಬೇಕು ಮತ್ತು ಈರುಳ್ಳಿ ಮತ್ತಿತರೆ ಬೆಳೆಗಳಿಗೆ ನ್ಯಾಯಯುತ ಬೆಲೆಗಳನ್ನು ನೀಡಬೇಕು ಹಾಗೂ ಬೆಳೆನಷ್ಟಕ್ಕೆ ಸೂಕ್ತ ಪರಿಹಾರಗಳನ್ನು ಕೊಡಬೇಕೆಂದು ಒತ್ತಾಯಿಸಿ, ಜೂನ್ 1, 2017ರಿಂದಲೇ ದೊಡ್ಡ ಪ್ರಮಾಣದ ಪ್ರತಿಭಟನೆಯಲ್ಲಿ ತೊಡಗಿದ್ದರು. ರಾಜ್ಯದ ಬಿಜೆಪಿ ಸರಕಾರದ ಮುಖ್ಯಮಂತ್ರಿಗಳಾದ ಶಿವರಾಜ್‌ಸಿಂಗ್ ಚೌಹಾಣ್ ಅವರನ್ನು ಕರೆದು ಸೌಹಾರ್ಧ ಮಾತುಕತೆ ನಡೆಸಿ, ಅವರ ನ್ಯಾಯಯುತ ಹಕ್ಕೊತ್ತಾಯಗಳ ಪರಿಹಾರಕ್ಕೆ ಮುಂದಾಗದೇ ಹೋದದ್ದರಿಂದ, ರೈತರು ಕಳೆದ ಮೂರು-ನಾಲ್ಕು ದಿನಗಳಿಂದ ರಸ್ತೆತಡೆಯನ್ನು ನಡೆಸಿದ್ದರು. ಆದಾಗಲೂ ರೈತರ ಜೊತೆ ಮಾತನಾಡದೇ ಈ ರೀತಿ ಹೇಯ ದಾಳಿಯನ್ನು ನಡೆಸಲಾಗಿದೆ.

ಕಳೆದ 2014ರ ಲೋಕಸಭಾ ಚುನಾವಣೆಯಲ್ಲಿ ಪ್ರಧಾನ ಮಂತ್ರಿಗಳು ಹಾಗೂ ಬಿಜೆಪಿ ಮತ್ತು ಸಂಘ ಪರಿವಾರ ತಾನು ಅಧಿಕಾರಕ್ಕೆ ಬಂದ-ರೇ ರೈತರಿಗೆ ಅವರು ಬೆಳೆದ ಬೆಳೆಗೆ ಆಗಿರುವ, ಖರ್ಚಿನ ಅರ್ಧದಷ್ಟು ಲಾಭಾಂಶ ಸೇರಿಸಿ ಬೆಲೆ ನಿಗದಿಸಿ ನೀಡುವ ಮೂಲಕ ರೈತರಿಗೆ ನೆರವು ನೀಡಲಾಗುವುದೆಂದು ಭರವಸೆ ನೀಡಿತ್ತು. ಈಗ ಅದನ್ನು ನಿರಾಕರಿಸುತ್ತಿದೆ. ಕೇಂದ್ರ ಹಾಗೂ ಮದ್ಯ ಪ್ರದೇಶ ಸರಕಾರದ ರೈತ ಹಾಗೂ ಜನವಿರೋಧಿ ನೀತಿಗಳಿಂದಾಗಿ ನ್ಯಾಯಯುತ ಮಾತ್ರವಲ್ಲಾ ಕನಿಷ್ಠ ಹೂಡಲಾದ ಖರ್ಚಿನಷ್ಟು ಬೆಲೆ ನಿಗದಿಸಿ ರೈತರಿಗೆ ದೊರೆಯುವಂತೆ ಮಾಡದಿರುವುದು ಸ್ಪಷ್ಟವಿದೆ. ಇದೀಗ ಚಳುವಳಿಯನ್ನು ದಮನ ಮಾಡಲು ಮುಂದಾಗಿದೆ.

ಕೂಡಲೇ ಈ ಬರ್ಬರ ಹತ್ಯೆಗ ಕಾರಣವಾದ ಪೋಲೀಸ್ ಅಧಿಕಾರ ವರ್ಗದವರನ್ನು ತಕ್ಷಣವೇ ಅಮಾನತಿನಲ್ಲಿಟ್ಟು ಕಾನೂನಿನ ಕ್ರಮ ವಹಿಸಬೇಕು ಮತ್ತು ಹುತಾತ್ಮ ರೈತ ಕುಟುಂಬಗಳಿಗೆ ಕನಿಷ್ಠ 10 ಲಕ್ಷ ಪರಿಹಾರವನ್ನು ನೀಡಬೇಕು. ಪ್ರತಿ ಕುಟುಂಬಕ್ಕೆ ತಲಾ ಒಂದು ಸರಕಾರಿ ನೌಕರಿಯನ್ನು ನೀಡಬೇಕು ಮತ್ತು ಗಾಯಗೊಂಡ, ರೈತರಿಗೆ ತಲಾ 2 ಲಕ್ಷ ರೂಪಾಯಿಗಳನ್ನು ಪರಿಹಾರವಾಗಿ ನೀಡಬೇಕು ಮತ್ತು ರೈತರ ಹಕ್ಕೊತ್ತಾಯಗಳನ್ನು ಪರಿಹರಿಸಲು ಕ್ರಮವಹಿಸಬೆಕೆಂದು ಮುಖ್ಯ ಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ರವರನ್ನು ಮತ್ತು ಸೂಕ್ತ ಕ್ರಮವಹಿಸಿ ನೆರವಾಗುವಂತೆ ಪ್ರಧಾನ ಮಂತ್ರಿಗಳನ್ನು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಒತ್ತಾಯಿಸುತ್ತದೆ.

ಕುಂದಾಪುರ ಪುರಸಭೆ ವ್ಯಾಪ್ತಿಯ ಒಳಚರಂಡಿ ಯೋಜನೆ – ಸಮಸ್ಯೆ ಪರಿಹರಿಸಲು ಸಹಾಯಕ ಕಮಿಶನ್ –ಶಿಲ್ಪನಾಗ ಅವರಿಗೆ ಮನವಿ

ಕುಂದಾಪುರ ಪುರಸಭೆ ವ್ಯಾಪ್ತಿಯೊಳಗೆ ಉದ್ದೇಶಿತ ಒಳಚರಂಡಿ ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದ್ದು, ಕುಂದಾಪುರ ಕಸಬಾ, ವಡೇರ ಹೋಬಳಿ ಪ್ರದೇಶದಲ್ಲಿ ಈ ಯೋಜನೆಯಿಂದಾಗಿ ಫಲವತ್ತಾದ ಕೃಷಿ ಭೂಮಿಯಲ್ಲಿ ಪೈಪ್‌ಲೈನ್ ಹಾದು ಹೋಗುವುದಲ್ಲದೆ ಅಂತಿಮವಾಗಿ ಸ್ಥಳೀಯ ನಿವಾಸಿಗಳು ವಾಸವಾಗಿರುವ ಪ್ರದೇಶದಲ್ಲೇ ಶುದ್ಧಿಕರಣ ಘಟಕ ಮಾಡುವುದರಿಂದ ಈ ಪ್ರದೇಶದ ನಾಗರಿಕರಿಗೆ ಆತಂಕವುಂಟಾಗಿದೆ.

ಈ ಹಿನ್ನಲೆಯಲ್ಲಿ ಕುಂದಾಪುರ ಕೃಷಿ ಭೂಮಿ ಉಳಿಸಿ ಹೋರಾಟ ಸಮಿತಿ ನೇತೃತ್ವದಲ್ಲಿ ಒಳಚರಂಡಿ ಯೋಜನೆಯ ಕಾಮಗಾರಿಯಿಂದಾಗಿ ಉಂಟಾಗುವ ಸಮಸ್ಯೆಗಳ ಪರಿಹಾರಕ್ಕಾಗಿ ಒತ್ತಾಯಿಸಿ, ಕುಂದಾಪುರ ಸಹಾಯಕ ಕಮೀಶನ್‌ರ್ ಶಿಲ್ಪನಾಗ್‌ರವರಿಗೆ ಸಾಮೂಹಿಕವಾಗಿ ಮನವಿ ಅರ್ಪಿಸಲಾಯಿತು.

ಮನವಿ ಸ್ವೀಕರಿಸಿದ ಸಹಾಯಕ ಕಮೀಶನ್‌ರವರು ಕೃಷಿ ಭೂಮಿ ಉಳಿಸಿ ಹೋರಾಟ ಸಮಿತಿಯ ನಿಯೋಗದ ಅಹವಾಲುಗಳನ್ನು ಸಾವಧಾನದಿಂದ ಆಲಿಸಿ, ಈ ಕೂಡಲೇ ಒಳಚರಂಡಿ ಯೋಜನೆ ಕಾಮಗಾರಿಗೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು, ಪುರಸಭಾ ಮುಖ್ಯಾಧಿಕಾರಿ ಸೇರಿದಂತೆ ಹೋರಾಟ ಸಮಿತಿಯ ಮುಖಂಡರೊಡನೆ ಜಂಟಿ ಸಭೆ ಜರಗಿಸಲಾಗುವುದು. ಸಮಸ್ಯೆಗಳ ಬಗ್ಗೆ ಒಮ್ಮತದ ಸೂಕ್ತ ಪರಿಹಾರ ಕಂಡು ಕೊಳ್ಳಲಾಗುವುದು. ಅಲ್ಲಿಯವರೆಗೆ ಯೋಜನೆಯ ಕಾಮಗಾರಿ ಕೆಲಸ ನಿಲ್ಲಿಸಲಾಗುವುದು ಎಂದು ಹೇಳಿದರು.

ಕೃಷಿ ಭೂಮಿ ಉಳಿಸಿ ಹೋರಾಟ ಸಮಿತಿಯ ನಿಯೋಗದಲ್ಲಿ ಪುರಸಭಾ ಮಾಜಿ ಅ ಧ್ಯಕ್ಷ ವಿ. ನರಸಿಂಹ, ಪುರಸಭೆ ಸದಸ್ಯೆ ಗುಣರತ್ನ, ರಾಘವೇಂದ್ರ ದೇವಾಡಿಗ, ಶಿವ ಮೆಂಡನ್, ನಿತ್ಯಾನಂದ ಹವಾಲ್ದಾರ್, ಎಚ್. ನರಸಿಂಹ, ಸುರೇಶ ಕಲ್ಲಾಗರ, ಮಹಾಬಲ ವಡೇರ ಹೋಬಳಿ, ಕೃಷ್ಣ ಪೂಜಾರಿ, ರಾಜೇಶ್ ವಡೇರ ಹೋಬಳಿ, ಪುಂಡಲೀಕ, ವಾಸುದೇವ, ವಿನೋಧ, ವೆಂಕಟೇಶ ಕೋಣಿ, ಮೊದಲಾದವರು ಉಪಸ್ಥಿತರಿದ್ದರು.

ವರದಿ : ವೆಂಕಟೇಶ ಕೋಣಿ

ಬೇಲ್ ರಿಜೇಕ್ಟ್

ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲ್ಲೂಕಿನ ಅಂಗನವಾಡಿ ಕಾರ್ಯಕರ್ತೆಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣ ದ ಎಲ್ಲಾ 10 ಆರೋಪಿಗಳಿಗೂ ಬೇಲ್ ರಿಜೇಕ್ಟ್ ಆಗಿ ಆರೋಪಿಗಳ ಬಂದನವಾಗಿದೆ 5 ತಿಂಗಳ ಸತತ ಹೋರಾಟ ಕ್ಕೆ ಸಿಕ್ಕ ಜಯ ಇದಾಗಿದೆ ಹೋರಾಟ ಕ್ಕೆ ಎಂದೂ ಸೋಲಿಲ್ಲ ಎಂದು ಸಾಬೀತಾಗಿದೆ.

ಹೊರಗುತ್ತಿಗೆ ನೌಕರರ ಎರಡು ಪ್ರತಿಭಟನೆಗಳು:

ಬೇಡಿಕೆ ಈಡೇರಿಕೆ ಭರವಸೆಯೊಂದಿಗೆ ಮಂಗಳೂರು ವಿ.ವಿ. ಗುತ್ತಿಗೆ ಕಾರ್ಮಿಕರ ಧರಣಿ ಅಂತ್ಯ:

ಮಂಗಳೂರು ವಿಶ್ವವಿದ್ಯಾನಿಲಯವು ಕೆನಾನ್ ಎಂಬ ಗುತ್ತಿಗೆ ಸಂಸ್ಥೆಯ ಮೂಲಕ ನೇಮಿಸಿಕೊಂಡಿದ್ದ ಸ್ವಚ್ಛತಾ ಕಾರ್ಮಿಕರು, ವೃಂದಾವನ ಕಾರ್ಮಿಕರು ಹಾಗೂ ಪಹರೇದಾರ ಕಾರ್ಮಿಕರಿಗೆ ಆ ಸಂಸ್ಥೆಯು ಕಳೆದೆರಡು ತಿಂಗಳಿನಿಂದ ವೇತನ ಬಾಕಿ ಇರಿಸಿಕೊಂಡಿದ್ದಲ್ಲದೆ ಪ್ರಾವಿಡೆಂಟ್ ಫಂಡ್, ಇಎಸ್‌ಐ ಸಹಿತ ಯಾವುದೇ ಸವಲತ್ತನ್ನು ನೀಡದಿರುವುದನ್ನು ಖಂಡಿಸಿ ಸಿಐಟಿಯು, ದಲಿತ ಸಂಘಟನೆಗಳ ಒಕ್ಕೂಟ ನೇತೃತ್ವದಲ್ಲಿ ಕಾರ್ಮಿಕರು ವಾರದ ಹಿಂದೆ ಒಂದು ದಿನ ಪ್ರತಿಭಟನೆ ನಡೆಸಿದಾಗ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ತಾವು ಸಮಸ್ಯೆಗಳ ಬಗ್ಗೆ ಪರಿಶೀಲಿಸುವುದಾಗಿ ತಿಳಿಸಿದ್ದರೂ ಏನೂ ಕ್ರಮ ನಡೆಯದೆ ಇರುವ ಹಿನ್ನೆಲೆಯಲ್ಲಿ ಜೂನ್ 5 ರಿಂದ ಅನಿರ್ದಿಷ್ಟ ಕಾಲದ ಧರಣಿ ಸತ್ಯಾಗ್ರಹವನ್ನು ಕಾರ್ಮಿಕರು ಹಮ್ಮಿಕೊಂಡಿದ್ದರು.

ಪ್ರತಿಭಟನೆ ಎರಡನೇ ದಿನಕ್ಕೆ ತಲುಪಿದಾಗ ಕೆನಾನ್ ಸಂಸ್ಥೆಯ ಪ್ರತಿನಿಧಿ, ಕಾರ್ಮಿಕ ಇಲಾಖೆಯ ಜಂಟಿ ಆಯುಕ್ತ ಹಾಗೂ ಜಿಲ್ಲಾ ಅಧಿಕಾರಿ ಮತ್ತು ಮಂಗಳೂರು ವಿ.ವಿ.ಉಪಕುಲಪತಿ ಪ್ರತಿಭಟನಾ ಧರಣಿ ಸ್ಥಳಕ್ಕೆ ಭೇಟಿ ನೀಡಿ ಕಾರ್ಮಿಕ ಸಂಘಗಳ ಮುಖಂಡರೊಡನೆ ಮಾತುಕತೆ ನಡೆಸಿದರು. ಗುತ್ತಿಗೆ ಕಾರ್ಮಿಕರಿಗೆ ವಿಶ್ವವಿದ್ಯಾನಿಲಯದಿಂದಲೇ ವೇತನ ನಿಡುವ ಸಂಬಂಧ ಉನ್ನತ ಶಿಕ್ಷಣ ಸಚಿವರಲ್ಲಿ ಚರ್ಚಿಸಿದ್ದು, ಸಚಿವಾಲಯದಿಂದ ಒಪ್ಪಿಗೆ ಸಿಕ್ಕರೆ ವಿಶ್ವವಿದ್ಯಾನಿಲಯದಿಂದಲೇ ಕಾರ್ಮಿಕರಿಗೆ ವೇತನ ನೀಡುವ ವ್ಯವಸ್ಥೆ ಮಾಡುವುದಾಗಿಯೂ, ಹಂತ ಹಂತವಾಗಿ ಬೇಡಿಕೆ ಈಡೇರಿಸುವುದಾಗಿಯೂ ಉಪಕುಲಪತಿ ಭರವಸೆ ನೀಡಿದ ಮೇರೆಗೆ, ಧರಣಿ ಸತ್ಯಾಗ್ರಹವನ್ನು ಹಿಂದೆಗೆಯಲಾಯಿತು.

ಸಿಐಟಿಯು ದ.ಕ.ಜಿಲ್ಲಾ ಸಮಿತಿ ಉಪಾಧ್ಯಕ್ಷೆ ಪದ್ಮಾವತಿ ಶೆಟ್ಟಿ, ದಲಿತ ಸಂಘಟನೆಗಳ ಫೆಡರೇಶನಿನ ಅಶೋಕ ಕೊಂಚಾಡಿ ಮಾತುಕತೆಯಲ್ಲಿ ಭಾಗವಹಿಸಿದ್ದರು. ಉಳ್ಳಾಲ ವಲಯ ಸಿಪಿಐ(ಎಂ) ಕಾರ್ಯದರ್ಶಿ ಕೃಷ್ಣಪ್ಪ ಸಾಲಿಯಾನ್ ಪ್ರತಿಭಟನಾ ಸ್ಥಳಕ್ಕೆ ಬಂದು ಕಾರ್ಮಿಕರಿಗೆ ಬೆಂಬಲ ನೀಡಿದ್ದರು. ಗುತ್ತಿಗೆ ಕಾರ್ಮಿಕರ ಪ್ರತಿಭಟನೆಗೆ ಸಿಐಟಿಯು ವತಿಯಿಂದ ಪದ್ಮಾವತಿ ಶೆಟ್ಟಿ, ಜಯಂತ ನಾಯ್ಕ್ ನೇತೃತ್ವ ನೀಡಿದ್ದರು.

ಬೀಡಿ ಕಾರ್ಮಿಕರಿಗೆ ಪರ್ಯಾಯ ಉದ್ಯೋಗಕ್ಕಾಗಿ ಹೋರಾಡಲು ಕೆ.ಆರ್. ಶ್ರೀಯಾನ್ ಕರೆ

ಬೀಡಿ ಉದ್ಯಮ ಹಿಂದೆ ಡಿಪೋಗಳಲ್ಲಿ ನಡೆ–ಯುತ್ತಿದ್ದು, 1950 ರಿಂದ ಮೊದಲೇ ಈ ಬೀಡಿ ಕಾರ್ಮಿಕರು ಸಂಘಟನೆ ಕಟ್ಟಿ ಸವಲತ್ತುಗಳಿಗಾಗಿ ಹೋರಾಡುತ್ತಿದ್ದರು. ಈ ಹೋರಾಟಗಳನ್ನು ದಾರಿ ತಪ್ಪಿಸಲು ಮಾಲಿಕರು ಗುತ್ತಿಗೆ ಪದ್ಧತಿಯನ್ನು ಜಾರಿಗೆ ತಂದರು. ಮನೆಮನೆಗಳಲ್ಲಿ ಮಹಿಳೆಯರ ಮೂಲಕ ಬೀಡಿ ಕಟ್ಟಿಸಲಾಯಿತು. ಆದರೆ ಈ ಮಹಿಳಾ ಕಾರ್ಮಿಕರು ಸಂಘಟಿತರಾಗಿ, ಕಾರ್ಖಾನೆ ಕಾರ್ಮಿಕರಿಗೆ ಸಿಗುತ್ತಿದ್ದ ಕೂಲಿ, ತುಟ್ಟಿಭತ್ತೆ, ಪ್ರಾವಿಡೆಂಟ್ ಫಂಡ್, ಹೆರಿಗೆ ಭತ್ತೆ ಇತ್ಯಾದಿ ಕಾರ್ಮಿಕ ಸವಲತ್ತುಗಳನ್ನು ಪಡೆಯುವಂಥ ಕಾನೂನುಗಳನ್ನು ಜಾರಿ ಮಾಡುವಂಥಾದುದು, ಮಹಿಳಾ ಕಾರ್ಮಿಕರ ಹೋರಾಟದ ಗೆಲುವು ಎಂಬುದಾಗಿ ಹಿರಿಯ ರೈತ ಕಾರ್ಮಿಕ ಮುಖಂಡ ಕೆ.ಆರ್.ಶ್ರೀಯಾನ್ ಅವರು ಮಂಗಳೂರಿನ ಸರಕಾರಿ ನೌಕರರ ಸಂಘದ ಸಭಾಂಗಣದಲ್ಲಿ ಜೂನ್ 6 ರಂದು ನಡೆದ ಎಸ್.ಕೆ.ಬೀಡಿ ವರ್ಕರ್ಸ್ ಫೆಡರೇಶನಿನ (ಸಿಐಟಿಯು) 5ನೇ ಜಿಲ್ಲಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ್ದರು.

ಆದರೆ ಇವತ್ತು 2001 ರಿಂದ ಕೇಂದ್ರ ಸರಕಾರ ಧೂಮಪಾನ ನಿಷೇಧ ಕಾಯಿದೆಯನ್ನು ಜಾರಿ ಮಾಡುತ್ತಿದೆ. ಕಳೆದ 3 ವರ್ಷಗಳಿಂದ ಕೋಟ್ಪಾ ಕಾಯಿದೆಗೆ ತಂದಿರುವ ತಿದ್ದುಪಡಿಯಿಂದಾಗಿ ತಂಬಾಕು ಬಳಸುವ ಉದ್ದಿಮೆಗೆ ಸಾಕಷ್ಟು ನಿರ್ಬಂಧಗಳನ್ನು ತಂದು ಅನುಷ್ಠಾನಗೊಳಿಸಲಾಗುತ್ತಿದೆ. ಇದರಿಂದಾಗಿ ಬೀಡಿ ಉದ್ದಿಮೆ ಬಿಕ್ಕಟ್ಟಿಗೆ ಒಳಗಾಗಿದೆ. ಕಾರ್ಮಿಕರು ಆತಂಕಿತರಾಗಿದ್ದು, ಅನೇಕರು ಈಗಾಗಲೇ ಬೀಡಿ ಕಟ್ಟುವುದನ್ನು ಬಿಟ್ಟಿದ್ದಾರೆ. ಜಿಲ್ಲೆಯ ಬೀಡಿ ಚಳುವಳಿ ಜಿಲ್ಲೆಯ ಕಾರ್ಮಿಕ ಚಳುವಳಿಗಳ ಆಧಾರ ಸ್ಥಂಭ. ಬೀಡಿ ಕಾರ್ಮಿಕರು ಕಂಗಾಲಾಗದೆ, ಸರಕಾರದ ಮೇಲೆ ಒತ್ತಡ ತಂದು ಬೀಡಿ ಉದ್ಯಮವನ್ನು ಉಳಿಸಿಕೊಳ್ಳಬೇಕಾಗಿದೆ. ಬೀಡಿ ಉದ್ದಿಮೆಯ ನಾಶದಿಂದ ಉದ್ಯೋಗ ಕಳೆದುಕೊಳ್ಳುತ್ತಿರುವ ಕಾರ್ಮಿಕರಿಗೆ ಪರ್ಯಾಯ ಉದ್ಯೋಗ ಒದಗಿಸಲು ಆಗ್ರಹಿಸಿ ಈ ಬಗ್ಗೆ ತೀವ್ರವಾಗಿ ಹೋರಾಡಬೇಕಾಗಿದೆ ಎಂದು ಅವರು ಕರೆ ನೀಡಿದರು.

ಆದರೆ ಇಂದು ಕಾರ್ಮಿಕರು ಕೇಂದ್ರ ಸರಕಾರವನ್ನು ನಂಬುವಂತಿಲ್ಲ. ಕಾರಣ ಅದು ದೇಶೀಯ ಉದ್ದಿಮೆ ಪ್ರೋತ್ಸಾಹ ಕೊಡುತ್ತಿಲ್ಲ. ವಿದೇಶೀಯರನ್ನು ಆಹ್ವಾನಿಸುತ್ತಿದ್ದಾರೆ. ಕಾರ್ಮಿಕರು ದೀರ್ಘ ಹೋರಾಟದಿಂದ ಪಡೆದುಕೊಂಡ ಸವಲತ್ತುಗಳನ್ನು ಈಗಿನ ಕೇಂದ್ರ ಸರಕಾರ ಒಂದೊಂದೇ ತೆಗೆದುಹಾಕುತ್ತಿದೆ. ಇದು ಕಾರ್ಮಿಕ ಪರವಾದ ಸರಕಾರವಲ್ಲ. ಪ್ರಾವಿಡೆಂಟ್ ಫಂಡ್‌ನ ರೂ.6000 ಕೋಟಿ ಮೊಬಲಗನ್ನು ಷೇರು ಮಾರುಕಟ್ಟೆಯಲ್ಲಿ ಹೂಡಲಾಗುತ್ತಿದೆ. ದುಡಿಯುವ ಜನರ ಹಕ್ಕುಗಳ ಪ್ರಜಾಪ್ರಭುತ್ವಾತ್ಮಕ ಹಕ್ಕುಗಳ ದಮನ ನಡೆಯುತ್ತಿದೆ. ಕೋಮುವಾದಿ ಹಿಂದುತ್ವವನ್ನು ಜಾರಿ ಮಾಡುತ್ತಾ ಕಾರ್ಮಿಕರ ನಡುವೆ ಒಗ್ಗಟ್ಟನ್ನು ಮುರಿಯಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಕಾರ್ಮಿಕ ವರ್ಗ ಕೆಂಬಾವುಟದಡಿಯಲ್ಲಿ ನಡೆಯುವ ಹೋರಾಟದಲ್ಲಿ ಪಾಲ್ಗೊಳ್ಳುವ ಮೂಲಕ ಜನತೆಯ ಹಕ್ಕುಗಳನ್ನು ಹೋರಾಡುವ ಹಕ್ಕುಗಳನ್ನು ಕೂಡಾ ರಕ್ಷಿಸಬೇಕಾಗಿದೆ ಎಂದು ಕೆ.ಆರ್.ಶ್ರೀಯಾನ್ ಕರೆ ನೀಡಿದರು.

ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಸಿಐಟಿಯು ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿ, ಇವತ್ತು ದ.ಕ. ಜಿಲ್ಲೆಯ ಆರ್ಥಿಕ ಚಕ್ರ ತಿರುಗುತ್ತಿರುವುದು ಬೀಡಿ ಕಾರ್ಮಿಕರಿಂದ. ಇದರ ಬಗ್ಗೆ ಬೇರೆ ಯಾರೂ ಮಾತನಾಡುತ್ತಿಲ್ಲ. ದೊಡ್ಡ ಸಂಖ್ಯೆಯಲ್ಲಿರುವ ಬೀಡಿ ಕಾರ್ಮಿಕರಿಗೇನೇ ತಮಗೆ ಅನ್ನ ಕೊಡುವ ಉದ್ಯಮವನ್ನು ಉಳಿಸುವ ಜವಾಬ್ದಾರಿ ಇದೆ ಎಂದರು.


ಫೆಡರೇಶನಿನ ಹಿರಿಯ ಮುಖಂಡರಾದ ಯು.ಬಿ.ಲೋಕಯ್ಯ ಅವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಬೀಡಿ ಫೆಡರೇಶನಿನ ಪ್ರಧಾನ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ, ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿ, ಫೆಡರೇಶನಿನ ಜಿಲ್ಲಾ ಪದಾಧಿಕಾರಿಗಳಾದ ಯು.ಜಯಂತ ನಾಯ್ಕ್, ಸಂಜೀವ ಬಂಗೇರ, ಜಯಂತಿ ಶೆಟ್ಟಿ, ರಮಣಿ ಮೂಡಬಿದರೆ, ಭಾರತಿ ಬೋಳಾರ್, ಸದಾಶಿವದಾಸ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಜಯಂತಿ ಬಿ.ಶೆಟ್ಟಿ ಸ್ವಾಗತಿಸಿದರು. ಜೆ.ಬಾಲಕೃಷ್ಣ ಶೆಟ್ಟಿ ವಂದಿಸಿದರು.

– ಜೆ. ಬಾಲಕೃಷ್ಣ ಶೆಟ್ಟಿ

ಈ ವಾರ ಚರಿತ್ರೆಯಲ್ಲಿ

14 ಜೂನ್ 1928

ಚೆಗೆವಾರ ಜನ್ಮ ದಿನ



ಜಗತ್ತಿನಾದ್ಯಂತ ಯುವ ಜನರ ಆರಾಧ್ಯಮೂರ್ತಿ, ಈಗಲೂ ತೀವ್ರ ಹೋರಾಟದ ಸನ್ನಿವೇಶಗಳಲ್ಲಿ ಎಲ್ಲರೂ ನೆನಪಿಸಿಕೊಳ್ಳುವ ಹೆಸರು. ಕ್ಯೂಬಾದ ಕ್ರಾಂತಿಗೆ ಫಿಡೆಲ್‌ಕಾಸ್ಟ್ರೊರವರ ಜೊತೆಗೂಡಿ ನೇತೃತ್ವ ನೀಡಿದ ಚೆ, ಲ್ಯಾಟಿನ್ ಅಮೆರಿಕಾದಲ್ಲಿ ಕ್ರಾಂತಿಯ ಸಂದೇಶವನ್ನು ಹರಡುವ ಪ್ರಕ್ರಿಯೆಯಲ್ಲಿ ಬೊಲಿವಿಯಾದ ಗೊಂಡಾರಣ್ಯದಲ್ಲಿ ಅಕ್ಟೋಬರ್ 9, 1967 ರಂದು ಅಮೆರಿಕನ್ ಸಾಮ್ರಾಜ್ಯಶಾಹಿಯ ಬಂಟರಗುಂಡಿಗೆ ಎದೆಕೊಟ್ಟರು. ಚೆ ಹುತಾತ್ಮರಾದಾಗ ಅವರ ವಯಸ್ಸು 39 ವರ್ಷ. 'ವ್ಯಕ್ತಿಗಳನ್ನು ತುಳಿದು ಹಾಕುವುದರಿಂದ ಯಾರೂ ಅವರ ವಿಚಾರಗಳನ್ನು ಕೊಲ್ಲಲಾರರು' ಎಂದಿದ್ದರು. ನಮ್ಮ ಉಪಖಂಡದಲ್ಲಿ ಈಗಲೂ ಯುವಜನರ ಆರಾಧ್ಯಮೂರ್ತಿಯಾಗಿರುವ ಭಗತ್ ಸಿಂಗ್. ಅಮೆರಿಕನ್ ಸಾಮ್ರಾಜ್ಯಶಾಹಿಯ ಬಂಟರು ಬಂದೂಕು ಹಿಡಿದು ಸುತ್ತುವರೆದಿದ್ದಾಗ ಚೆ 'ನೀವು ನನ್ನನ್ನು ಕೊಲ್ಲಲು ಬಂದಿದ್ದೀರೆಂದು ನನಗೆ ಗೊತ್ತು. ಹೇಡಿಗಳೇ, ಗುಂಡು ಹಾರಿಸಿ, ನೀವು ಏನಿದ್ದರೂ ಒಬ್ಬ ಮನುಷ್ಯನನ್ನು ಮಾತ್ರ ಕೊಲ್ಲಲು ಸಾಧ್ಯ.' ಎಂದಿದ್ದರು. ಅವರಿಬ್ಬರು ಹೇಳಿದಂತೆ, ಅವರ ಕನಸುಗಳನ್ನು, ವಿಚಾರಗಳನ್ನು ಅಳಿಸಲು ಮಾನವತೆಯ ಶತ್ರುಗಳಿಗೆ ಆಗಿಲ್ಲ ಎಂಬುದಕ್ಕೆ ಅವರು ಹುತಾತ್ಮರಾದ ನಂತರದ ಇತಿಹಾಸವೇ ಸಾಕ್ಷಿ.

ತೀವ್ರಗೊಳ್ಳುತ್ತಿದೆ ನಾಗಶೆಟ್ಟಹಳ್ಳಿ ಗ್ರಾಮದ ದಲಿತರ ಹೋರಾಟ...! ಜೀವಪರ ಮನಸ್ಸುಗಳು ಕೈಜೋಡಿಸಿ... ಪ್ರತಿಭಟನೆಯನ್ನು ಹತ್ತಿಕ್ಕಲು ಮುಂದಾದ ಮಾಗಡಿ ಪೊಲೀಸರು

ಅಸ್ಪೃಶ್ಯತೆ, ಜಾತಿತಾರತಮ್ಯ, ದಲಿತರ ನಿವೇಶನಗಳನ್ನು ಕಾನೂನು ಬಾಹಿರವಾಗಿ ಕಬಳಿಕೆ ಮಾಡಿರುವ ಸವರ್ಣೀಯರ ಕ್ರಮ ಖಂಡಿಸಿ ಇಂದು ಸದಾಶಿವನಗರದಲ್ಲಿರುವ ಗೃಹ ಸಚಿವರ ಮನೆ ಮುಂದೆ ನಾಗಶೆಟ್ಟಹಳ್ಳಿ ಗ್ರಾಮದ ನೊಂದ ದಲಿತರ ಪರವಾಗಿ ದಲಿತ ಹಕ್ಕುಗಳ ಸಮಿತಿಯ ನೇತೃತ್ವದಲ್ಲಿ ಹಲವು ಪ್ರಗತಿಪರ ಸಂಘಟನೆಗಳು ಪ್ರತಿಭಟನೆ ನಡೆಸಲು ತೀರ್ಮಾನಿಸಿದ್ದವು.

ಆದರೆ ಈ ಪ್ರತಿಭಟನೆಯನ್ನು ಹತ್ತಿಕ್ಕಲು ಪೊಲೀಸ್ ಯಂತ್ರವನ್ನು ಬಳಸಿ ಹರಸಾಹಸ ಪಟ್ಟು ವಿಫಲರಾಗಿದ್ದಾರೆ.

ಬೆಂಗಳೂರಿನ ಸದಾಶಿವನಗರದಲ್ಲಿರುವ ಗೃಹಸಚಿವರ ಮನೆಗೆ ಹೊರಡಲು ನಾಗಶೆಟ್ಟಹಳ್ಳಿ ಗ್ರಾಮದ ದಲಿತರು ಬೆಳಿಗ್ಗೆ ಸುಮಾರು 9ಗಂಟೆಯ ಸಮಯದಲ್ಲಿ ಸಿದ್ಧರಾಗಿದ್ದರು. ಊರಿನಲ್ಲಿ ಕ್ಯಾಂಟರ್ ಕೂಡ ಬಂದು ನಿಂತಿತ್ತು. ಆದರೆ ಪ್ರತಿಭಟನಾಕಾರರು ಬೆಂಗಳೂರಿಗೆ ಬರದಂತೆ ಆ ಊರಿನಲ್ಲೇ ತಡೆದಿದ್ದಾರೆ.



ಸುಮಾರು 50 ಜನ ಪೊಲೀಸರು ನಾಗಶೆಟ್ಟಹಳ್ಳಿ ಗ್ರಾಮದಲ್ಲಿ ಬೀಡುಬಿಟ್ಟು ಪ್ರತಿಭಟನೆಗೆ ಹೊರಟಿದ್ದ ಕ್ಯಾಂಟರ್ ವಾಹನವನ್ನು ತಡೆದು ನಿಲ್ಲಿಸಿದ್ದಾರೆ.

ಗೃಹ ಸಚಿವರ ಮನೆ ಮುಂದೆ ಪ್ರತಿಭಟನೆ ನಡೆಸಲು ನಾವು ಬಿಡುವುದಿಲ್ಲ. ನೀವೇನಾದರೂ ಹೊರಟರೆ ನಿಮ್ಮನ್ನು ಬಂಧಿಸುತ್ತೇವೆ ಎಂದು ಪೊಲೀಸರು ಸುತ್ತುವರಿದಿದ್ದಾರೆ. ನಂತರ ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆದು ದಲಿತರ ಮೇಲೆ ವೃದ್ಧರು, ಮಹಿಳೆಯರು, ಮಕ್ಕಳು ಎನ್ನದೇ ಹಲ್ಲೆ ಮಾಡಿ ಬಂಧಿಸಿ ಮಾಗಡಿ ರಸ್ತೆಯಲ್ಲಿರುವ ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಇಟ್ಟಿದ್ದಾರೆ.

ಆದರೆ ಪೊಲೀಸರ ತಂತ್ರವನ್ನು ವಿಫಲಗೊಳಿಸಿ DHS ನೇತೃತ್ವದಲ್ಲಿ ಗೃಹ ಸಚಿವರ ಮನೆ ಮುಂದೆ ಪ್ರತಿಭಟನೆ ನಡೆಸಿ ಆಮೇಲೆ ಗೃಹ ಸಚಿವರನ್ನು ಭೇಟಿ ಮಾಡಲಾಯಿತು.

ರಾಜ್ಯಸರ್ಕಾರ ಕಾನೂನಾತ್ಮಕವಾಗಿ ಸರಿಯಾಗಿ ಸ್ಪಂಧಿಸದಿದ್ದರೆ ಹೋರಾಟ ತೀವ್ರಗೊಳ್ಳಲಿದೆ.

ಚಿಕ್ಕರಾಜು, ಮಾಗಡಿ

ಮದ್ದೂರು : ಯಶಸ್ವಿ ಭೂ ಹೋರಾಟ

ಮರು ವಶ ಪಡೆದು ಉಳುಮೆ ಮಾಡಿ ಸಂಭ್ರಮ ಪಟ್ಟ ವಳಗೆರೆಹಳ್ಳಿ ರೈತರು

ಮಂಡ್ಯ ಜಿಲ್ಲೆ, ಮದ್ದೂರು ತಾ॥ ವಳಗೆರೆಹಳ್ಳಿ ಗ್ರಾಮದ ಬಿ.ಹೊಸಹಳ್ಳಿ ಎಲ್ಲೆ ಸ.ನಂ.29 ರಲ್ಲಿ ಬೇಸಾಯ ಮಾಡುತ್ತಿರುವ ರೈತರು, ಕರ್ನಾಟಕ ಪ್ರಾಂತ ರೈತ ಸಂಘ (ಏಕಖಖ) ನೇತೃತ್ವದಲ್ಲಿ ಯಶಸ್ವಿ ಹೋರಾಟ ನಡೆಸಿ ಕಳೆದುಕೊಂಡಿದ್ದ ತಮ್ಮ ಜೀವನಾಧರ ಭೂಮಿಯನ್ನು ಮರು ವಶಕ್ಕೆ ತೆಗೆದುಕೊಂಡು ಉಳುಮೆ ಮಾಡಿ ಸಂಭ್ರಮ ಆಚರಿಸಿದರು.

ಘಟನೆ ಹಿನ್ನಲೆ: ತಾ॥ ನ ಕಸಬಾ ಹೋಬಳಿಗೆ ಸೇರಿದ ವಳಗೆರೆಹಳ್ಳಿ ಗ್ರಾಮದ 5 ಪರಿಶಿಷ್ಟ ಜಾತಿಗೆ ಸೇರಿದ ಕುಟುಂಬಗಳು ಸೇರಿದಂತೆ ಒಟ್ಟು 8 ಕುಟುಂಬ, ಬಿ.ಹೊಸಹಳ್ಳಿ ಸ.ನಂ. 29 ರಲ್ಲಿ ಕಳೆದ 40 ವರ್ಷಗಳಿಂದ ಬೇಸಾಯ ಮಾಡುತ್ತಾ ಜೀವನ ನಡೆಸುತ್ತಿದ್ದರು. ಈ ಸಂಬಂಧ ಇವರೆಲ್ಲ ನಮೂನೆ 53 ರಲ್ಲಿ 98–99 ರ ಸಾಲಿನಲ್ಲೇ ಅರ್ಜಿ ಸಲ್ಲಿಸಿದ್ದರೂ ಇತ್ಯರ್ಥ ಆಗಿರಲಿಲ್ಲ. ಆದರೆ ದಾಖಲಾತಿಗಳಲ್ಲಿ 2014 ರಲ್ಲೇ ಇವರ ಜಮೀನನ್ನು ಅಂದಿನ ಜಿಲ್ಲಾಅಧಿಕಾರಿಗಳು ಮೊರಾರ್ಜಿ ವಸತಿ ಶಾಲೆ ಕಟ್ಟಡ ನಿರ್ಮಾಣಕ್ಕೆ ಕಾಯ್ದಿರಿಸಿ ಪಹಣಿಯಲ್ಲಿ ನಮೂದಿಸಿದ್ದರು. ಇದರ ಅರಿವಿಲ್ಲದ ರೈತರು ಸಕ್ರಮಾತಿ ಕೋರಿರುವ ತಮ್ಮ ಅರ್ಜಿ ಪ್ರಕಾರ ಮಂಜೂರಾತಿ ನಿರೀಕ್ಷೆ ಇಟ್ಟುಕೊಂಡು ಎಂದಿನಂತೆ ಬೇಸಾಯ ಮಾಡಿಕೊಂಡು ಬಂದಿದ್ದರು.

ಈ ಮಧ್ಯೆ ಹಾಸ್ಟೆಲ್ ಕಟ್ಟಲು ಗುತ್ತಿಗೆ ಪಡೆದಿದ್ದ ಗುತ್ತಿಗೆದಾರ ತಾ॥ ಆಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆ ನೇತೃತ್ವದಲ್ಲಿ ಸ್ಥಳೀಯ ಎಆ(ಖ) ಶಾಸಕ ತಮ್ಮಣ್ಣ ರವರ ಮುತುವರ್ಜಿ ಮೇರೆಗೆ ಶಂಕು ಸ್ಥಾಪನೆ ಕಾರ್ಯವನ್ನು ಜನವರಿ ಮೊದಲ ವಾರದಲ್ಲಿ ಹಮ್ಮಿಕೊಂಡಾಗಷ್ಟೇ ರೈತರಿಗೆ ತಮ್ಮ ಜಮೀನಿನಲ್ಲಿ ಏನೋ ನಡೆಯುತ್ತಿದೆ ಎಂದು ಅರಿವಾಗಿ, ಸ್ಥಳೀಯ ಶಾಸಕರನ್ನು ಭೇಟಿಯಾಗಿ ತಮ್ಮ ಅಳಲನ್ನು ತೆ–ಽಡಿಕೊಂಡಾಗ, ಶಾಸಕರು ನೆರವಿಗೆ ಬಾರದೇ ಇದ್ದುದ್ದನ್ನು ಕಂಡು, ರೈತ ಸಂಘದ ಬಳಿ ಬಂದರು.

ಸ.ನಂ 29 ರಲ್ಲಿ ಬಗರ್‌ಹುಕಂ ರೈತರು ಬೇಸಾಯ ಮಾಡುವ ಜಮೀನಲ್ಲದೇ ಬೇಕಾದಷ್ಟು ಖಾಲಿ ಜಮೀನು ಇದ್ದರೂ, ರೈತರನ್ನು ಒಕ್ಕಲೆಬ್ಬಿಸುವ ಹುನ್ನಾರದ ಹಿಂದೆ ಪಟ್ಟ ಭದ್ರ ಹಿತಾಸಕ್ತಿಗಳು ಇರುವುದನ್ನು ಮನಗಂಡ ಕೆ.ಪಿ.ಆರ್.ಎಸ್., ರೈತರಲ್ಲಿ ಧೈರ್ಯ ತುಂಬಿ ಹೋರಾಟ ರೂಪಿಸಿತು. ರಾಜಕೀಯ ಚಿತಾವಣೆಯಿಂದ ಪ್ರೇರಿತನಾಗಿದ್ದ ತಹಶಿಲ್ದಾರ್ ನೇತೃತ್ವದ ತಾ॥ ಆಡಳಿತ ಹೋರಾಟವನ್ನು ವಿಫಲಗೊಳಿಸಲು ಹಾಸ್ಟೆಲ್ ಕಟ್ಟಡಕ್ಕೆ ಎಂದು ಆಕ್ರಮವಾಗಿ ಕಾಯ್ದಿರಿಸಿದ್ದ 9.36 ಎಕರೆ ಸುತ್ತ ಏಪ್ರಿಲ್ ಮೊದಲನೇ ವಾರದಲ್ಲಿ ಟ್ರಂಚ್ ಹೊಡೆಸಿತು. ಇದನ್ನು ಆ ತಕ್ಷಣವೇ ಪ್ರತಿಭಟಿಸಿ ಟ್ರಂಚ್ ಮುಚ್ಚಲು ತಾ॥ ಆಡಳಿತಕ್ಕೆ ಗಡುವು ನೀಡಿ, ಕಾನೂನು ಬಾಹಿರವಾಗಿ ತೆಗೆದಿರುವ ಟ್ರಂಚ್ ಮುಚ್ಚದಿದ್ದರೇ, ರೈತ ಸಂಘವೇ ಟ್ರಂಚ್ ಮುಚ್ಚಿ ಪ್ರತಿಭಟಿಸುತ್ತದೆ ಎಂದು ಎಚ್ಚರಿ–ಕೆ ನೀಡಲಾಯಿತು ಹಾಗೂ ನಮೂನೆ 53 ರ ಅಡಿ ಸಲ್ಲಿಸಿರುವ ಅರ್ಜಿಗಳ ದಾಖಲಾತಿಗಳನ್ನು ಮಾಧ್ಯಮಗಳ ಮುಂದೆ ಪ್ರದರ್ಶಿಸಲಾಯಿತು.

ಈ ಎಲ್ಲಾ ದಾಖಲಾತಿಗಳನ್ನು ತಾ॥ ಆಡಳಿತಕ್ಕೆ ಸಲ್ಲಿಸಿದರೂ ನಿರ್ಲಕ್ಷಿಸಿ ತನ್ನ ಹಠಮಾರಿ ಧೋರಣೆಯನ್ನು ಮುಂದುವರೆಸುತ್ತಿರುವುದನ್ನು ಏಪ್ರಿಲ್ 18,19 ರಂದು ನಡೆದ ಕೆ.ಪಿ.ಆರ್.ಎಸ್. 3 ನೇ ತಾ॥ ಸಮ್ಮೇಳನದ ಬಹಿರಂಗ ಸಭೆ ಮತ್ತು ಪ್ರತಿನಿಧಿ ಅಧಿವೇಶನದಲ್ಲಿ ಖಂಡಿಸಲಾಯಿತು. ಈ ರೈತರ ಸಮಸ್ಯೆಯ ಗಂಭೀರತೆಯನ್ನು ಮನಗಂಡ ಕೆ.ಪಿ.ಆರ್.ಎಸ್ ರಾಜ್ಯಾಧ್ಯಕ್ಷರಾದ ಜಿ.ಸಿ. ಬಯ್ಯರೆಡ್ಡಿ ರವರು, ಕಂದಾಯ ಇಲಾಖೆ ಉನ್ನತ ಅಧಿಕಾರಿಗಳು ಹಾಗೂ ಮಂತ್ರಿಗಳನ್ನು ಭೇಟಿ ಮಾಡಿಸುವ ಭರವಸೆ ನೀಡಿ ರೈತರಲ್ಲಿ ಉತ್ಸಾಹ ತುಂಬಿದರು.

ಅದರಂತೆ ಏಪ್ರಿಲ್ 24 ರಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳನ್ನು ಭೇಟಿ ಮಾಡಿ. ರೈತರ ಸಕ್ರಮಾತಿ ಅರ್ಜಿ ಇತ್ಯರ್ಥ–ಕ್ಕೆ ಬಾಕಿ ಇರುವಾಗಲೇ, ಸರ್ಕಾರ ಜಮೀನು ಸ್ವಾದೀನ ಪಡಿಸಿಕೊಂಡಿರುವುದು ಆಕ್ರಮ. ಕೂಡಲೇ ಮಧ್ಯಪ್ರವೇಶಿಸಿ ರೈತರಿಗೆ ನ್ಯಾಯ ಕೊಡುವಂತೆ ವಿನಂತಿಸಲಾಯಿತು. ಇದಾದ ನಂತರ 21 ಜನವರಿ 2017 ರಂದು ನಡೆದ ಸಕ್ರಮಾತಿ ಸಭೆಯಲ್ಲಿ ಈ ಎಲ್ಲಾ ರೈತರ ಅರ್ಜಿಗಳು ವಜಾಗೊಂಡಿವೆ ಎಂದು ತಹಶಿಲ್ದಾರ್ ರವರು ದಾಖಲೆಗಳನ್ನು ಸೃಷ್ಠಿಸಿ, ರೈತರ ಜಮೀನಿನಲ್ಲಿದ್ದ ಮಾವು, ತೆಂಗು, ಸೇರಿದಂತೆ 800 ಕ್ಕೂ ಹೆಚ್ಚು ಮರಗಳನ್ನು ಭಾರೀ ಪೋಲಿಸ್ ರಕ್ಷಣೆಯಲ್ಲಿ 5 ಜೆಸಿಬಿ ಯಂತ್ರ ಬಳಸಿ ಏಪ್ರಿಲ್ 26 ರ ಬೆಳಕು ಕಾಣುವ ಮುಂಚೆಯೇ ನಡೆಸಿದ ರಹಸ್ಯ ಕಾರ್ಯಚಾರಣೆಯಲ್ಲಿ ನಾಶ ಮಾಡಿದರು.

ಕಟ್ಟೆಯೊಡೆದ ರೈತರ ಆಕ್ರೋಶ:

ಏಪ್ರಿಲ್ 26 ರಂದು ಎಂದಿನಂತೆ ಜಮೀನಿಗೆ ಬಂದ ರೈತರಿಗೆ ಉರುಳಿ ಬಿದ್ದ ಮರಗಳು ಮತ್ತು ಮರಗಳನ್ನು ಜಮೀನಿನ ಆಚೆಗೆ ದೂಡುತ್ತಿದ್ದ ಭಾರೀ ಗಾತ್ರದ ಜೆ.ಸಿ.ಬಿ. ಯಂತ್ರಗಳನ್ನು ನೋಡಿ ಅಘಾತವಾಯಿತು, ಕೂಡಲೆ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾಧ್ಯಕ್ಷ ಎಂ.ಪುಟ್ಟಮಾದು ನೇತೃತ್ವದಲ್ಲಿ ಪ್ರತಿಭಟಿಸಿದರು. ರೈತರ ಆಕ್ರೋಶ ಕಂಡು ಬೆದರಿದ ತಹಶಿಲ್ದಾರ್ ಮರ ಕಡಿಯಲು ನಾನು ಸೂಚಿಸಿರಲಿಲ್ಲ ಎಂದು ಪರದಾಡಿದ, ಪ್ರತಿಭಟನೆ ವಿಷಯ ತಿಳಿದು ಸ್ಥಳಕ್ಕೆ ಬಂದ ಉಪವಿಭಾಗಾಧಿಕಾರಿ ಹಾಸ್ಟೆಲ್ ಕಟ್ಟಡ ಕಾಮಗಾರಿ ನಿಲ್ಲಿಸಲು ಸೂಚಿಸುವುದಾಗಿ ಭರವಸೆ ನೀಡಿದರು.

ಹುಸಿ ಭರವಸೆ–ಕಾಮಗಾರಿಗೆ ಪೋಲಿಸ್ ರಕ್ಷಣೆ

ಜಿಲ್ಲಾಧಿಕಾರಿ ರಜೆ ಮೇಲೆ ಹೋಗಿದ್ದಕ್ಕೆ ನೆಪ ಮಾಡಿಕೊಂಡು ರೈತರಿಗೆ ಭರವಸೆ ನೀಡಿದಂತೆ ಕಾಮಗಾರಿ ನಿಲ್ಲಲಿಲ್ಲ. ಬದಲಾಗಿ ಪೋಲಿಸ್ ರಕ್ಷಣೆಯಲ್ಲಿ ಕಾಮಗಾರಿ ಭರದಿಂದ ಸಾಗುತ್ತಿತ್ತು. ನಳ ನಳಿಸುತ್ತಿದ್ದ ತೋಟ ಬಂದಾಗಿರುವ ನೋವಿನಲ್ಲಿದ್ದ ರೈತರಿಗೆ ಸಾಂತ್ವನ ಹೇಳಲು ಕೆ.ಪಿ.ಆರ್.ಎಸ್. ರಾಜ್ಯಧ್ಯಕ್ಷರಾದ ಜಿ.ಸಿ. ಬಯ್ಯರೆಡ್ಡಿ ರವರ ನೇತೃತ್ವದ ನಿಯೋಗ ಜಮೀನಿಗೆ ಭೇಟಿ ನೀಡಿ, ಪತ್ರಿಕಾಗೋಷ್ಠಿ ನಡೆಸಿ ಜಿಲ್ಲಾಡಳಿತ ಮತ್ತು ಶಾಸಕರ ಧೋರಣೆಯನ್ನು ಖಂಡಿಸಿತು. ಇದಕ್ಕೆ ಮೊದಲು ಕಂದಾಯ ಸಚಿವ ಕಾಗೋಡು ತಿಮ್ಮಪ್ಪ ರವರನ್ನು ಹಾಗೂ ಮತ್ತೊಮ್ಮೆ ಕಂದಾಯ ಇಲಾಖೆ ಪ್ರಾಧಾನ ಕಾರ್ಯದರ್ಶಿ ರಮಣರೆಡ್ಡಿ ರವರನ್ನು ಭೇಟಿ ಮಾಡಿದಾಗ ರಜೆ ಮೇಲೆ ತೆರಳಿರುವ ಜಿಲ್ಲಾಧಿಕಾರಿ ಬರುವ ತನಕ ಕಾಮಗಾರಿ ನಿಲ್ಲಿಸಿಕೊಡುವುದಾಗಿ ಭರವಸೆ ನೀಡಿದ್ದರು. ಆ ಭರವಸೆಯನ್ನು ಕೂಡ ತಾ॥ ಆಡಳಿತ ದಿಕ್ಕರಿಸಿ ಕಾವಗಾರಿ ನಡೆಸುತ್ತಿತ್ತು. ಜಮೀನಿಗೆ ಭೇಟಿ ನೀಡಿದ್ದನ್ನೆ ನೆಪ ಮಾಡಿಕೊಂಡು ಜಿ.ಸಿ.ಬಯ್ಯರೆಡ್ಡಿ ರವರನ್ನು ಮೊದಲೆ ಆರೋಪಿಯನ್ನಾಗಿಸಿ ಕರ್ತರ ಮೇಲೆ ಏಳು ಕಾರ್ಯಕರ್ತರ ಮೇಲೆ ಕಾಮಗಾರಿ ಸ್ಥಳಕ್ಕೆ ಆಕ್ರಮ ಪ್ರವೇಶ ಹಾಗೂ 2 ಲಕ್ಷ ರೂ ಮೌಲ್ಯದ ಕಟ್ಟಡ ಸಾಮಾಗ್ರಿಗಳನೂ ನಾಶ ಪಡಿಸಿದ ಆರೋಪದ ಅನ್ವಯ ಕೇಸು ದಾಖಲಿಸುವ ಉದ್ದಟತನವನ್ನು ತಾ॥ ಆಡಳಿತ ತೋರಿತು.

ಗ್ರಾಮದಲ್ಲಿ ಸಭೆ–ರೈತರಲ್ಲಿ ಹೆಚ್ಚಿದ ಹೋರಾಟದ ಉತ್ಸಾಹ

ಬಗರ್ ಹುಕಂ ರೈತರ ಕುರಿತು ಕೆಲವು ಪುಡಾರಿಗಳು ನಡೆಸಿದ ಅಪಪ್ರಚಾರವನ್ನು ಹಿಮ್ಮೆಟ್ಟಿಸಲು, ಹಾಗೂ ರೈತರಲ್ಲಿ ಹೋರಾಡದ ಉತ್ಸಾಹವನ್ನು ಹೆಚ್ಚು ಮಾಡಲು ವಳೆಗೆರಹಳ್ಳಿ ಗ್ರಾಮದಲ್ಲಿ ಕರಪತ್ರ ಹಂಚಿ ಮೇ 12 ರಂದು ಸಭೆ ನಡೆಸಲಾಯಿತು. ಈ ಸಭೆಯಲ್ಲಿ ಕೆ.ಪಿ.ಆರ್.ಎಸ್. ರಾಜ್ಯಾಧ್ಯಕ್ಷ ಜಿ.ಸಿ. ಬಯ್ಯಾರೆಡ್ಡಿ, ಕ.ರಾ.ರೈ.ಸಂ.(ಮೂಲ ಸಂಘಟನೆ) ಮುಖಂಡ ಎಸ್.ವಿಶ್ವನಾಥ್, ಕೆ.ಪಿ.ಆರ್.ಎಸ್. ಜಿಲ್ಲಾ ಮುಖಂಡರಾದ ಟಿ.ಯಶವಂತ, ಎನ್.ಎಲ್. ಭರತ್ ರಾವ್. ಟಿ.ಎಲ್. ಕೃಷ್ಣೇಗೌಡ, ಸಿ.ಐ.ಟಿ.ಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿ.ಕುಮಾರಿ, ಡಿ.ಎಸ್.ಎಸ್. ನ ಶಿವರಾಜು ಗ್ರಾಮದ ನರಸಿಂಹೇಗೌಡ ಮುಂತಾದವರು ಮಾತಾನಾಡಿದರು. ಇದರ ಪರಿಣಾಮ ಹೋರಾಟದ ಉತ್ಸಾಹ ಹೆಚ್ಚಿತು. ರೈತರ ವಿರೋದ ಲೆಕ್ಕಿಸದೇ ಹಠಮಾರಿತನದಿಂದ ಕಾಮಗಾರಿ ನಡೆಸುತ್ತಿರುವುದನ್ನು ಖಂಡಿಸಿ ಕಾಮಗಾರಿ ನಿಲ್ಲಿಸದಿದ್ದರೆ ಮೇ 15 ರಂದು ನೇರ ಕಾರ್ಯಚಾರಣೆಗೆ ದುಮುಕಿ ಕಾಮಗಾರಿ ನಿಲ್ಲಿಸಲು ನಿರ್ಣಯ ಮಾಡಲಾಯಿತು.

ಪೋಲಿಸ್ ಸರ್ಪಗಾವಲು ಭೇದಿಸಿ ನಡೆದ ಆಹೋರಾತ್ರಿ ಧರಣಿ

ಮೇ 15ರ ಪ್ರತಿಭಟನೆ ತಿಳಿದಿದ್ದ ತಾ॥ ಆಡಳಿತ, ಕಾಮಗಾರಿ ಸ್ಥಳದ ರಕ್ಷಣೆಗೆ ಹೆಚ್ಚಿನ ಪೋಲಿಸ್ ಬಂದೋಬಸ್ತ್ ಮಾಡಿತ್ತು. ಆದರೆ ರೈತರು ಕಾಮಗಾರಿ ಸ್ಥಳಕ್ಕೆ ನುಗ್ಗಲು ಯತ್ನಿಸಿದಾಗ ಪೋಲಿಸರು ಮತ್ತು ರೈತರ ನಡುವೆ ನೂಕಾಟ–ತಳ್ಳಾಟ ನಡೆದು ಅಂತಿಮವಾಗಿ ಪೊಲೀಸರು ಕಾಮಗಾರಿ ನಿಲ್ಲಿಸುವಂತೆ ಸೂಚಿಸಿದರು.ಅದರಂತೆ ಕಾಮಗಾರಿ ನಿಂತಾಗ, ಪೋಲಿಸರು ಪ್ರತಿಭಟನೆ ಬಿಟ್ಟು ತೆರಳುವಂತೆ ವಿನಂತಿಸಿದರು. ನಾವು ಸ್ಥಳದಿಂದ ಕದಲಿದರೆ ಮತ್ತೆ ಕಾಮಗಾರಿ ನಡೆಸುತ್ತಾರೆ ಅದ್ದರಿಂದ ಲಿಖಿತವಾಗಿ ಕಾಮಗಾರಿ ನಿಲ್ಲಿಸಿದ ಆದೇಶದ ಪ್ರತಿ ನೀಡುವ ತನಕ ತೆರಳುವುದಿಲ್ಲ ಎಂದು ಘೋಷಿಸಿ, ಕಾಮಗಾರಿ ಸ್ಥಳದಲ್ಲೆ ಪೆಂಡಾಲ್ ಹಾಕಿ ಆಹೋರಾತ್ರಿ ಧರಣಿ ನಡೆಸಲಾಯಿತು. ಮೇ 18 ರಂದು ಜಿಲ್ಲಾಧಿಕಾರಿ ಸೂಚನೆ ಮೇರೆಗೆ ಸ್ಥಳಾಕ್ಕಾಗಮಿಸಿದ ಉಪವಿಭಾಗದಿಕಾರಿಗಳು, ಕಾಮಗಾರಿ ನಿಲ್ಲಿಸುವುದಾಗಿ ಮತ್ತು ವಜಾ ಆಗಿರುವ ಅರ್ಜಿದಾರರಿಗೆ ಉಪ ವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಅಗತ್ಯ ದಾಖಲಾತಿಗಳನ್ನು ಒದಗಿಸುವುದಾಗಿ, ಮೆಲ್ಮನವಿ ಸಲ್ಲಿಸಿದ ತಕ್ಷಣ ಕಾನೂನಿನಂತೆ ಸಕ್ರಮಾತಿ ಸಮಿತಿಯ ನಿರ್ಣಯ–ಕ್ಕೆ ತಡೆಯಾಜ್ಞೆ ನೀಡುವುದಾಗಿ ಭರವಸೆ ನೀಡಿದ ನಂತರ ಪ್ರತಿಭಟನೆ ಕೊನೆಗೊಂಡಿತು.

ಮತ್ತೆ ಉಳುಮೆ ಪ್ರಾರಂಭಿಸಿದ ರೈತರು

ಕೂಡಲೇ ಅಗತ್ಯ ಹಿಂಬರಹ ಪಡೆದು ಎಸಿ ನ್ಯಾಯಾಲಯದಲ್ಲಿ ಮೆಲ್ಮನವಿ ಸಲ್ಲಿಸಲಾಯಿತು. ತಡೆಯಾಜ್ಞೆ, ಸಿಕ್ಕಿದ ಸಂದರ್ಭದಲ್ಲಿ ಮಳೆಯೂ ಆಗದ್ದರಿಂದ ಮೇ 30 ರಂದು ರೈತರು ತಮ್ಮ ಉಳುಮೆ ಪ್ರಾರಂಭಿಸಿ ಸಂಭ್ರಮ ವ್ಯಕ್ತ ಪಡಿಸಿದರು. ಬಹುತೇಕ ಹೋಗಿಯೇ ಬಿಟ್ಟಿದ್ದ ಜಮೀನಿನನ್ನು ಹೋರಾಟದ ಮೂಲಕ ಮರುವಶಕ್ಕೆ ತೆಗೆದು–ಕೊಂಡು ರೈತರ ಮುಖದಲ್ಲಿ ಗೆಲುವಿನ ಆತ್ಮ ವಿಶ್ವಾಸ ಎದ್ದು ಕಾಣುತ್ತಿತ್ತು. ಈಗ ಜಮೀನು ಹಕ್ಕು ಪತ್ರಕ್ಕಾಗಿ ಹೋರಾಟ ಮುಂದುವರಿಯುತ್ತದೆ.

ವರದಿ: ಟಿ.ಯಶವಂತ

“ಹಿಂದೂ ರಾಷ್ಟ್ರ ಎನ್ನುವುದು ಸಂವಿಧಾನ ವಿರೋಧಿ”: ತೀಸ್ತಾ

ತೀಸ್ತಾ ಸೆಟಲ್‌ವಾಡ್ ದೇಶದ ಪ್ರಸಿದ್ಧ ಪತ್ರಕರ್ತೆ, ಸಾಮಾಜಿಕ ಕಾರ್ಯಕರ್ತೆ. ಭಿವಂಡಿ, ಮುಂಬಯಿ ಮತ್ತು ಗುಜರಾತ್ ಕೋಮುದಂಗೆಗಳ – ವರದಿ, ಸತ್ಯಶೋಧನೆ, ದಂಗೆಕೋರರ ಹಿಂದಿರುವ ರಾಜಕೀಯ ವ್ಯಕ್ತಿಗಳನ್ನು ಬಯಲುಗೊಳಿಸಿದ್ದು, ದಂಗೆ–ಕೋರರಿಗೆ ಶಿಕ್ಷೆ, ಕೋಮುದಂಗೆಯ ಸಂತ್ರಸ್ತರಿಗೆ ನ್ಯಾಯ – ಕೊಡಿಸುವಲ್ಲಿ ಆಕೆಯ ಸತತ ಹೋರಾಟ, ಶ್ರಮ ಹಾಗೂ ನೈತಿಕ ಧೈರ್ಯ ಅಪ್ರತಿಮವಾದದು. ಇದಕ್ಕಾಗಿ ಬಿಜೆಪಿಯ ಗುಜರಾತ್ ಮತ್ತು ಕೇಂದ್ರ ಸರಕಾರಗಳಿಂದ ಸತತವಾಗಿ ದಾಳಿ–ಕಿರುಕುಳಗಳನ್ನು ಅವರು ಎದುರಿಸಬೇಕಾಗಿ ಬಂದಿದೆ. ತೀಸ್ತಾ ಇತ್ತೀಚೆಗೆ (ಮೇ 15) ಬೆಂಗಳೂರಲ್ಲಿ “ದೇಶಾಭಿಮಾನಿ ಬಳಗ” ಏರ್ಪಡಿಸಿದ್ದ ಸಂವಾದದಲ್ಲಿ ಭಾಗವಹಿಸಿದ್ದರು. ಆ ಸಂವಾದದಲ್ಲಿ ತೀಸ್ತಾ ಅವರ ಭಾಷಣದ ಆಯ್ದ ಭಾಗಗಳು.



ಎಸ್. ಸತ್ಯಾ

ಇಂದು ನಾವು 1990ರ ದಶಕಕ್ಕಿಂತಲೂ ಕೆಟ್ಟ ದಿನಗಳನ್ನು ನೋಡುತ್ತಿದ್ದೇವೆ. ಬಹಿರಂಗ ಚರ್ಚೆಗಳು ಬಹಳ ಕೀಳುಮಟ್ಟಕ್ಕೆ ಇಳಿದಿವೆ ಹಾಗೂ ಇದರ ಹಿಂದೆ ಒಂದು ಬೃಹತ್ ಸಾಮೂಹಿಕ ಪಡೆಯೇ ಇದೆ. ಈಗ ನಮ್ಮ ಮುಂದಿರುವ ದೊಡ್ಡ ಸವಾಲೆಂದರೆ ಈ ಬಹಿರಂಗ ಚರ್ಚೆಗಳ ಮಟ್ಟವನ್ನು ಎತ್ತರಿಸಬೇಕು; ಸೂಕ್ಷ್ಮತೆಯನ್ನು ತರಬೇಕು; ವಿಷಯದ ಆಳಕ್ಕೆ ಇಳಿಸಬೇಕು; ಚರ್ಚೆಯಲ್ಲಿರುವ ವಿಷಯಕ್ಕೆ ಗೌರವ ಬರುವಂತೆ ಮಾಡಬೇಕು; ಹಾಗೂ ಅತ್ಯಂತ ಮುಖ್ಯವಾಗಿ ಅಂತಹ ವಿಷಯಗಳಿಗೆ ಸಾಮೂಹಿಕ ಬೆಂಬಲವನ್ನು ಒಟ್ಟುಗೂಡಿಸಬೇಕು. ಇದು ಕಷ್ಟದ ಕೆಲಸವೇ. ಅದರಲ್ಲೂ ಇಂದಿನ ಸಮೂಹ ಮಾಧ್ಯಮಗಳು ತುಳಿಯುತ್ತಿರುವ ನಾಚಿಕೆಗೇಡು ಹಾದಿಯನ್ನು ಗಮನಿಸಿದರೆ ಈ ಕೆಲಸ ನಿಜಕ್ಕೂ ಕಷ್ಟವಿದೆ. ಆದರೆ ಅಸಾಧ್ಯದ ಕೆಲಸ ಅಲ್ಲ. ಇವತ್ತು ನಾವಿರುವ ಪರಿಸ್ಥಿತಿಗೆ ಮಾಧ್ಯಮಗಳೇ, ಅದರಲ್ಲೂ ಪ್ರಮುಖವಾಗಿ ಎಲೆಕ್ಟ್ರಾನಿಕ್ ಮಾಧ್ಯಮಗಳೇ ಕಾರಣ. ಇದನ್ನು ಹೇಳಲು ನನಗೇನೂ ಹಿಂಜರಿಕೆ ಇಲ್ಲ.

ಕಳೆದ ಒಂದೆರಡು ವಾರಗಳ ಅಥವಾ ಒಂದೆ–ರಡು ತಿಂಗಳುಗಳ ಮಾಧ್ಯಮ ವರದಿಗಳನ್ನು, ಅದರಲ್ಲೂ ಟಿವಿ ಚಾನೆಲ್‌ಗಳನ್ನು ಗಮನಿಸಿರಿ. ತ್ರಿವಳಿ ತಲಾಖ್ ಬಗ್ಗೆ ಕೊಟ್ಟಿರುವ ಪ್ರಾಶಸ್ತ್ಯವನ್ನು ಉತ್ತರಪ್ರದೇಶದ ಸಹರನ್ ಪುರದಲ್ಲಿ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಕ್ಕೆ ನೀಡುತ್ತಿಲ್ಲ. ನಾವು ಈ ಮಾಧ್ಯಮಗಳನ್ನು ಕೇಳಬೇಕಿದೆ, ಮಾಧ್ಯಮದ ಪ್ರತಿನಿಧಿಗಳು ಸಹರನ್‌ಪುರಕ್ಕೆ ಯಾಕೆ ಹೋಗಿಲ್ಲ? ಅಲ್ಲಿಗೆ ಹೋಗಿ ಸತ್ಯವನ್ನು ಯಾಕೆ ಪತ್ತೆಹಚ್ಚುತ್ತಿಲ್ಲ? ಯಾಕೆ ಯಾರ್‍ಯಾರದೋ ಮೇಲೆ ಗೂಬೆ ಕೂರಿಸಿ ಬಲಿಪಶುಗಳನ್ನಾಗಿ ಮಾಡಲಾಗುತ್ತಿದೆ? ಸಹರನ್‌ಪುರದಲ್ಲಿ ನಿಜವಾಗಿಯೂ ಶೋಷಣೆ ಮಾಡುತ್ತಿರುವುದು ಉತ್ತರಪ್ರದೇಶದ ಮುಖ್ಯಮಂತ್ರಿ ಆದಿತ್ಯನಾಥ್ ಅವರ ಜಾತಿಗೆ ಸೇರಿದ ಠಾಕೂರರು. ಆದರೆ ಮಾಧ್ಯಮಗಳನ್ನು ಇದನ್ಯಾಕೆ ವರದಿ ಮಾಡುತ್ತಿಲ್ಲ? ಮಾಧ್ಯಮಗಳು ಆ ಕಡೆ ನೋಡದಿರಲು ತೀರ್ಮಾನಿಸಿದಂತಿದೆ. ಬದಲಿಗೆ ವಾರಗಟ್ಟಲೆ ತಮ್ಮ ಸ್ಟುಡಿಯೋಗಳಲ್ಲಿ ಕುಳಿತು ತಲಾಖ್ ಬಗ್ಗೆ ಚರ್ವಿತ ಚರ್ವಣ ಚರ್ಚೆಗಳನ್ನು ಮಾಡುತ್ತಿದ್ದಾರೆ. ನಾನೂ ಒಂದು ಚಾನೆಲ್‌ನ ಚರ್ಚೆಗೆ ಹೋಗಿದ್ದೆ. ಎಲ್ಲ ಚರ್ಚೆಗಳೂ ಅನಗತ್ಯ ಎನ್ನುವುದಿಲ್ಲ. ಆದರೆ ಸತತ ಎರಡು ವಾರಗಳು ತಲಾಖ್ ಬಗ್ಗೆಯೇ ಚರ್ಚೆ ನಡೆಸುವುದು ಸ್ವಲ್ಪ ಅತಿಯಾಯಿತು.

ಗೋವು ರಾಜಕೀಯದಲ್ಲಿ ಮೊಹಮದ್ ಅಖ್ಲಾಕ್‌ನನ್ನು ಮಾತ್ರ ಕೊಚ್ಚಿ ಹಾಕಿಲ್ಲ, ಲಕ್ನೋದಲ್ಲಿ ಇಮ್ತಿಯಾಜ್ ಮತ್ತು ಅವನ ಚಿಕ್ಕಪ್ಪನನ್ನು, ಗುಜರಾತಿನಲ್ಲಿ ಅಯೂಬ್‌ನನ್ನು, ಕಳೆದ ವಾರ ಅಸ್ಸಾಂನಲ್ಲಿ ಇಬ್ಬರನ್ನು, ರಾಜಸ್ಥಾನದಲ್ಲಿ ಮೆಹಬೂಬ್ ಖಾನ್‌ನನ್ನು ಗೋರಕ್ಷಣೆಯ ಹೆಸರಿನಲ್ಲಿ ಕೊಲ್ಲಲಾಗಿದೆ. ಮಾಧ್ಯಮಗಳಿಗೆ ಇವರೆಲ್ಲ ಕೇವಲ ಒಂದು ಧರ್ಮಕ್ಕೆ ಸೇರಿದವರಾಗಿ ಮಾತ್ರ ಕಾಣುತ್ತಿದ್ದಾರೆ. ಆದರೆ ‘ಭೂಮಿ ಅಧಿಕಾರ ಆಂದೋಲನ’ವು ಹೇಳುತ್ತಿದೆ ‘ಮೆಹಬೂಬ್ ಖಾನ್ ಕೇವಲ ಮುಸ್ಲಿಮನಲ್ಲ, ಅವನೊಬ್ಬ ರೈತ’ ಎಂದು. ಗೋರಕ್ಷಣೆಯ ಹೆಸರಿನಲ್ಲಿ ನಡೆಯುತ್ತಿರುವ ಹಲ್ಲೆಗಳು ಇಡೀ ಕೃಷಿ ಆರ್ಥಿಕತೆಯ ಮೇಲಿನ ಹಲ್ಲೆ ಎನ್ನುವುದನ್ನು ಯಾವ ಮಾಧ್ಯಮವೂ ಎತ್ತಿ ತೋರಿಸುತ್ತಿಲ್ಲ. ಹಸುವಿನ ಖರೀದಿ, ಹಸುವಿನ ಮಾರಾಟ, ಸತ್ತ ಹಸುವಿನ ಚರ್ಮ ತೆಗೆಯುವುದು ಇತ್ಯಾದಿ ಆರ್ಥಿಕ ಚಟುವಟಿಕೆಗಳನ್ನು ಕಡೆಗಣಿಸಿ, ಗೋಮಾಂಸ ಸೇವನೆ ಮತ್ತು ಕಸಾಯಿಖಾನೆಗಳ ಬಗ್ಗೆ ಮಾತ್ರ ನೀಡುತ್ತಿರುವ ಅತಿಯಾದ ಗಮನದಿಂದ ಪಶುಸಂಗೋಪನೆಯಲ್ಲಿ ತೊಡಗಿದ್ದ ಸಣ್ಣ ರೈತರು ನಾಶವಾಗುತ್ತಿರುವುದು ಜನರ ಹಾಗೂ ಮಾಧ್ಯಮಗಳ ಗಮನಕ್ಕೆ ಬರುತ್ತಿಲ್ಲ. ಈ ಬಗ್ಗೆ ಒಂದು ಗಂಭೀರ ಸಾರ್ವಜನಿಕ ಚರ್ಚೆ ಈ ದೇಶದಲ್ಲಿ ನಡೆದೇ ಇಲ್ಲ. ಹಾಗೂ ಚಿಂತಾಜನಕ ವಿಷಯವೆಂದರೆ ಈ ಎಲ್ಲ ವಿಷಯಗಳ ಬಗ್ಗೆ ಮಾತನಾಡಬೇಕಿದ್ದ ವಿರೋಧ ಪಕ್ಷಗಳನ್ನು ಮೂಲೆಗುಂಪು ಮಾಡಲಾಗಿದೆ. ಅವರು ಈ ಬಗ್ಗೆ ಧ್ವನಿ ಎತ್ತಲೂ ಸಾಧ್ಯವಾಗುತ್ತಿಲ್ಲ. ಈ ಕೊಲೆಗಳ ಬಗ್ಗೆ ಮಾತನಾಡಿದರೆ ಎಲ್ಲಿ ತಮ್ಮನ್ನು ಮುಸ್ಲಿಂ ಪರ, ಅಲ್ಪ ಸಂಖ್ಯಾತರ ಪರ ಎಂದು ಹಣೆ ಪಟ್ಟಿಕಟ್ಟಿಬಿಡುತ್ತಾರೋ ಎಂಬ ಭಯ ವಿರೋಧ ಪಕ್ಷಗಳನ್ನು ಕಾಡುತ್ತಿರುವಂತಿದೆ.

ಇಂತಹ ಸಂದರ್ಭದಲ್ಲಿ ವಿರೋಧ ಪಕ್ಷಗಳು ರಾಜಕೀಯ ಹೊಣೆಗಾರಿಕೆ ತೋರಿಸುವಂತೆ ನಾವುಗಳು ಆಗ್ರಹಪಡಿಸಬೇಕಿದೆ. ಕೇಂದ್ರದಲ್ಲಿ ಹಾಗೂ 11 ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿರುವ, ನಾಲ್ಕು ರಾಜ್ಯಗಳಲ್ಲಿ ಸಮ್ಮಿಶ್ರ ಸರ್ಕಾರಗಳ ಬಾಗವಾಗಿರುವ ಭಾರತೀಯ ಜನತಾ ಪಕ್ಷದ ಜೊತೆಗೆ ಮಾತನಾಡುವ ಆಸಕ್ತಿ ನನಗಿಲ್ಲ. ಅದೊಂದು ಫ್ಯಾಸಿಸ್ಟ್ ಪಕ್ಷ. ಅದು ಈ ದೇಶದ ಸಂವಿಧಾನದಲ್ಲಿ ವಿಶ್ವಾಸ ಹೊಂದಿಲ್ಲ. ಹಾಗಾಗಿ ಅವರ ಜೊತೆ ಮಾತನಾಡುವುದು ಸಾಧ್ಯವಿಲ್ಲ. ಆದರೆ ನಾನು ದೇಶದ ಇತರೆ ರಾಜಕೀಯ ಪಕ್ಷಗಳನ್ನು ಆಗ್ರಹಪಡಿಸುತ್ತೇನೆ– ನೀವು ನಿಮ್ಮ ಸಣ್ಣ ಸಣ್ಣ ಭಿನ್ನಾಭಿಪ್ರಾಯಗಳನ್ನು, ಸಂಕುಚಿತ ಮನೋಭಾವವನ್ನು ಪಕ್ಕಕ್ಕಿಡಿ. ಮುಂದಿನ ಚುನಾವಣೆಯನ್ನು ಪ್ರತ್ಯೇಕವಾಗಿಯೇ ಎದುರಿಸುತ್ತೇವೆ ಎನ್ನುವ ಹಠ ಮಾಡಬೇಡಿ. ಒಟ್ಟಾಗಿ ಚುನಾವಣೆಗಳನ್ನು ಎದುರಿಸಿ ಫ್ಯಾಸಿಸ್ಟ್ ಶಕ್ತಿಯನ್ನು ಸೋಲಿಸಿರಿ. ಅದು ಈ ದಿನದ ಅಗತ್ಯ. ರಾಜಕೀಯ ಪಕ್ಷಗಳು ಸಂಘಟಿತ ಹೋರಾಟ ಮಾಡುವಂತೆ ಜನರೂ ಆಗ್ರಹಪಡಿಸಬೇಕಿದೆ.


ಉತ್ತರ ಪ್ರದೇಶ ಚುನಾವಣೆಯ ಗೆಲುವು ಮೋದಿ ಅಥವಾ ಅಮಿತ್ ಷಾನ ಗೆಲುವಲ್ಲ. ಮತಗಳ ಸಂಖ್ಯೆಗಳನ್ನು ಕೂಲಂಕಷವಾಗಿ ಗಮನಿಸಿದರೆ, ಇದು ಒಡೆದ ಮತಗಳ ಕಥೆಯನ್ನು ಹೇಳುತ್ತದೆ. ಎಲ್ಲ ಕ್ಷೇತ್ರಗಳಲ್ಲೂ ಸಮಾಜವಾದಿ ಪಕ್ಷ ಮತ್ತು ಬಹುಜನ ಸಮಾಜವಾದಿ ಪಕ್ಷಗಳು ಎರಡು ಮತ್ತು ಮೂರನೆಯ ಸ್ಥಾನದಲ್ಲಿವೆ. ಈ ಎರಡು ಪಕ್ಷಗಳು ಗಳಿಸಿರುವ ಒಟ್ಟು ಮತದ ಪ್ರಮಾಣ (ಶೇ.44) ಭಾರತೀಯ ಜನತಾ ಪಕ್ಷ ಪಡೆದಿರುವ (ಶೇ.39.7) ಒಟ್ಟು ಮತಗಳಿಗಿಂತ ಹೆಚ್ಚಿದೆ. ಹಾಗಾಗಿ ಸದ್ಯದಲ್ಲೇ ವಿಧಾನಸಭೆ ಚುನಾವಣೆ ಎದುರಿಸಲಿರುವ ಗುಜರಾತ್, ಕರ್ನಾಟಕ, ಹಿಮಾಚಲ ಪ್ರದೇಶ, ಮೇಘಾಲಯ, ಮಣಿಪುರ, ನಾಗಲ್ಯಾಂಡ್, ತ್ರಿಪುರಾಗಳಲ್ಲಿ ವಿರೋಧ ಪಕ್ಷಗಳು ಒಟ್ಟಾಗಿ ಚುನಾವಣೆ ಎದುರಿಸಿ ಫ್ಯಾಸಿಸ್ಟ್ ಬಿಜೆಪಿಯನ್ನು ಸೋಲಿಸಬೇಕೆ ಹೊರತು ಪ್ರತ್ಯೇಕವಾಗಿ ಸ್ಪರ್ಧಿಸಿ ಗೆಲ್ಲುತ್ತೇವೆ ಎಂಬ ಹುಂಬತನ ಮಾಡಬಾರದು. ರಾಜಕೀಯ ಪಕ್ಷಗಳ ಮೇಲೆ ಜನರು ಇಂತಹ ಒತ್ತಡವನ್ನು ತರಬೇಕಿದೆ. ‘ಮತ್ತೆ ಮತ್ತೆ ಚಾರಿತ್ರಿಕ ತಪ್ಪುಗಳನ್ನು ಮಾಡಬೇಡಿ, ಇದು ನೀವು ಈ ದೇಶಕ್ಕೆ ಸಲ್ಲಿಸಬೇಕಾದ ಕರ್ತವ್ಯ. ಒಂದಾಗಿ ಚುನಾವಣೆ ಎದುರಿಸದೇ ಹೋದರೆ ಇತಿಹಾಸ ನಿಮ್ಮನ್ನು ಕ್ಷಮಿಸುವುದಿಲ್ಲ’ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಬೇಕಿದೆ.

ಇಷ್ಟು ಸಣ್ಣವಳಿಂದ ಎಷ್ಟು ದೊಡ್ಡ ಮಾತು ಎನ್ನಬಹುದು. ಆದರೆ ನಾನು ಇದನ್ನು ಹೇಳುವ ಸ್ವಾತಂತ್ರ್ಯ ತೆಗೆದುಕೊಳ್ಳುತ್ತಿದ್ದೇನೆ. ಮುಂದಿನ ಚುನಾವಣೆಗಳಲ್ಲಿ ಇನ್ನೊಂದು ರಾಜ್ಯವೂ ಬಿಜೆಪಿಯ ಆಡಳಿತಕ್ಕೆ ಸಿಗಬಾರದು. ಇದೊಂದೇ ನಮ್ಮ ಗುರಿಯಾಗಿರಬೇಕು. ಯಾಕೆಂದರೆ ಬಿಜೆಪಿಯನ್ನು ನಿರ್ದೇಶಿಸುತ್ತಿರುವ ಆರ್. ಎಸ್. ಎಸ್. ಈ ದೇಶದ ಸಂವಿಧಾನವನ್ನು ಮಾನ್ಯ ಮಾಡುವುದಿಲ್ಲ ಹಾಗಾಗಿ ಅವರು ಈ ದೇಶದ ಆಡಳಿತ ನಡೆಸಲು ಅರ್ಹರಲ್ಲ. ಗುಜರಾತಿನ ಪಠ್ಯಪುಸ್ತಕಗಳನ್ನು ಕೇಸರೀಕರಣ ಮಾಡಲಾಗಿದ್ದು ಮಕ್ಕಳ ಮನಸ್ಸಿನಲ್ಲಿ ದ್ವೇಷ ಬಿತ್ತಲಾಗುತ್ತಿದೆ. ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಸಂಸ್ಥೆಯು ‘ಮನು ಸ್ಮೃತಿ ಈ ದೇಶದ ಸಂವಿಧಾನ ಆಗಬೇಕು’ ಎನ್ನುವ ರಾಗ ತೆಗೆದಿದೆ. ದೇಶದ ಬಹುಜನರ ಸಂಸ್ಕೃತಿಯ ಮೇಲೆ ಒಂದು ಸಣ್ಣ ಸಮುದಾಯದ ಸಂಸ್ಕೃತಿಯನ್ನು ಹೇರಲಾಗುತ್ತಿದೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮೂರ್ತಿಗಳನ್ನು ಸ್ಥಾಪಿಸಿ ತಾವು ದಲಿತರಪರ ಎಂದು ತೋರಿಸಿಕೊಳ್ಳಲು ಯತ್ನಿಸುತ್ತಿರುವ ಮೋದಿ ಹಾಗೂ ಆದಿತ್ಯನಾಥ ಅವರುಗಳು ಅಂಬೇಡ್ಕರ್ ಅವರ ವಿಚಾರಧಾರೆ ಜನರ ನಡುವೆ ಕೊಂಡೊಯ್ಯುವ ಧೈರ್ಯ ಮಾಡುತ್ತಿಲ್ಲ. ಬೇಕಾದರೆ ಅವರ ಪುಸ್ತಕಗಳು ಅಂಗಡಿಗಳಲ್ಲಿ ಸಿಗದಂತೆ ಮಾಡಬಲ್ಲರು.

ಇವತ್ತಿನ ಒಂದು ದೊಡ್ಡ ಸಮಸ್ಯೆ ಎಂದ–ರೆ, ಬಹುದೊಡ್ಡ ಜನವರ್ಗವನ್ನು ರಾಜಕೀಯ ಚಿಂತನೆಗಳಿಂದ, ರಾಜಕೀಯ ಪ್ರಕ್ರಿಯೆಗಳಿಂದ ದೂರ ಮಾಡಲಾಗುತ್ತಿದೆ. ನಾವು, 50 ವರ್ಷ ಮೇಲ್ಪಟ್ಟವರು, ರಾಷ್ಟ್ರೀಯ ಚಳವಳಿಯ ಹಿನ್ನಲೆಯಲ್ಲಿ ರೂಪಿಸಲಾದ ಶಿಕ್ಷಣದ ಫಲಾನುಭವಿಗಳಾಗಿದ್ದೇವೆ. ನಮ್ಮ ರಾಜಕೀಯ ಪ್ರಜ್ಞೆ ಸಹಜವಾಗಿ ರೂಪುಗೊಂಡಿತ್ತು. ಆದರೆ ಕೋಮುವಾದ ಮತ್ತು ಆರ್ಥಿಕ ಉದಾರೀಕರಣಗಳು ರಾಷ್ಟ್ರೀಯ ಚಳವಳಿಯ ಜೊತೆ ನಮಗಿದ್ದ ಸಂಬಂಧವನ್ನು ಛಿದ್ರ ಛಿದ್ರಗೊಳಿಸಿಬಿಟ್ಟಿವೆ. ಈಗಿನ ದೊಡ್ಡ ಜನ ಸಮೂಹವನ್ನು ರಾಜಕೀಯಕರಣಗೊಳಿಸುವುದು ಹೇಗೆ? ಎನ್ನುವುದು ದೊಡ್ಡ ಸವಾಲಾಗಿದೆ. ವ್ಯಾಪಕ ನೆಲೆಯ ಸಂಘಟನೆಗಳು ನಮಗಿಲ್ಲ. ಹಾಗಾಗಿ ಇದನ್ನು ರಾಜಕೀಯ ಪಕ್ಷಗಳೇ ಮಾಡಬೇಕು. ಜನರ ರಾಜಕೀಯ ಪ್ರಜ್ಞೆಯನ್ನು ಹೆಚ್ಚಿಸಬೇಕು; ಮೈತ್ರಿ ಕೂಟಗಳನ್ನು ರಚಿಸಿಕೊಳ್ಳಬೇಕು.

ಕಳೆದ 30 ವರ್ಷಗಳಲ್ಲಿ ಭಾರತ ಎರಡು ಪ್ರಮುಖ ದಾಳಿಗಳಿಂದ ನಲುಗಿ ಹೋಗಿದೆ. ಒಂದು ಫ್ಯಾಸಿಸ್ಟ್ ಮನೋಭಾವದ ಬಹುಸಂಖ್ಯಾತರು ಹಿಂದುತ್ವದ ಹೆಸರಿನಲ್ಲಿ ನಡೆಸುತ್ತಿರುವ ದಾಳಿ, ಮತ್ತೊಂದು ಆರ್ಥಿಕ ಉದಾರೀಕರಣ. ಈ ಎರಡೂ ಸೇರಿಕೊಂಡು ಪರಿಸ್ಥಿತಿ ಭಿಗಡಾಯಿಸಿದೆ. ಒರಿಸ್ಸಾದ ಉದಾಹರಣೆ ನೋಡಿ. ಒರಿಸ್ಸಾದಲ್ಲಿ ಎಲ್ಲೆಲ್ಲಿ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಗೆ ಜಲ್–ಜಂಗಲ್–ಜಮೀನ್ ಹೋರಾಟಗಳು ನಡೆಯುತ್ತಿವೆ, ಸಾಮೂಹಿಕ ಚಳವಳಿಗಳು ಜೀವಂತ ಇವೆ, ಅಲ್ಲೆಲ್ಲೂ ಆರ್.ಎಸ್.ಎಸ್. ಶಾಖೆಗಳಿಲ್ಲ. ಆದರೆ, ಇಂತಹ ಚಳವಳಿಗಳಿಲ್ಲದ ಕಡೆಗಳಲ್ಲಿ ಶಾಖೆಗಳು ತಲೆ ಎತ್ತಿವೆ. ಆರು ವಾರಗಳ ಹಿಂದೆ ಗುರುಗಾಂವ್ ಸೆಷನ್ಸ್ ನ್ಯಾಯಾಲಯವು ಉತ್ತಮ ಸೌಲಭ್ಯಗಳನ್ನು ಬೇಡಿ ಚಳವಳಿ ನಿರತರಾಗಿದ್ದ 12 ಜನ ಗುತ್ತಿಗೆ

ಪುಟ 10 ಕ್ಕೆ



ತೀಸ್ತಾ ‘ಸಂವಿಧಾನದ ಕಾಲಾಳು’ ಕನ್ನಡದಲ್ಲಿ

‘ಲೆಫ್ಟ್ ವರ್ಡ್’ ಪ್ರಕಟಿಸಿದ ಅವರ ಇತ್ತೀಚಿನ ಪುಸ್ತಕ “ಫುಟ್ ಸೋಲ್ಜರ್ ಆಫ್ ಕನ್ಸಿಟ್ಯೂಶನ್” (ಸಂವಿಧಾನದ ಕಾಲಾಳು) ಅವರ ನೆನಪುಗಳ ಸಂಗ್ರಹ. ಆದರೂ ಅದು ಮೇಲೆ ಹೇಳಿದ ಮೂರು ಕೋಮುದಂಗೆಗಳಲ್ಲಿ ಅವರು ನಡೆಸಿದ ಹೋರಾಟದ ಚಿತ್ರಣ ಕೂಡಾ. ಕೋಮುದಂಗೆಗಳಿಗೂ, ಅದರ ವಿರುದ್ಧ ಸಾಮಾಜಿಕ ಕಾರ್ಯಕರ್ತರು ಮಾಡಬಹುದಾದ ಕೆಲಸಗಳ ಬಗೆಗೂ ಅಮೂಲ್ಯ ಒಳನೋಟಗಳನ್ನು ಬೀರುವ ಈ ಪುಸ್ತಕವನ್ನು ಎಸ್. ಸತ್ಯಾ ಅವರು ಕನ್ನಡಕ್ಕೆ ಅನುವಾದ ಮಾಡುತ್ತಿದ್ದಾರೆ. ಅದನ್ನು ಕ್ರಿಯಾ ಪುಸ್ತಕ ಪ್ರಕಟಿಸಲಿದೆ.

‘ಸಂವಿಧಾನದ ಕಾಲಾಳು’ ಎಂಬ ತಮ್ಮ ಪುಸ್ತಕದ ಕುರಿತ ಸಂವಾದದಲ್ಲಿ ತೀಸ್ತಾ ಹೇಳಿದ್ದು:

ಈ ಪುಸ್ತಕ ನನ್ನ ಒಬ್ಬಳ ಅನುಭವಗಳ ದಾಖಲೆಯಲ್ಲ. ಈ ಸಮಾಜದಲ್ಲಿ ಜನರ ಹಕ್ಕುಗಳಿಗಾಗಿ ಹೋರಾಡುತ್ತಿರುವ ಅನೇಕ ಜನರಿದ್ದಾರೆ. ಅವರುಗಳ ಕಥೆಗಳು, ಅವರ ಅನುಭವಗಳು ದಾಖಲಾಗಬೇಕು. ಅವುಗಳು ಪುಸ್ತಕಗಳಾಗಿ ಪ್ರಕಟವಾಗಬೇಕು. ಅನೇಕ ಪ್ರಕಾಶಕರು ಅಂತಹ ಕಥನಗಳನ್ನು ಪ್ರಕಟಿಸಲು ಆಸಕ್ತರಾಗಿದ್ದಾರೆ. ನನ್ನ ಈ ಪುಸ್ತಕ ಅಂತಹ ಕಥನಗಳ ಸರಮಾಲೆಯ ಒಂದು ಭಾಗವಾಗಿದೆ ಅಷ್ಟೆ. ಈ ಸಮಾಜದಲ್ಲಿ ಅನೇಕ ಹೋರಾಟಗಾರರಿದ್ದಾರೆ. ಅವರು ಹೆಚ್ಚು ಪರಿಚಿತರಲ್ಲ. ಅವರ ಕಥನಗಳು ದಾಖಲಾಗಿ ಪ್ರಕಟವಾದರೆ ನಮಗೆ ನಿಜವಾದ ಭಾರತದ ದರ್ಶನವಾಗುತ್ತದೆ.



ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದ ರೈತರ ಹೋರಾಟಗಳು ಕೃಷಿ ಕ್ಷೇತ್ರದಲ್ಲಿನ ಪರಿವರ್ತನೆ ಹಾಗೂ ರೈತರ ಸಬಲೀಕರಣದ ಮೋದಿ ಸರಕಾರದ ಬಡಾಯಿಗಳನ್ನು ಅದ್ಭುತ ರೀತಿಯಲ್ಲಿ ಠುಸ್‌ಗೊಳಿಸಿವೆ.ಮುಂದಿನ ಐದು ವರ್ಷಗಳಲ್ಲಿ ರೈತರ ಆದಾಯ ದುಪ್ಪಟ್ಟು ಆಗಲಿದೆ ಎಂಬ ಮೋದಿ ಸರಕಾರದ ಹೇಳಿಕೆ ರೈತರಿಗೆ ಈಗ ಒಂದು ಕ್ರೂರ ತಮಾಷೆಯಾಗಿ ಕಾಣುತ್ತದೆ.



ಬಟಾ ಬಯಲಾದ ಬಿಜೆಪಿ ಸರಕಾರಗಳ ರೈತ–ವಿರೋಧಿ ನಿಲವು







ಮಧ್ಯ ಪ್ರದೇಶದ ಮಂದ್‌ಸೌರ್ ಜಿಲ್ಲೆಯಲ್ಲಿ ಜೂನ್ ಆರರಂದು ಪೊಲೀಸ್ ಗೋಲೀಬಾರ್‌ನಲ್ಲಿ ಐವರು ರೈತರು ಸಾವಿಗೀಡಾದ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾದ ದಿನವೇ (ಜೂನ್ 7) ಮೋದಿ ಸರಕಾರದ ಮೂರು ವರ್ಷಗಳ ಆಡಳಿತದಲ್ಲಿ ಕೃಷಿ ಕ್ಷೇತ್ರದಲ್ಲಿನ ಯಶಸ್ಸಿನ ಬಗ್ಗೆ ಅದೇ ಪತ್ರಿಕೆಗಳಲ್ಲಿ ಪೂರ್ಣ ಪುಟದ ಜಾಹಿರಾತುಗಳು ಪ್ರಕಟವಾಗಿದ್ದು ಪರಿಸ್ಥಿತಿಯ ವ್ಯಂಗ್ಯವೇ ಸರಿ.

ತಮ್ಮ ಬೆಳೆಗಳಿಗೆ ನ್ಯಾಯ ಬೆಲೆ ಸಿಗಬೇಕು ಹಾಗೂ ಸಾಲ ಸೌಲಭ್ಯ ಬೇಕೆಂದು ಮಂದ್‌ಸೌರ್, ನೀಮುಚ್, ಝಬುವಾ, ರತ್ಲಾಮ್ ಮತ್ತು ಉಜ್ಜೈನಿ ಜಿಲ್ಲೆಗಳ ರೈತರು ಜೂನ್ ಒಂದರಿಂದ ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ.

ರೈತರು ತರಕಾರಿ ಹಾಗೂ ಹಾಲನ್ನು ಬೀದಿಗೆ ಚೆಲ್ಲುತ್ತಿದ್ದಾರೆ. ಇದಕ್ಕೆ ಶಿವರಾಜ್ ಚೌಹಾಣ್ ಸರಕಾರದ ಸಪಂದನವೆಂದರೆ ರೈತರನ್ನು ಗುಂಡಿಟ್ಟು ಸಾಯಿಸುವುದು. ಮಂದ್‌ಸೌರ್ ಜಿಲ್ಲೆಯಲ್ಲಿ ಇನ್ನೂ ಒಬ್ಬ ರೈತರ ಸಾವಿನೊಂದಿಗೆ ಗೋಲಿಬಾರಿಗೆ ಬಲಿಯಾದವರ ಸಂಖ್ಯೆ ಆರಕ್ಕೇರಿದೆ. ಇಷ್ಟಾದರೂ ಗಲಭೆಗಳಿಗೆ ಸಮಾಜ–ವಿರೋಧಿ ಶಕ್ತಿಗಳು ಹೊಣೆ ಎಂದು ಹೇಳುವ ಮೂಲಕ ಬಿಜೆಪಿ ಸರಕಾರ ರೈತರ ವ್ಯಾಪಕ ಚಳವಳಿಯ ವಾಸ್ತವತೆಯನ್ನು ನಿರಾಕರಿಸಲು ಹವಣಿಸುತ್ತಿದೆ.

ಬಿಜೆಪಿ ಆಡಳಿತವೇ ಇರುವ ನೆರೆಯ ಮಹಾರಾಷ್ಟ್ರದಲ್ಲಿ ಕೂಡ ರೈತರು ಜೂನ್ ಒಂದರಿಂದ ರಾಜ್ಯದಾದ್ಯಂತ ಮುಷ್ಕರ ನಡೆಸಿದ್ದಾರೆ. ಚಳವಳಿಯನ್ನು ವಾಪಸ್ ಪಡೆಯುವಂತೆ ಕೆಲವು ರೈತ ನಾಯಕರ ಒಂದು ವಿಭಾಗದ ಕರೆಯನ್ನು ನಿರ್ಲಕ್ಷಿಸಿ ರಾಜ್ಯ ಕಿಸಾನ್ ಸಭಾ ಮತ್ತು ಇತರ ರೈತ ಸಂಘಟನೆಗಳು ಹೋರಾಟವನ್ನು ಮುಂದುವರಿಸಲು ನಿರ್ಧರಿಸಿವೆ. ರೈತರು ಕರೆ ನೀಡಿದ ಜೂನ್ ಐದರ ಮಹಾರಾಷ್ಟ್ರ ರಾಜ್ಯ ಬಂದ್‌ಗೆ ಅತ್ಯುತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಎರಡೂ ರಾಜ್ಯಗಳಲ್ಲಿ ಹೋರಾಟ ಮುಂದುವರಿದಿದೆ.

ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದ ರೈತರ ಹೋರಾಟಗಳು ಕೃಷಿ ಕ್ಷೇತ್ರದಲ್ಲಿನ ಪರಿವರ್ತನೆ ಹಾಗೂ ರೈತರ ಸಬಲೀಕರಣದ ಮೋದಿ ಸರಕಾರದ ಬಡಾಯಿಗಳನ್ನು ಅದ್ಭುತ ರೀತಿಯಲ್ಲಿ ಠುಸ್‌ಗೊಳಿಸಿವೆ.



ಪ್ರಕಾಶ ಕಾರಟ್

ಕನಿಷ್ಟ ಬೆಂಬಲ ಬೆಲೆಯನ್ನು ನಿಗದಿಪಡಿಸುವ ಮೂಲಕ ಉತ್ಪಾದನೆ ವೆಚ್ಚ ಸರಿದೂಗಿಸುವುದರ ಜೊತೆ ಶೇಕಡಾ 50 ಲಾಭ ಬರುವ ರೀತಿಯಲ್ಲಿ ಎಲ್ಲಾ ಬೆಳೆಗಳಿಗೆ ನ್ಯಾಯಯುತ ಬೆಲೆ ನೀಡಬೇಕೆಂಬುದು ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶ ಈ ಎರಡೂ ರಾಜ್ಯಗಳ ರೈತರ ಮೂಲಭೂತ ಬೇಡಿಕೆಯಾಗಿದೆ. ಇದು ರೈತರ ರಾಷ್ಟ್ರೀಯ ಆಯೋಗದ ಶಿಫಾರಸು ಆಗಿದ್ದು ಬಿಜೆಪಿ ತನ್ನ ಚುನಾವಣೆ ಪ್ರಣಾಳಿಕೆಯಲ್ಲಿ ಅದನ್ನು ಸೇರಿಸಿತ್ತು. ಆದರೆ ಅದನ್ನು ಅನುಷ್ಠಾನಗೊಳಿಸುವ ವಿಚಾರದಲ್ಲಿ ಮೋದಿ ಸರಕಾರ ಆಶ್ವಾಸನೆಯನ್ನು ಮುರಿಯುವ ಧೋರಣೆ ತಳೆದಿವೆ. ಅದು ಅನೇಕ ಬೆಳೆಗಳಿಗೆ ನಿಜವಾದ ಉತ್ಪಾದನಾ ವೆಚ್ಚಕ್ಕಿಂತಲೂ ಕೆಲಮಟ್ಟದಲ್ಲಿ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನಿಗದಿಪಡಿಸುತ್ತಿದೆ. ಅಷ್ಟು ಮಾತ್ರವಲ್ಲದೆ, ವೆಚ್ಚ+50% ವನ್ನು ನೀಡಲು ಸಾಧ್ಯವಿಲ್ಲ ಎಂದು ಖಡಾಖಂಡಿತವಾಗಿ ಹೇಳಿ ಸರಕಾರ ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಕೂಡ ಸಲ್ಲಿಸಿದೆ.

ಗ್ರಾಮೀಣ ಸಂಕಟ ಹಾಗೂ ರೈತರ ಆತ್ಮಹತ್ಯೆಗಳ ಹತಾಶೆಯಿಂದ ಸಾಲ ಮನ್ನಾ ಮಾಡಬೇಕೆಂಬ ಬೇಡಿಕೆಯನ್ನು ಎತ್ತಲಾಗುತ್ತಿದೆ. ಬಿಜೆಪಿ ಆಡಳಿತದ ಮಹಾರಾಷ್ಟ್ರದಲ್ಲಿ 2015–16ರಲ್ಲಿ ಅತಿ ಹೆಚ್ಚು ರೈತರ ಆತ್ಮಹತ್ಯೆಗಳಾಗಿವೆ. 2015ರಲ್ಲಿ ಇಡೀ ದೇಶದಲ್ಲಿ ವರದಿಯಾದ ರೈತರ ಆತ್ಮಹತ್ಯೆಗಳಲ್ಲಿ ಶೇಕಡಾ 51.85ರಷ್ಟು ಅಂದರೆ 6535 ಆತ್ಮಹತ್ಯೆಗಳು ಬಿಜೆಪಿ ಆಡಳಿತದ ಮಧ್ಯ ಪ್ರದೇಶ ಹಾಗೂ ಛತ್ತೀಸ್‌ಗಢದಲ್ಲಿ ನಡೆದಿವೆ.

ಭಾರೀ ಪ್ರಚಾರದ 'ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನಾ' (ಬೆಳೆ ವಿಮೆ)ಮತ್ತು 'ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನಾ'(ನೀರಾವರಿ)ಗಳು ಕೇವಲ ಭ್ರಮೆ ಎಂಬುದು ಸಾಬೀತಾಗಿದೆ. ಬೆಳೆ ವಿಮೆ ಯೋಜನೆಯಡಿ ಅನುದಾನದಲ್ಲಿ ದೊಡ್ಡ ಪಾಲು ಖಾಸಗಿ ವಿಮಾ ಕಂಪೆನಿಗಳಿಗೆ ಹೋಗಿದೆಯೇ ಹೊರತು ರೈತರಿಗೆ ಅದರಿಂದ ಪ್ರಯೋಜನವಾಗಿಲ್ಲ. ಕೃಷಿ ಸಿಂಚಾಯಿ ಯೋಜನೆಯಡಿ ಈಗ ನೀಡಿರುವ ಮೊತ್ತವನ್ನು ನೋಡಿದರೆ ನೀರಾವರಿಯಿಲ್ಲದ ಜಮೀನಿಗೆ ಹೆಕ್ಟೇರ್ ಒಂದಕ್ಕೆ ಹತ್ತು ಸಾವಿರ ರೂಪಾಯಿ ಕೂಡ ಸಿಗುವುದಿಲ್ಲ.

ತೆಲಂಗಾಣ ಮತ್ತು ಆಂಧ್ರ ಪ್ರದೇಶದಲ್ಲಿ ಮೆಣಸು ಅಥವಾ ಗುಜರಾತ್ ಮತ್ತು ಮಧ್ಯ ಪ್ರದೇಶದಲ್ಲಿ ಈರುಳ್ಳಿ ಬೆಳೆಗಳು ಕುಸಿದಿರುವ ಹಿನ್ನೆಲೆಯಲ್ಲಿ ಗಮನಿಸಿದರೆ, ಮುಂದಿನ ಐದು ವರ್ಷಗಳಲ್ಲಿ ರೈತರ ಆದಾಯ ದುಪ್ಪಟ್ಟು ಆಗಲಿದೆ ಎಂಬ ಮೋದಿ ಸರಕಾರದ ಹೇಳಿಕೆ ರೈತರಿಗೆ ಒಂದು ಒಂದು ಕ್ರೂರ ತಮಾಷೆಯಾಗಿ ಕಾಣುತ್ತದೆ.

ಬಿಜೆಪಿಯ ರಾಜ್ಯ ಸರಕಾರಗಳು ಮತ್ತು ಕೇಂದ್ರದ ಮೋದಿ ಸರಕಾರದ ನಿರ್ಲಕ್ಷ್ಯದ ನಿಲುವಿನಿಂದಾಗಿಯೇ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದಲ್ಲಿ ವ್ಯಾಪಕ ಪ್ರತಿಭಟನೆಗಳು ನಡೆಯುತ್ತಿವೆ.

ಮೋದಿ ಸರಕಾರವು ರೈತರಿಗೆ ಸಂಕಟಗಳನ್ನು ತರುವ ಈ ಘಾತಕ ಧೋರಣೆಯನ್ನು ನಿಲ್ಲಿಸಬೇಕು. ಉತ್ಪಾದನೆ ವೆಚ್ಚ ಪ್ಲಸ್ ಶೇಕಡಾ 50 ಲಾಭ ಆಧರಿತ ನ್ಯಾಯ ಬೆಲೆಯನ್ನು ಕೃಷಿ ಉತ್ಪನ್ನಗಳಿಗೆ ನೀಡುವ ತನ್ನ ಚುನಾವಣೆ ವಾಗ್ದಾನವನ್ನು ಈಡೇರಿಸಲು ಅದು ತಕ್ಷಣ ಮುಂದಾಗಬೇಕು. ರಾಜ್ಯ ಸರಕಾರಗಳು ಸಾಲ ಮನ್ನಾವೂ ಸೇರಿದಂತೆ ಋಣ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು.

ಮೊದಲಿಗೆ, ಮಹಾರಾಷ್ಟ್ರ ಮತ್ತು ಮಧ್ಯ ಪ್ರದೇಶದ ಬಿಜೆಪಿ ರಾಜ್ಯ ಸರಕಾರಗಳು ಪ್ರತಿಭಟನೆ ನಿರತ ರೈತರ ಮೇಲೆ ಪೊಲೀಸ್ ದೌರ್ಜನ್ಯ ನಡೆಸುವುದನ್ನು ನಿಲ್ಲಿಸಬೇಕು ಹಾಗೂ ಅವರ ನೈಜ ಬೇಡಿಕೆಗಳ ಬಗ್ಗೆ ಮಾತುಕತೆ ನಡೆಸಬೇಕು.

ಅನು: ವಿಶ್ವ



ಸೀತಾರಾಂ ಯೆಚುರಿ

ಟ್ವಿಟರ್‌ನಲ್ಲಿ

twitter.com/SitaramYechury
FB:https://www.facebook.com/ComradeSRY

ನೋಟು ರದ್ಧತಿಯಿಂದ ಸಾಲ ನೀಡಿಕೆಯಲ್ಲಿ ಇಳಿಕೆ ಗ್ರಾಮೀಣ ಪ್ರದೇಶಗಳಲ್ಲೇ ಅತಿ ಹೆಚ್ಚು

–ಸುದ್ದಿ, ಜೂನ್5

ನೋಟು ರದ್ಧತಿಯ ಅನಾಹುತದ ಹೆಚ್ಚಿನ ಹೊರೆಯನ್ನು ಗ್ರಾಮೀಣ ಭಾರತ ಹೊತ್ತಿದೆ. ಇದು ಆಗಲೇ ಕೆಟ್ಟ ಸರಕಾರೀ ಧೊರಣೆಗಳಿಂದ ನರಳುತ್ತಿದ್ದ ರೈತರ ನೋವುಗಳಿಗೆ ಮತ್ತಷ್ಟು ಸೇರಿಸಿತು.

ಮಂದ್‌ಸೌರ್‌ನಲ್ಲಿ ರೈತರ ಮೇಲೆ ಗೋಲೀಕಾಂಡ

–ಜೂನ್ 6

ಮಧ್ಯಪ್ರದೇಶದ ಇಂದಿನ ಘಟನೆ ಬಿಜೆಪಿ ಹೇಳುವುದಕ್ಕೂ ಮಾಡುವುದಕ್ಕೂ ಇರುವ ಅಂತರವನ್ನು ತೋರಿಸುತ್ತದೆ.' ಸಾಯಿಸಲ್ಪಟ್ಟ ರೈ ತರ ಕುಟುಂಬಗಳಿಗೆ ಸಂತಾಪಗಳು.

ಗೋಲೀಬಾರ್‌ನಲ್ಲಿ ಸಾವಿನ ಸಂಖ್ಯೆ ಐದಕ್ಕೇರಿದೆ. ಸರಕಾರದಿಂದ ಇಂಟರ್‌ನೆಟ್ ಬಂದ್

–ಜೂನ್ 6

ಬಿಜೆಪಿ ಆಳ್ವಿಕೆಯಲ್ಲಿ ಎಲ್ಲ ಪ್ರತಿಭಟನೆಗಳಿಗೆ ಗೋಲೀಬಾರೇ ಏಕೈಕ ಪ್ರತಿಕ್ರಿಯೆ? ಜತೆಗೆ ಇಂಟರ್‌ನೆಟ್ ಬಂದ್ ಮತ್ತು ಮಾಹಿತಿಯ ಮೇಲೆ ಪ್ರತಿಬಂಧ.

ನಾಮೋ ಆಪ್ ಇಲ್ಲದೆ ರೈತರು ಕೇವಲ ವಿದೇಶಗಳಲ್ಲಿ ಸಾವಿನ ಬಗ್ಗೆ ಕಾಳಜಿ ಇರುವ ಮೌನಿ ಪ್ರಧಾನಿಗೆ ತಮ್ಮ ಅಳಲು ಮುಟ್ಟಿಸುವುದು ಹೇಗೆ?

ಮಹಾರಾಷ್ಟ್ರದಲ್ಲಿ ರೈತರ ಮುಷ್ಕರ ಆರನೇ ದಿನ ಪ್ರವೇಶಿಸುತ್ತಿದೆ, ನಾಶಿಕ್‌ನಲ್ಲಿ ಇನ್ನೊಬ್ಬ ರೈತ 27 ವರ್ಷದ ನವನೀತ ಬಾಲೇರಾವ್ ಆತ್ಮಹತ್ಯೆ

–ಕ್ವಿಂಟ್.ಕಾಂ, ಜೂನ್ 6

ರೈತರ ಬಗ್ಗೆ ಭಾರತದಾದ್ಯಂತ ಬಿಜೆಪಿ ಸರಕಾರಗಳ ನಿರ್ಲಕ್ಷ್ಯ ನಿಂದನೀಯ ಮತ್ತು ಅಮಾನವೀಯ.

2022ರೊಳಗೆ 50 ಕೋಟಿ ಜನಗಳಿಗೆ ಕೌಶಲ ತರಬೇತಿಯ ಗುರಿಯನ್ನು ಸರಕಾರ ಕೈಬಿಟ್ಟಿದೆ. ಕೌಶಲ ಅಭಿವೃದ್ಧಿ ಮಂತ್ರಿಗಳು ಹೊಸ ಸಂಖ್ಯೆಯನ್ನು ತಿಳಿಸಲು ನಿರಾಕರಿಸಿದ್ದಾರೆ.

–ಲೈವ್ ಮಿಂಟ್, ಜೂನ್6

ಹಾಗಾದರೆ ಸ್ಕಿಲ್ ಇಂಡಿಯಾ ಕೈಬಿಟ್ಟರು. ಸ್ಟೇಂಡ್ ಅಪ್, ಸ್ಟಾರ್ಟ್ ಅಪ್ ಇಂಡಿಯಾ ಮುಂತಾದ ಪದಮುಂಜಗಳದ್ದೂ ಅಷ್ಟೇ.

ಪ್ರಮುಖ ಪತ್ರಿಕೆಗಳಲ್ಲಿ ಕೃಷಿಯಲ್ಲಿ ಮೋದಿ ಸರಕಾರದ ಸಾಧನೆಗಳ ಪೂರ್ಣ ಪುಟದ ವರ್ಣ ಜಾಹೀರಾತು–ಜೂನ್ 6

ಎಲ್ಲಾಕಡೆ ರೈತರು ಪ್ರತಿಬಟಿಸುತ್ತಿದ್ದಾರೆ, ಗುಂಡೇಟು ತಿನ್ನುತ್ತಿದ್ದಾರೆ ಅಥವ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಒಬ್ಬ ಮನುಷ್ಯ ಕೃಷಿಯ ವೇಷದಲ್ಲಿ ತನ್ನ ಆಚರಣೆ ಮಾಡಿಕೊಳ್ಳುತ್ತಿದ್ದಾರೆ.

ಭೋಪಾಲದೊಂದಿಗೆ ಇಂದೋರ್, ಉಜ್ಜಯಿನಿ ಸಂಪರ್ಕ ಕಡಿತ, ಸಿಆರ್‌ಪಿಎಫ್ ಮತ್ತು ಆರ್‌ಎಎಫ್ ಪಡೆಗಳ ಆರು ಕಂಪನಿಗಳ ರವಾನೆ

–ಅಮರ್‌ಉಜಾಲ, ಜೂನ್ 7

ಈಗ ಬಿಜೆಪಿ ಮಂದ್‌ಸೌರ್ 'ಯುದ್ಧದ ರೀತಿಯ ಚಲಯು' ಎಂದು ಸಾರುತ್ತದೆಯೇ? ರಾಜಕೀಯ ಪಕ್ಷಗಳಿಗೆ ಪ್ರವೇಶ ನಿರಾಕರಿಸಿ ಈಗಾಗಲೇ ಅಲ್ಲಿ ಅಘೋಷಿತ ತುರ್ತು ಪರಿಸ್ಥಿತಿಯಿದೆ

ನೋಟುರದ್ಧತಿಯಲ್ಲಿ ರೈತರ ರಕ್ತ–ರಿಝರ್ವ್ ಬ್ಯಾಂಕಿನ ಒಂದು ಟಿಪ್ಪಣಿ ನೋಟುರದ್ದತಿಯಿಂದ ತರಕಾರಿಗಳ ಬೆಲೆಗಳು ಗಮನಾರ್ಹವಾಗಿ ಕುಸಿದವು ಎಂದು ಹೇಳಿದೆ

–ದಿ ಟೆಲಿಗ್ರಾಫ್, ಜೂನ್ 8

ನೋಟು ರದ್ಧತಿಯಿಂದ ಅತಿ ಹೆಚ್ಚು ನರಳಿರುವುದು ರೈತರು, ಕಾರ್ಮಿಕರು ಮತ್ತು ಬಡಜನರು ಎಂದು ನಾವು ಹೇಳುತ್ತ ಬಂದಿರುವುದನ್ನು ಈಗ ರಿಝರ್ವ್ ಬ್ಯಾಂಕ್ ಹೇಳುತ್ತಿದೆ.

ಭೀತಿಯಲ್ಲಿ ಕೃಷಿ ಮಂತ್ರಿಗಳು–ಅವರು ಮೂರು ವರ್ಷಗಳಲ್ಲಿ ತಮ್ಮ ಇಲಾಖೆಯ ಸಾಧನೆಗಳ ಕುರಿತು ಏರ್ಪಡಿಸಿದ್ದ ಮಾಧ್ಯಮ ಸಮ್ಮೇಳನವನ್ನು 'ಅನಿವಾರ್ಯ' ಕಾರಣಗಳಿಗಾಗಿ ರದ್ದು ಮಾಡಿರುವುದಾಗಿ ಪ್ರಕಟಿಸಿದ್ದಾರೆ.

–ಸುದ್ದಿ, ಜೂನ್ 8

ಇಂತಹ ಒಂದು ಧೀರ ಸರಕಾರ, ಪ್ರಶ್ನೆಗಳನ್ನು ಎದುರಿಸಲಾರದು. ಸಂಪುಟ ಸಭೆಯ ನಂತರ ಮಾಹಿತಿ ನೀಡಿಕೆಯೂ ಇಲ್ಲ.

ನಾವೆಲ್ಲ ಕೃಷಿ ಕಲ್ಯಾಣ ಸೆಸ್ ತೆರುತ್ತಿರುವುದು ಕೇಂದ್ರ ಸರಕಾರ ಹೆಚ್ಚು ಬುಲೆಟ್‌ಗಳನ್ನು ಖರೀದಿಸಿ ರೈತರ ಮೇಲೆ ಹಾರಿಸಲಿ ಎಂದೇ?

ನಮ್ಮಸಂವಿಧಾನ ನಮ್ಮಹೆಮ್ಮೆ

ಬೃಹತ್ ಸಂವಿಧಾನ

ಇದು ವಿಶ್ವದಲ್ಲಿಯೇ ಬೃಹತ್ ಸಂವಿಧಾನವಾಗಿದೆ. ಮೂಲ ಸಂವಿಧಾನವು ಒಟ್ಟು 395 ವಿಧಿಗಳು, 8 ಅನುಸೂಚಿಗಳು ಮತ್ತು 8 ಭಾಗಗಳನ್ನು ಒಳಗೊಂಡಿತ್ತು. ಆದರೆ ಪ್ರಸ್ತುತ ಸಂವಿಧಾನವು ಒಟ್ಟು 465 ವಿಧಿಗಳು, 12 ಅನುಸೂಚಿಗಳು ಮತ್ತು 100 ತಿದ್ದುಪಡಿಗಳನ್ನು ಒಳಗೊಂಡಿದೆ.

#ನಮ್ಮಸಂವಿಧಾನ ನಮ್ಮಹೆಮ್ಮೆ

ಭಾರತ ಸಂವಿಧಾನದ ಬೃಹತ್ ಗಾತ್ರಕ್ಕೆ ಕಾರಣಗಳು

* ಭೌಗೋಳಿಕ ವಿಸ್ತೀರ್ಣತೆ.
* ಐತಿಹಾಸಿಕ ಅಂಶಗಳು (1935ರ ಭಾರತ ಸರ್ಕಾರದ ಕಾಯ್ದೆಯ ಪ್ರಕಾರ).
* ಜಮ್ಮು ಮತ್ತು ಕಾಶ್ಮೀರವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ಒಂದೇ ಸಂವಿಧಾನ.
* ನಮ್ಯ ಮತ್ತು ಅನಮ್ಯ ಸ್ವರೂಪದ ಲಕ್ಷಣಗಳು.
* ನಮ್ಮ ಸಂವಿಧಾನಕ್ಕೆ ಇದುವರೆಗೆ ತರಲಾದ ತಿದ್ದುಪಡಿಗಳ ಮೂಲಕ ಕೆಲವು ಹೊಸ ಅಧ್ಯಾಯ ಹಾಗೂ ವಿಧಿಗಳನ್ನು ಸೇರಿಸಲಾಗಿದೆ.
* ನಮ್ಮ ಸಂವಿಧಾನವು ಕೇಂದ್ರಾಡಳಿತ ಪ್ರದೇಶಗಳ ಬಗ್ಗೆ ವಿವರಣೆಗಳನ್ನು ಹೊಂದಿದೆ.

#ನಮ್ಮಸಂವಿಧಾನ ನಮ್ಮಹೆಮ್ಮೆ

ಮೂಲಭೂತ ಕರ್ತವ್ಯಗಳು

ಮೂಲಭೂತ ಕರ್ತವ್ಯಗಳನ್ನು ನಾವು ಭಾರತ ಸಂವಿಧಾನಕ್ಕೆ ಸೋವಿಯತ್ (ರಷ್ಯಾ) ಸಂವಿಧಾನದಿಂದ ಎರವಲು ಪಡೆದಿದ್ದೇವೆ. 1976ರ 42ನೇ ತಿದ್ದುಪಡಿಯ ಮೂಲಕ ಭಾರತ ಸಂವಿಧಾನಕ್ಕೆ ಮೂಲಭೂತ ಕರ್ತವ್ಯಗಳ ಪಟ್ಟಿಯನ್ನು ಸೇರಿಸಲಾಯಿತು. ಭಾರತ ಸಂವಿಧಾನದಲ್ಲಿ 4–ಎ ಭಾಗದಲ್ಲಿನ 51(ಎ) ವಿಧಿಯಡಿಯಲ್ಲಿ ಹನ್ನೊಂದು ಮೂಲಭೂತ ಕರ್ತವ್ಯಗಳನ್ನು ಕಾಣಬಹುದು.

#ನಮ್ಮಸಂವಿಧಾನ ನಮ್ಮಹೆಮ್ಮೆ

ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ

ಈ ಪದ್ಧತಿಯ ಪ್ರಕಾರ, ಜಾತಿ, ಮತ, ಲಿಂಗ, ಸಾಮಾಜಿಕ ಸ್ಥಾನಮಾನ, ಮುಂತಾದವುಗಳ ಆಧಾರದ ಮೇಲೆ ಯಾವುದೇ ತಾರತಮ್ಯವಿಲ್ಲದೇ 18 ವರ್ಷ ಮೇಲ್ಪಟ್ಟ ಎಲ್ಲ ಪ್ರಜೆಗಳಿಗೆ ಮತದಾನದ ಹಕ್ಕನ್ನು ನೀಡಲಾಗಿದೆ. 1989ರ 61ನೇಯ ತಿದ್ದುಪಡಿಯ ಪ್ರಕಾರ ಮತದಾನದ ವಯಸ್ಸನ್ನು 21 ರಿಂದ 18ಕ್ಕೆ ಇಳಿಸಲಾಯಿತು. ಇದು ಪ್ರಜಾಪ್ರಭುತ್ವವನ್ನು ಬಲಗೊಳಿಸುವಲ್ಲಿ ಕ್ರಾಂತಿಕಾರಕ ಹೆಜ್ಜೆಯಾಗಿದೆ. ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯ ಫಲವಾಗಿ ಭಾರತವು ವಿಶ್ವದಲ್ಲಿಯೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಹೊರಹೊಮ್ಮಿದೆ.



#ನಮ್ಮಸಂವಿಧಾನ ನಮ್ಮಹೆಮ್ಮೆ

ಲಿಖಿತ ಸಂವಿಧಾನ

ಅಮೆರಿಕಾ ಸಂವಿಧಾನದಂತೆ ಭಾರತದ ಸಂವಿಧಾನವು ಲಿಖಿತ ಸಂವಿಧಾನವಾಗಿದ್ದು, ಬ್ರಿಟನ್ ಸಂವಿಧಾನದಂತೆ ಅಲಿಖಿತ ಸಂವಿಧಾನವಾಗಿರುವುದಿಲ್ಲ. ಸರ್ಕಾರದ ಅಂಗಗಳಾದ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳ ರಚನೆ, ಅಧಿಕಾರ ಮತ್ತು ಕಾರ್ಯವ್ಯಾಪ್ತಿ, ಮೂಲಭೂತ ಹಕ್ಕು ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದ ವಿವರಗಳು ಬರವಣಿಗೆಯ ರೂಪದಲ್ಲಿರುವುದನ್ನು ನಾವು ಕಾಣಬಹುದು.

ಮೂಲಭೂತ ಹಕ್ಕುಗಳು

ಮೂಲಭೂತ ಹಕ್ಕುಗಳು ವ್ಯಕ್ತಿತ್ವ ವಿಕಸನದ ಅವಿಭಾಜ್ಯ ಅಂಗಗಳಾಗಿವೆ. ಭಾರತದ ಸಂವಿಧಾನದ ಮೂರನೆಯ ಭಾಗವು ತನ್ನ ಪ್ರಜೆಗಳಿಗೆ ಸ್ವಾತಂತ್ರ್ಯದ ಹಕ್ಕು, ಸಮಾನತೆಯ ಹಕ್ಕು, ಶೋಷಣೆಯ ವಿರುದ್ಧದ ಹಕ್ಕು, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಮತ್ತು ಸಂವಿಧಾನಾತ್ಮಕ ಪರಿಹಾರಗಳ ಹಕ್ಕು ಹೀಗೆ ಆರು ಮೂಲಭೂತ ಹಕ್ಕುಗಳನ್ನು ನೀಡಿದೆ. ಸಂವಿಧಾನದ ಮೂಲಭೂತ ಹಕ್ಕುಗಳ ರಕ್ಷಣೆಯನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ನೀಡಿದೆ, ಆದ್ದರಿಂದ ಸರ್ವೋಚ್ಚ ನ್ಯಾಯಾಲಯವನ್ನು "ಭಾರತ ಸಂವಿಧಾನದ ರಕ್ಷಕ/ಕಾವಲುಗಾರ" ಎಂದು ಕರೆಯಲಾಗುತ್ತದೆ.

#ನಮ್ಮಸಂವಿಧಾನ ನಮ್ಮಹೆಮ್ಮೆ

ಜಾತ್ಯಾತೀತತೆ

1976ರ ಸಂವಿಧಾನದ 42ನೇ ತಿದ್ದುಪಡಿ ಕಾಯ್ದೆಯ ಮೂಲಕ ಜಾತ್ಯಾತೀತ ಎಂಬ ಪದವನ್ನು ಸಂವಿಧಾನಕ್ಕೆ ಸೇರಿಸಲಾಯಿತು. ಸಂವಿಧಾನದ 25ರಿಂದ 28ನೇ ವಿಧಿಯು ಧಾರ್ಮಿಕ ಸ್ವಾತಂತ್ರ್ಯಕ್ಕೆ ಅವಕಾಶವನ್ನು ಕಲ್ಪಿಸುತ್ತದೆ. ಭಾರತವು ಒಂದು ಜಾತ್ಯಾತೀತ ರಾಷ್ಟ್ರವಾಗಿದೆ. ಭಾರತವು ತನ್ನದೇ ಆದ ರಾಷ್ಟ್ರಧರ್ಮವನ್ನು ಹೊಂದಿಲ್ಲ, ನಮ್ಮ ದೇಶದಲ್ಲಿ ಎಲ್ಲ ಧರ್ಮಗಳನ್ನು ಸಮಾನವಾಗಿ ಕಾಣಲಾಗುತ್ತದೆ. ಸರ್ಕಾರವು ಪ್ರಜೆಗಳ ಧಾರ್ಮಿಕ ವಿಚಾರದಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ. ಸಂವಿಧಾನವು ತನ್ನ ಪ್ರಜೆಗಳಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿದೆ, ಆದ್ದರಿಂದ ಒಬ್ಬ ಭಾರತೀಯನು ತನ್ನ ಮನಸಾಕ್ಷಿಗನುಗುಣವಾಗಿ ಯಾವುದೇ ಧರ್ಮವನ್ನು ಪಾಲಿಸುವ, ಆರಾಧಿಸುವ ಹಾಗೂ ಪ್ರಚಾರಪಡಿಸುವ ಸ್ವಾತಂತ್ರ್ಯ ಹೊಂದಿದ್ದಾನೆ.

#ನಮ್ಮಸಂವಿಧಾನ ನಮ್ಮಹೆಮ್ಮೆ ~ 10

ನ್ಯಾಯಿಕ ವಿಮರ್ಶೆ

ನ್ಯಾಯಿಕ ವಿಮರ್ಶೆಯಲ್ಲಿ ಭಾರತ ಸಂವಿಧಾನದ ಪ್ರಮುಖ ಲಕ್ಷಣಗಳಲ್ಲೊಂದಾಗಿದೆ. ನ್ಯಾಯಾಂಗವು ಶಾಸಕಾಂಗ ಮತ್ತು ಕಾರ್ಯಾಂಗಗಳ ಅಧಿಕಾರ ಹಾಗೂ ಕಾರ್ಯಗಳ ಸಂವಿಧಾನ ಬದ್ಧತೆಯನ್ನು ವಿಮರ್ಶಿಸುವ ಅಧಿಕಾರವನ್ನು ಹೊಂದಿದೆ. ಸಂವಿಧಾನವನ್ನು ಉಲ್ಲಂಘಿಸುವ ಶಾಸಕಾಂಗದ ಕಾನೂನುಗಳನ್ನು ನ್ಯಾಯಾಂಗವು ಸಂವಿಧಾನ ಬಾಹಿರ ಬಾಹಿರ, ಅಸಿಂಧು ಎಂದು ಘೋಷಿಸುತ್ತದೆ.

#ನಮ್ಮಸಂವಿಧಾನ ನಮ್ಮಹೆಮ್ಮೆ

ತುರ್ತುಪರಿಸ್ಥಿತಿ

ಭಾರತ ಸಂವಿಧಾನಕ್ಕೆ ತುರ್ತು ಪರಿಸ್ಥಿತಿಯನ್ನು ಜರ್ಮನಿಯ ಸಂವಿಧಾನದಿಂದ ಎರವಲು ಪಡಯಲಾಗಿದೆ. ರಾಷ್ಟ್ರದ ಆರ್ಥಿಕ ಸ್ಥಿರತೆಗೆ ಧಕ್ಕೆಯಾದಗಿದಾಗ ರಾಷ್ಟ್ರಾಧ್ಯಕ್ಷರು ಆರ್ಥಿಕ ತುರ್ತು ಪರಿಸ್ಥಿತಿಯನ್ನು ಘೋಷಿಸಬಹುದು. ರಾಷ್ಟ್ರಾಧ್ಯಕ್ಷರು ಸಂಧಿಗ್ದ ಪರಸ್ಥಿತಿಗಳಲ್ಲಿ ಮೂರು ಬಗೆಯ ತುರ್ತು ಪರಿಸ್ಥಿತಿಗಳನ್ನು ಘೋಷಿಸುವ ಅಧಿಕಾರವನ್ನು ಹೊಂದಿದ್ದಾರೆ. ರಾಷ್ಟ್ರಾಧ್ಯಕ್ಷರು ವಿದೇಶಿ ಆಕ್ರಮಣ, ಸಶಸ್ತ್ರ ಬಂಡಾಯ, ಯುದ್ಧ ಈ ಕಾರಣಗಳಿಂದ ರಾಷ್ಟ್ರೀಯ ಭದ್ರತೆಗೆ ಗಂಡಾಂತರ ಒದಗಬಹುದು ಎಂದು ಭಾವಿಸಿದಲ್ಲಿ ರಾಷ್ಟ್ರೀಯ ತುರ್ತುಪರಿಸ್ಥಿತಿಯನ್ನು ಘೋಷಿಸಬಹುದು. ಸಂವಿಧಾನಾತ್ಮಕ ಯಂತ್ರವು ಕುಸಿದು ಬಿದ್ದ ರಾಜ್ಯಗಳಲ್ಲಿ ರಾಷ್ಟ್ರಾಧ್ಯಕ್ಷರು ತಮ್ಮ ಆಳ್ವಿಕೆಯನ್ನು ಘೋಷಿಸಬಹುದು.

1962ರಲ್ಲಿ ಭಾರತ ಮತ್ತು ಚೀನಾದ ನಡುವೆ ಹಾಗೂ 1971ರಲ್ಲಿ ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಯುದ್ಧಗಳು ನಡೆದಾಗ ರಾಷ್ಟ್ರೀಯ ತುರ್ತುಪರಿಸ್ಥಿತಿಯನ್ನು ಘೋಷಿಸಲಾಯಿತು.

1975ರಲ್ಲಿ ಆಂತರಿಕ ಗಲಭೆಯ ಕಾರಣದಿಂದ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಯಿತು.

#ನಮ್ಮಸಂವಿಧಾನ ನಮ್ಮಹೆಮ್ಮೆ

11 ಮೂಲಭೂತ ಕರ್ತವ್ಯಗಳು

1. ಸಂವಿಧಾನ, ರಾಷ್ಟ್ರಗೀತೆ ಮತ್ತು ರಾಷ್ಟ್ರಧ್ವಜವನ್ನು ಗೌರವಿಸುವುದು.
2. ಸ್ವಾತಂತ್ರ್ಯ ಚಳುವಳಿಯ ಉದಾತ್ತ ಆದರ್ಶಗಳನ್ನು ಪಾಲಿಸುವುದು.
3. ಭಾರತದ ಸಾರ್ವಭೌಮತೆ, ಏಕತೆ ಮತ್ತು ಸಮಗ್ರತೆಯನ್ನು ಎತ್ತಿ ಹಿಡಿಯುವುದು ಮತ್ತು ಕಾಪಾಡುವುದು.
4. ಕರೆ ಬಂದಾಗ ರಾಷ್ಟ್ರವನ್ನು ರಕ್ಷಿಸುವುದು ಮತ್ತು ದೇಶ ಸೇವೆ ಮಾಡುವುದು.
5. 6 ರಿಂದ 14 ವರ್ಷದೊಳಗಿನ ಮಕ್ಕಳನ್ನು ಪಾಲಕರು ಕಡ್ಡಾಯವಾಗಿ ಶಾಲೆಗೆ ಕಳುಹಿಸತಕ್ಕದ್ದು.
6. ನಮ್ಮ ಸಮ್ಮಿಶ್ರ ಸಂಸ್ಕೃತಿಯ ಶ್ರೀಮಂತ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು.
7. ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಪ್ರಾವಿಣ್ಯತೆಯನ್ನು ಪ್ರದರ್ಶಿಸಿ ರಾಷ್ಟ್ರದ ಪ್ರಗತಿಗೆ ಶ್ರಮಿಸುವುದು.
8. ಮಹಿಳೆಯರ ಗೌರವಕ್ಕೆ ಚ್ಯುತಿಯುಂಟುಮಾಡುವ ಆಚರಣೆಗಳನ್ನು ತ್ಯಜಿಸುವುದು ಮತ್ತು ಭಾರತೀಯರಲ್ಲಿ ಭ್ರಾತೃತ್ವ ಮತ್ತು ಸಾಮರಸ್ಯ ಭಾವನೆಗಳನ್ನು ಬೆಳೆಸುವುದು.
9. ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳನ್ನು ಒಳಗೊಂಡ ನೈಸರ್ಗಿಕ ಪರಿಸರವನ್ನು ರಕ್ಷಿಸಿ, ಅಭಿವೃದ್ಧಿಪಡಿಸುವುದು.
10. ವೈಜ್ಞಾನಿಕ ಹಾಗೂ ಮಾನವೀಯ ಗುಣಗಳನ್ನು ಮತ್ತು ವಿಚಾರಣಾ ಹಾಗೂ ಸುಧಾರಣಾ ಮನೋಭಾವನೆಯನ್ನು ಬೆಳೆಸಿಕೊಳ್ಳುವುದು.
11. ಸಾರ್ವಜನಿಕ ಆಸ್ತಿಗಳನ್ನು ರಕ್ಷಿಸುವುದು ಮತ್ತು ಹಿಂಸೆ ತ್ಯಜಿಸುವುದು.


#ನಮ್ಮಸಂವಿಧಾನ ನಮ್ಮಹೆಮ್ಮೆ ~ 14

ಗಣರಾಜ್ಯ

ರಾಷ್ಟ್ರದ ಮುಖ್ಯಸ್ಥರನ್ನು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಚುನಾಯಿಸುವ ರಾಜಕೀಯ ವ್ಯವಸ್ಥೆಯನ್ನು ಗಣರಾಜ್ಯ ಎಂದು ಕರೆಯಲಾಗುತ್ತದೆ. ಭಾರತದ ಸಂವಿಧಾನಕ್ಕೆ ಗಣರಾಜ್ಯವನ್ನು ಐರ್ಲೆಂಡ್ ಸಂವಿಧಾನದಿಂದ ಎರವಲು ಪಡೆಯಲಾಗಿದೆ.

ಭಾರತದ ಮುಖ್ಯಸ್ಥರಾದ ರಾಷ್ಟ್ರಾಧ್ಯಕ್ಷರನ್ನು ಪರೋಕ್ಷ ಚುನಾವಣೆಯಿಂದ ಆಯ್ಕೆ ಮಾಡುವುದರಿಂದ ಭಾರತವು ಒಂದು ಗಣರಾಜ್ಯವಾಗಿದೆ. 'ಗಣರಾಜ್ಯ' ಎಂಬ ಪದವು ಭಾರತ ಸರ್ಕಾರದ ಯಾವುದೇ ಅನುವಂಶೀಯ ರಾಜ ಅಥವಾ ರಾಣಿಯ ಆಳ್ವಿಕೆಗೆ ಒಳಪಟ್ಟಿಲ್ಲ ಎಂಬುದನ್ನು ಸೂಚಿಸುತ್ತದೆ.





hindustantimes

Three dead after forces open fire on farmers protesting in MP's Mandsaur

Farmers in Madhya Pradesh are demanding remunerative prices for their produce and a loan waiver.

ರೈತರ ಜೊತೆ ಕೈಜೋಡಿಸಿ ಸಂವಿಧಾನ ಉಳಿಸಿ



ಆಹಾರದ ಹಕ್ಕು ರಕ್ಷಿಸಿ ಸಂವಿಧಾನ ಉಳಿಸಿ



ಪ್ರಜೆಗಳಿಗೆ ಪೌಷ್ಟಿಕ ಆಹಾರ ಒದಗಿಸಬೇಕಾದದ್ದು ಸರ್ಕಾರದ ಜವಾಬ್ದಾರಿ. ಆಹಾರ ಪ್ರತಿಯೊಬ್ಬರ ಸಂವಿಧಾನದತ್ತ ಹಕ್ಕು. ಹೀಗಿರುವಾಗ ಜನರನ್ನು ಅವರ ಆಯ್ಕೆಯ ಆಹಾರ ಸೇವಿಸದಂತೆ ಕೇಂದ್ರ ಸರ್ಕಾರ ತಡೆ ಹೇರಲು ಹೊರಟಿದೆ. ಮನೆಗಳಿಗೆ ನುಗ್ಗಿ ಜನರು ತಿನ್ನುವ ಆಹಾರವನ್ನು ಪರೀಕ್ಷಿಸುವ ಮಟ್ಟಕ್ಕೆ ಇಳಿದಿದೆ. ಆಹಾರದ ಹಕ್ಕನ್ನು ರಕ್ಷಿಸಿ ಸಂವಿಧಾನದ ಆಶಯ ಉಳಿಸುವ ನಿಟ್ಟಿನಲ್ಲಿ ಹೋರಾಟ ಅಗತ್ಯವಾಗಿದೆ.

#ನಮ್ಮಸಂವಿಧಾನ ನಮ್ಮಹೆಮ್ಮೆ ~ 6

ರಾಜ್ಯ ನೀತಿ ನಿರ್ದೇಶಕ ತತ್ವಗಳು

ಭಾರತ ಸಂವಿಧಾನಕ್ಕೆ ರಾಜ್ಯ ನೀತಿ ನಿರ್ದೇಶಕ ತತ್ವಗಳನ್ನು ಐರ್ಲೆಂಡ್ ಸಂವಿಧಾನದಿಂದ ಎರವಲು ಪಡೆಯಲಾಗಿದೆ, ಭಾರತ ಸಂವಿಧಾನದ ನಾಲ್ಕನೇ ಭಾಗವು ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಒಳಗೊಂಡಿದೆ. ಕಾನೂನುಗಳನ್ನು ರೂಪಿಸುವಾಗ, ನೀತಿಗಳನ್ನು ಹಗೂ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಾಗ ಮತ್ತು ಆಡಳಿತ ನಡೆಸುವಾಗ ರಾಜ್ಯ ನೀತಿ ನಿರ್ದೇಶಕ ತತ್ವಗಳನ್ನು ಅಳವಡಿಸಿಕೊಳ್ಳುವುದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಆದ್ಯ ಕರ್ತವ್ಯವಾಗಿದೆ.

#ನಮ್ಮಸಂವಿಧಾನ ನಮ್ಮಹೆಮ್ಮೆ ~ 7

ಎರವಲು ಸಂವಿಧಾನ

ನಮ್ಮ ಸಂವಿಧಾನವು ವಿಶ್ವದ ವಿವಿಧ ಸಂವಿಧಾನಗಳಿಂದ ಅನೇಕ ಲಕ್ಷಣಗಳನ್ನು ಎರವಲು ಪಡೆದಿದೆ, ಆದ್ದರಿಂದ ಇದನ್ನು ಎರವಲು ಸಂವಿಧಾನ ಎಂದು ಕರೆಯುತ್ತಾರೆ. ಉದಾಹರಣೆಗೆ ಮೂಲಭೂತ ಹಕ್ಕುಗಳ ಪಟ್ಟಿ, ನ್ಯಾಯಿಕ ವಿಮರ್ಶೆ, ಪ್ರಸ್ತಾವನೆಗಳನ್ನು ಅಮೆರಿಕಾ ಸಂಯುಕ್ತ ಸಂಸ್ಥಾನದ ಸಂವಿಧಾನದಿಂದಲೂ, ಕಾನೂನಿನ ಆಳ್ವಿಕೆ, ಏಕ ಪೌರತ್ವ, ಸಂಸದೀಯ ಪದ್ಧತಿಗಳನ್ನು ಗ್ರೇಟ್ ಬ್ರಿಟನ್ ಸಂವಿಧಾನದಿಂದ ಎರವಲು ಪಡೆಯಲಾಗಿದೆ.

#ನಮ್ಮಸಂವಿಧಾನ ನಮ್ಮಹೆಮ್ಮೆ ~ 8

ಸಂಸದೀಯ ಸರ್ಕಾರ ಪದ್ಧತಿ

ಬ್ರಿಟಿಷ ಸಂವಿಧಾನದಿಂದ ನಾವು ಸಂಸದೀಯ ಸರ್ಕಾರ ಪದ್ಧತಿಯನ್ನು ಭಾರತೀಯ ಸಂವಿಧಾನಕ್ಕೆ ಎರವಲಾಗಿ ಪಡೆದಿದ್ದೇವೆ. ಭಾರತ ಸಂವಿಧಾನವು ಕೇಂದ್ರ ಹಾಗೂ ರಾಜ್ಯಗಳಲ್ಲಿ ಸಂಸದೀಯ ಪದ್ಧತಿಗೆ ಅವಕಾಶ ಮಾಡಿಕೊಟ್ಟಿದೆ. ಕೇಂದ್ರ ಹಾಗೂ ರಾಜ್ಯಗಳಲ್ಲಿ ಕಾರ್ಯಾಂಗವು ಶಾಸಕಾಂಗಕ್ಕೆ ಹೊಣೆಯಾಗಿರುತ್ತದೆ. ಕಾರ್ಯಾಂಗವು ಶಾಸಕಾಂಗದ ವಿಶ್ವಾಸವನ್ನು ಹೊಂದಿರುವವರಿಗೆ ಮಾತ್ರ ಅಧಿಕಾರದಲ್ಲಿ ಮುಂದುವರೆಯುತ್ತದೆ. ಶಾಸಕಾಂಗದ ವಿಶ್ವಾಸವನ್ನು ಕಳೆದುಕೊಂಡ ತಕ್ಷಣ ಅಧಿಕಾರವನ್ನು ಕಳೆದುಕೊಳ್ಳುತ್ತದೆ.

ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ಸಂವಿಧಾನ ಉಳಿಸಿ

ತನ್ನನ್ನು ವಿಮರ್ಶಿಸುವ, ಟೀಕಿಸುವ ಸುದ್ದಿ ಮಾಧ್ಯಮಗಳು ಹಾಗೂ ಪತ್ರಕರ್ತರನ್ನು ಕೇಂದ್ರ ಸರ್ಕಾರ ಬಳಸುದಾರಿಗಳಿಂದ ಹತ್ತಿಕ್ಕಲು ಯತ್ನಿಸುತ್ತಿದೆ. ಪತ್ರಿಕಾ ಸ್ವಾತಂತ್ರ್ಯ ಎತ್ತಿಹಿಡಿಯಲು, ಸಂವಿಧಾನ ನೀಡಿರುವ ಹಕ್ಕನ್ನು ಸಾಧಿಸೋಣ ಬನ್ನಿ.

#ನಮ್ಮಸಂವಿಧಾನ ನಮ್ಮಹೆಮ್ಮೆ ~ 11

ಏಕಪೌರತ್ವ

ಭಾರತ ಸಂವಿಧಾನಕ್ಕೆ ಏಕಪೌರತ್ವವನ್ನು ಬ್ರಿಟಿಷ್ ಸಂವಿಧಾನದಿಂದ ಎರವಲು ಪಡೆಯಲಾಗಿದೆ. ಭಾರತದಲ್ಲಿ ಒಬ್ಬ ವ್ಯಕ್ತಿ ರಾಷ್ಟ್ರೀಯ ಪೌರತ್ವವನ್ನು ಹೊಂದಿದ್ದಾನೆಯೇ ಹೊರತು ರಾಜ್ಯದ ಪೌರತ್ವವನ್ನು ಹೊಂದಿರುವುದಿಲ್ಲ. ಭಾರತೀಯರಲ್ಲಿ ಏಕತೆ, ಸಮಗ್ರತೆ ಮತ್ತು ಅವಿಭಜಿತ ನಿಷ್ಠೆ ಮುಂತಾದ ಉದಾತ್ತ ಮನೋಭಾವನೆಗಳನ್ನು ಬೆಳೆಸಲು ಏಕಪೌರತ್ವ ಪದ್ಧತಿಯು ಪೂರಕವಾಗಿದೆ.

#ನಮ್ಮಸಂವಿಧಾನ ನಮ್ಮಹೆಮ್ಮೆ ~ 13

ಸಾರ್ವಭೌಮ ರಾಷ್ಟ್ರ

ಭಾರತವು ಒಂದು ಸಾರ್ವಭೌಮ ರಾಷ್ಟ್ರವಾಗಿದೆ. ಇದು ಆಂತರಿಕ ಶ್ರೇಷ್ಠತೆಯನ್ನು ಹಾಗೂ ಬಾಹ್ಯ ಸ್ವಾತಂತ್ರ್ಯವನ್ನು ಪಡೆದುಕೊಂಡಿದೆ. ಅಂದರೆ ನಮ್ಮ ರಾಷ್ಟ್ರವು ಆಂತರಿಕವಾಗಿ ಸರ್ವೋಚ್ಚ ಅಧಿಕಾರವನ್ನು ಹಾಗೂ ಬಾಹ್ಯವಾಗಿ ಅನ್ಯ ರಾಷ್ಟ್ರಗಳಿಂದ ಸಂಪೂರ್ಣ ಸ್ವತಂತ್ರವನ್ನು ಪಡೆದಿದೆ. ಆದ್ದರಿಂದ ಭಾರತವು ತನ್ನದೇ ಆದ ಸ್ವತಂತ್ರ ವಿದೇಶಾಂಗ ನೀತಿಯನ್ನು ಪಾಲಿಸಬಹುದು.

ಖಾಸಗಿತನದ ಹಕ್ಕನ್ನು ರಕ್ಷಿಸಿ ಸಂವಿಧಾನ ಉಳಿಸಿ



ಆಧಾರ್ ಕಾರ್ಡ್ ಹೊಂದಿಲ್ಲ ಎಂಬ ಕಾರಣಕ್ಕೆ ವ್ಯಕ್ತಿಗಳಿಗೆ ಯಾವುದೇ ಸೌಲಭ್ಯ ನಿರಾಕರಿಸವಂತಿಲ್ಲ ಎಂದು ಸ್ವತಃ ಸುಪ್ರೀಂ ಕೋರ್ಟ್ ಹೇಳಿದ್ದರೂ ಬಿಸಿಯೂಟದಿಂದ ಹಿಡಿದು ಪ್ರತಿಯೊಂದಕ್ಕೂ ಆಧಾರ್ ಜೋಡಿಸುತ್ತಾ ಕೇಂದ್ರ ಸರ್ಕಾರ ಪ್ರಜೆಗಳ ಖಾಸಗಿತನದ ಹಕ್ಕನ್ನು ಕಸಿಯುತ್ತಿದೆ. ಸರ್ವಾಧಿಕಾರಿ ಧೋರಣೆಯ ಈ ಮೋದಿ ಮಾದರಿಯನ್ನು ವಿರೋಧಿಸಿ. ಸಂವಿಧಾನವನ್ನು ಉಳಿಸುವ ತುರ್ತು ಬಂದೊಂದಗಿದೆ.

ಖಾಸಗೀಕರಣ ಸೋಲಿಸಿ ಸಂವಿಧಾನ ಉಳಿಸಿ

beml NEW FRONTIERS. NEW DREAMS

ದೇಶದ ರಕ್ಷಣಾ ಇಲಾಖೆ ಹಾಗೂ ರೈಲ್ವೆ ಗಣಿ ಇಲಾಖೆಗೆ ಉತ್ತಮ ತಂತ್ರಜ್ಞಾನ ಮತ್ತು ಗುಣಮಟ್ಟದ ವಾಹನಗಳನ್ನು ಪೂರೈಸುತ್ತ ರಾಷ್ಟ್ರದ ಶಕ್ತಿಯನ್ನು ಬೆಳೆಸಿದ್ದ ಬಿಇಎಂಎಲ್ (beml) ಸರ್ಕಾರಿ ಸ್ವಾಮ್ಯದ ಅತಿ ದೊಡ್ಡ ಕಂಪನಿ. ಇಂತಹಾ ಮಹತ್ವದ ಸಂಸ್ಥೆಯನ್ನು ಕೇಂದ್ರ ಸರ್ಕಾರ ಖಾಸಗೀಕರಣಗೊಳಿಸಲು ಹೊರಟಿದೆ. ಬೆಮೆಲ್ ಖಾಸಗೀಕರಣ ಮೂಲಕ ಅಭಿವೃದ್ಧಿಯ ಸ್ವಾವಲಂಬಿ ಮಾದರಿಗೆ ಧಕ್ಕೆ ತರುತ್ತಿರುವ ಮೋದಿ ಮಾದರಿಯನ್ನು ಗಟ್ಟಿ ದನಿಯಲ್ಲಿ ಪ್ರಶ್ನಿಸಬೇಕಿದೆ.

ಆರ್‌ಎಸ್‌ಎಸ್ ದಾಳಿ ಖಂಡಿಸಿ ರಾಜ್ಯಾದಾದ್ಯಂತ ಪ್ರತಿಭಟನೆ

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿಯವರ ಮೇಲಿನ ಆರ್‌ಎಸ್‌ಎಸ್ ದಾಳಿ ಪ್ರಯತ್ನವನ್ನು ಖಂಡಿಸಿ ರಾಜ್ಯಾದಾದ್ಯಂತ ಪ್ರತಿಭಟನೆ. ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತ, ಕೆ.ಆರ್.ಪುರಂ, ಜಾಲಹಳ್ಳಿ, ಆನೇಕಲ್, ಕೆ.ಜಿ.ಎಫ್, ಮಂಡ್ಯ, ಮಂಗಳೂರು, ಹೊಸಪೇಟೆ, ಬಾಗೇಪಲ್ಲಿ, ಮಳವಳ್ಳಿ, ಮೈಸೂರು, ಹಾಸನ, ಗಜೇಂದ್ರಗಡ, ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ಮತ್ತು ಕುರುಗೋಡು, ಕಲ್ಬುರ್ಗಿ, ದೊಡ್ಡಬಳ್ಳಾಪುರ, ಕೋಲಾರ ಮುಂತಾದೆಡೆಗಳಲ್ಲಿ ಪ್ರತಿಭಟನೆಗಳನ್ನು ನಡೆಸಲಾಯಿತು.



ಕಲಬುರಗಿ


ಬಾಗೇಪಲ್ಲಿ



ಗಜೇಂದ್ರಗಢ



ಮಂಗಳೂರು

ಹಿಂದೂ ರಾಷ್ಟ್ರ ಎನ್ನುವುದು........ ಪುಟ 6 ರಿಂದ

ಕಾರ್ಮಿಕರಿಗೆ ಜೀವಾವಧಿ ಶಿಕ್ಷೆ ವಿಧಿಸಿತು. ಅವರ ಮೇಲೆ ಮ್ಯಾನೇಜರ್‌ನನ್ನು ಕೊಂದ ಸುಳ್ಳು ಆರೋಪ ಹೊರಿಸಲಾಗಿತ್ತು. ಈ ತೀರ್ಪಿನ ವಿರುದ್ಧ ಸುಮಾರ ಒಂದು ಲಕ್ಷ ಕಾರ್ಮಿಕರು ಬೀದಿಗಿಳಿದರು. ಅದೊಂದು ಅಪೂರ್ವ ಹೋರಾಟವಾಗಿತ್ತು. ಇದೇ ಮೊದಲ ಬಾರಿಗೆ ಸಂಘಟಿತ ವಲಯದ ಕಾರ್ಮಿಕ ಸಂಘಟನೆಗಳು ಗುತ್ತಿಗೆ ಕಾರ್ಮಿಕರ ಹೋರಾಟಕ್ಕೆ ಬೆಂಬಲ ನೀಡಿ ಬೀದಿಗಿಳಿದಿದ್ದವು. ಮಾಲೀಕರು ಒಡ್ಡಿದ ಅನೇಕ ರೀತಿಯ ಬೆದರಿಕೆಗಳಿಗೂ ಜಗ್ಗದೆ ಕಾರ್ಮಿಕರು ಮುಷ್ಕರ ನಡೆಸಿದರು. ಇಂತಹ ಬೃಹತ್ ಹೋರಾಟ ನಡೆಸಿದ ಕಾರ್ಮಿಕ ಸಂಘಟನೆಗಳನ್ನು ಕೇಳಿದೆವು, ಇಲ್ಲೇ ಸುತ್ತ ಮುತ್ತಲಲ್ಲಿ ನಡೆಯುತ್ತಿರುವ ಅಲ್ಪಸಂಖ್ಯಾತರು, ದಲಿತರು ಮತ್ತು ಮಹಿಳೆಯರ ಮೇಲಿನ ಹಲ್ಲೆಗಳ ಸಂದರ್ಭದಲ್ಲಿ ಕಾರ್ಮಿಕ ಸಂಘಟನೆಗಳು ಏನು ಮಾಡಿದವು? ಎಂದು. ಉತ್ತರ 'ಏನಿಲ್ಲ' ಎಂಬುದಾಗಿತ್ತು. ಕಾರ್ಮಿಕರ ಆರ್ಥಿಕ ಪ್ರಶ್ನೆಗಳ ಜೊತೆಗೆ ಜಾತಿ ಮತ್ತು ಕೋಮುವಾದದ ಪ್ರಶ್ನೆಗಳನ್ನೂ ಜೋಡಿಸಬೇಕು, ಇವುಗಳನ್ನು ಒಟ್ಟಿಗೆ ಎದುರಿಸಬೇಕು ಎನ್ನುವುದನ್ನು ನಾವು ಅರಿಯುವುದು ಯಾವಾಗ? ಎಡಪಂಥೀಯ ಚಳವಳಿಗಳು, ಕಾರ್ಮಿಕ ಚಳವಳಿಗಳು, ಸಾಮೂಹಿಕ ಸಂಘಟನೆಗಳು ಹಾಗೂ ಕೋಮುವಾದದ ವಿರುದ್ಧ ಕೆಲಸ ಮಾಡುತ್ತಿರುವ ಸಂಘಟನೆಗಳು ಒಂದಾಗಿ ಕೋಮುವಾದ ಮತ್ತು ಉದಾರೀಕರಣದ ವಿರುದ್ಧ ಹೋರಾಡದಿದ್ದರೆ, ಅವುಗಳ ವಿರುದ್ಧ ಗೆಲುವು ಸಾಧ್ಯವಿಲ್ಲ. ಸಂವಿಧಾನಾತ್ಮಕ ಹಕ್ಕುಗಳ ರಕ್ಷಣೆಗಾಗಿ ರಾಜಕೀಯ ಪಕ್ಷಗಳು ರಾಜಕೀಯವಾಗಿ ಮೈತ್ರಿ ಸಾಧಿಸಬೇಕು; ಸಾಮಾಜಿಕವಾಗಿ ಹಾಗೂ ಜನಸಮೂಹದ ಹಂತದಲ್ಲಿ ನಾವು ಬೇರೆ ಬೇರೆ ಸಂಘ–ಸಂಸ್ಥೆಗಳು ಸ್ವಯಂ ಸ್ಫೂರ್ತಿಯಿಂದ ಮುಂದೆ ಬಂದು ಒಂದಾಗಬೇಕು.

ಜನಸಮೂಹವನ್ನು ರಾಜಕೀಯವಾಗಿ ಪ್ರಜ್ಞಾವಂತರಾಗಿ ಮಾಡಲು, ರಾಜಕೀಯ ಶಿಕ್ಷಣದ ಪಠ್ಯವೊಂದನ್ನು ರೂಪಿಸಿಕೊಳ್ಳಬೇಕು. ಅದರಲ್ಲಿ ಇರಬೇಕಾದ ಮೊದಲ ಅಂಶ– 'ಹಿಂದೂ ರಾಷ್ಟ್ರ ಎನ್ನುವ ಪದ ಮತ್ತು ಹಿಂದೂ ರಾಷ್ಟ್ರ ಎನ್ನುವ ಪರಿಕಲ್ಪನೆಗಳು ಸಂವಿಧಾನ ವಿರೋಧಿ' ಎನ್ನುವುದು. ಸಂವಿಧಾನದ ಮೊದಲ ಪರಿಚ್ಛೇದ ಹೇಳುತ್ತದೆ, 'ಇದು ಭಾರತ ದೇಶ. ಎಲ್ಲ ಧರ್ಮ ಜಾತಿಗಳ ಜನರು ಸಹಬಾಳ್ವೆಯಿಂದ ಬದುಕುವ ದೇಶ' ಎಂದು. ಯಾರಾದರೂ ಹಿಂದೂ ರಾಷ್ಟ್ರ ಎನ್ನುವ ಪದ ಬಳಸಿದರೆ ಕೂಡಲೆ ನಾವು ಸಂವಿಧಾನದ ಮೊದಲ ಪರಿಚ್ಛೇದವನ್ನು ತೆಗೆದು ತೋರಿಸಬೇಕು. ಹಿಂದೂ ರಾಷ್ಟ್ರ ಎನ್ನುವುದು ಸಂವಿಧಾನ ವಿರೋಧಿ ಎನ್ನುವುದನ್ನು ಹಾಗೂ ಸಂವಿಧಾನ ಕುರಿತ ತಿಳುವಳಿಕೆಯನ್ನು ನಮ್ಮ ರೈತರಿಗೆ, ಕಾರ್ಮಿಕರಿಗೆ ಹಾಗೂ ಆದಿವಾಸಿಗಳಿಗೆ ಕೊಡಬೇಕು.

ಇನ್ನು ಎರಡನೆಯದಾಗಿ ಕೇಂದ್ರದಲ್ಲಿ ಅಧಿಕಾರ ಪಡೆದುಕೊಂಡಿರುವ ರಾಜಕೀಯ ಪಕ್ಷಕ್ಕೆ ಬಂದಿರುವುದು ಕೇವಲ ಶೇ.31 ಮತಗಳು ಮಾತ್ರ. ಉಳಿದ ಶೇ.69 ಮತಗಳು ಬಿಜೆಪಿ ವಿರುದ್ಧ ಇದೆ. ಅಂದರೆ ಶೇ.69ರಷ್ಟು ಜನರು ಬಿಜೆಪಿಯೇತರ ಪಕ್ಷಗಳ ಜೊತೆ ಇದ್ದಾರೆ. ಇದನ್ನು ಜನಸಮೂಹಕ್ಕೆ ಸ್ಪಷ್ಟವಾಗಿ ತಿಳಿಸಬೇಕು.

ವಾಸ್ತವವಾಗಿ ಇಂತಹ ಕೆಲಸಗಳನ್ನು ಸಮೂಹ ಮಾಧ್ಯಮಗಳು, ಪ್ರಮುಖವಾಗಿ ಟಿವಿ ಚಾನೆಲ್‌ಗಳು ಮಾಡಬೇಕಿತ್ತು. ಆದರೆ ಅವರು ಇದನ್ನೆಲ್ಲ ಮರೆತುಬಿಟ್ಟಿದ್ದಾರೆ. ಅವರು ವ್ಯಾಪಂ ಹಗರಣವನ್ನೂ ಮರೆತಿದ್ದಾರೆ, ಅವರು ಪ್ರಧಾನ ಮಂತ್ರಿಯ ಖಾಸಗಿ ಖರ್ಚಿನ ಹಗರಣವನ್ನು ಮರೆತಿದ್ದಾರೆ. ಅವರು ಗುಜರಾತ್‌ನ ನರಮೇಧವನ್ನೂ ಮರೆತಿದ್ದಾರೆ. ನಾವು ಈ ಪ್ರಶ್ನೆಗಳನ್ನು ದೃಢವಾಗಿ, ಗಟ್ಟಿಯಾಗಿ ಎತ್ತುವಂತಹ ಧೈರ್ಯ ತೋರಿಸಬೇಕು. ಅದಕ್ಕಾಗಿ ಜನಸಮೂಹದ ರಾಜಕೀಯ ಪ್ರಜ್ಞೆಯನ್ನು ಹೆಚ್ಚಿಸಬೇಕು.

ಅಂಬೇಡ್ಕರ್ ಅವರನ್ನು, ಕೇರಳದಲ್ಲಿ ನಾರಾಣಗುರು ಅವರನ್ನು ಕಬ್ಜ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವ ಮೋದಿ ಮತ್ತು ಬಿಜೆಪಿ ಈಗ ಬಸವಣ್ಣನ ಮೇಲೆ ಕಣ್ಣು ಹಾಕಿದ್ದಾರೆ. ಪುಣ್ಯಕ್ಕೆ ಫುಲೆ ದಂಪತಿಗಳ ಮೇಲೆ ಇವರ ಕಣ್ಣು ಬಿದ್ದಿಲ್ಲ, ಯಾಕೆಂದರೆ ಇವರ ದೃಷ್ಟಿಯಲ್ಲಿ ಅವರು ಕ್ಷುಲ್ಲಕ ಜೀವಿಗಳು! ಮುಂದಿನ ವರ್ಷ ಕರ್ನಾಟಕದಲ್ಲಿ ನಡೆಯುತ್ತಿರುವ ವಿಧಾನ ಸಭೆ ಚುನಾವಣೆಯ ಹಿನ್ನಲೆಯಲ್ಲಿ ಬಸವಣ್ಣನ ಹೊಗಳಿಕೆಯ ಕುತಂತ್ರ ಆರಂಭವಾಗಿದೆ. ಈ ರೀತಿ ವಿವಿಧ ಜನವರ್ಗದ ಸಂಕೇತಗಳನ್ನು ಅಥವಾ ಲಾಂಛನಗಳನ್ನು ಕಬ್ಜ ಮಾಡಿಕೊಳ್ಳುವ, ಇತಿಹಾಸ ತಿರುಚುವ ಕೆಲಸಗಳಿಗಾಗಿ ಬಲಪಂಥೀಯ ಸಂಘಟನೆಗಳಿಗೆ ನೀರಿನಂತೆ ಹಣ ಹರಿದು ಬರಲಿದೆ. ತಂತ್ರಜ್ಞಾನವನ್ನು ಬಳಸಿಕೊಂಡು ತಲೆ ತಲೆಮಾರುಗಳಿಂದ ಸೌಹಾರ್ದತೆಯಿಂದ ಬದುಕುತ್ತಿರುವ ಜನರನ್ನು ಒಡೆದು, ಅವರ ನಡುವೆ ದ್ವೇಷ ಬಿತ್ತುವ ಎಲ್ಲ ಕ್ರಮ ಕೈಗೊಳ್ಳುತ್ತಾರೆ. ಇದು ಕರ್ನಾಟಕದಲ್ಲೂ ಈಗ ಸಂಭವಿಸುತ್ತದೆ. ಈ ಬಗ್ಗೆ ನಾವು ಎಚ್ಚರವಹಿಸಬೇಕಿದೆ.

ಈ ಎಲ್ಲ ದಾಳಿಗಳ ನಡುವೆಯೂ ಯುವಜನರ ಒಂದು ಪಡೆ ರಾಜಕೀಯ ಸ್ಪಷ್ಟತೆಯೊಂದಿಗೆ ರೂಪುಗೊಳ್ಳುತ್ತಾ ಇರುವುದು ಸಮಾಧಾನಕರ ಅಂಶವಾಗಿದೆ. ಜೆ.ಎನ್.ಯು., ಹೈದರಾಬಾದ್ ಕೇಂದ್ರೀಯ ವಿಶ್ವ ವಿದ್ಯಾಲಯ, ಕೆಲವು ಐಐಟಿಗಳು, ದೆಹಲಿ ವಿಶ್ವವಿದ್ಯಾಲಯ, ಲಕ್ನೋ ವಿಶ್ವವಿದ್ಯಾಲಯ, ಮೊದಲಾದ ಕಡೆಗಳಲ್ಲಿ ನಡೆದಿರುವ ದಾಳಿಗಳಿಗೆ ಪ್ರತಿಯಾಗಿ ಯುವನಾಯಕರು ಮೂಡಿಬರುತ್ತಿದ್ದಾರೆ. ಆದರೆ ನಮ್ಮಲ್ಲಿರುವ ಕೊರತೆಯೆಂದರೆ ಒಂದೇ ಗುರಿಯ ಕಡೆಗೆ ಸಾಗಿರುವ ಭಿನ್ನ ವಿಚಾರಧಾರೆಗಳ ಜನರು ಒಂದಾಗದೇ ಇರುವುದು.

ನೋಟು ಅಮಾನ್ಯ ಮಾಡಿದ್ದರ ಬಗ್ಗೆ ಬೇಕಾದಷ್ಟು ಮಾತನಾಡಿದ್ದಾಗಿದೆ. ಆದರೆ ಅದಕ್ಕಿಂತಲೂ ಭೀಕರವಾದ ಭೂ ನಿಯಂತ್ರಣ ಮಸೂದೆಯನ್ನು ಸಿದ್ಧ ಮಾಡಲಾಗಿತ್ತು. ಸಂಸತ್ತಿನಲ್ಲಿ ಕಾಂಗ್ರೆಸ್, ಎಡಪಕ್ಷಗಳು ಸೇರಿದಂತೆ ಎಲ್ಲ ವಿರೋಧ ಪಕ್ಷಗಳು ಒಂದಾಗಿದ್ದರಿಂದ ಅದನ್ನು ಸೋಲಿಸಲಾಯಿತು. ಆದರೆ ಮಹಾರಾಷ್ಟ್ರ, ಗುಜರಾತ್ ಮತ್ತು ಮಧ್ಯಪ್ರದೇಶದಲ್ಲಿ ಆ ಮಸೂದೆಗಿಂತಲೂ ಭೀಕರವಾದ ಭೂ ನಿಯಂತ್ರಣ ಕಾಯಿದೆಗಳಿವೆ. ಸಂಸತ್ತಿನಲ್ಲಿ ತಿರಸ್ಕೃತವಾಗುವ ಮಸೂದೆಗಳನ್ನು ಬಿಜೆಪಿ ಸರ್ಕಾರ ಇರುವ ರಾಜ್ಯಗಳಲ್ಲಿ ಕಾಯಿದೆಗಳನ್ನಾಗಿ ಮಾಡಲಾಗುತ್ತಿದೆ. ಆದರೆ ಇದನ್ನು ವಿರೋಧಿಸುವ ಪ್ರಭಲವಾದ ಚಳವಳಿಗಳೇ ಇಲ್ಲ. ಹಾಗಾಗಿಯೇ ಅದಾನಿಗೆ 300 ಎಕರೆ, ರಾಮದೇವ್‌ಗೆ 400 ಎಕರೆ ಭೂಮಿ ಸುಲಭವಾಗಿ ಕೊಟ್ಟಿರುವುದು. ಇಂತಹ ಗಂಭೀರ ವಿಷಯಗಳಿಂದ ಜನರ ಗಮನ ಬೇರೆ ಕಡೆ ಸೆಳೆಯಲು ಗೋರಕ್ಷಣೆ ಮುಂತಾದ ಕ್ಷುಲ್ಲಕ ವಿಚಾರಗಳನ್ನು ಸಾರ್ವಜನಿಕ ಚರ್ಚೆಗೆ ಬಿಡಲಾಗುತ್ತಿದೆ. ಇದನ್ನು ತಿಳಿಯದಷ್ಟು ದಡ್ಡತನ ತೋರಿಸುತ್ತಿವೆ ನಮ್ಮ ಟಿವಿ ಮಾಧ್ಯಮಗಳು.

ಪ್ರಜಾಪ್ರಭುತ್ವ ಎನ್ನುವುದು ಬರಿಯ ಚುನಾವಣೆ ಗೆಲ್ಲುವುದಲ್ಲ. ಪ್ರಜಾಪ್ರಭುತ್ವ ಎಂದರೆ ಅತ್ಯಂತ ಕಟ್ಟಕಡೆಯ ಭಿನ್ನಾಭಿಪ್ರಾಯದ ದನಿಯನ್ನೂ ಕೂಡ ಆಲಿಸುವುದು; ಸಂವಿಧಾನ ಹಾಕಿಕೊಟ್ಟಿರುವ ಚೌಕಟ್ಟನ್ನು ಗೌರವಿಸಿ ಆಚರಣೆಗೆ ತರುವುದು. ಆದರೆ ಈಗ ಅಧಿಕಾರದಲ್ಲಿರುವ ಸರ್ಕಾರ ಸಂವಿಧಾನವನ್ನು ಉಲ್ಲಂಘನೆ ಮಾಡಿರುವುದು ಮಾತ್ರವಲ್ಲ ಪ್ರಜಾಪ್ರಭುತ್ವವನ್ನೇ ಉಲ್ಲಂಘಿಸಿದೆ. ಈ ಎಲ್ಲ ವಿಷಯಗಳನ್ನೂ ನಮ್ಮ ಮಾಧ್ಯಮಗಳು ಚರ್ಚೆಯ ವಿಷಯವಾಗಿಸದೆ ಅನಾವಶ್ಯಕ ವಿಷಯಗಳನ್ನು ಮುನ್ನೆಲೆಗೆ ತರುತ್ತಿರುವುದರಿಂದ ನಮಗೆ ಅಥವಾ ಪ್ರಗತಿಪರ ಚಳವಳಿಗೆಳಿಗೆ ಜನ ಸಮೂಹದ ಜೊತೆಗೆ ಗಂಭೀರ ವಿಷಯಗಳನ್ನು ಪ್ರಸ್ತಾಪಿಸಲೂ ಸಾಧ್ಯವಾಗದಂತಹ ಕಂದಕ ಸೃಷ್ಟಿಯಾಗಿದೆ.

ಸಂವಿಧಾನದ ಆಶಯಗಳ ಮೇಲೆ ನಡೆಯುತ್ತಿರುವ ಹಲ್ಲೆಗಳನ್ನು ಪಟ್ಟಿಮಾಡಿ ಅವುಗಳಿಗೆ ಪ್ರತಿಯಾಗಿ ಕಾರ್ಯಕ್ರಮ ರೂಪಿಸುವ ಮೂಲಕ ವ್ಯಾಪಕ ಮೈತ್ರಿಗಳನ್ನು ಕಟ್ಟಬೇಕು. ■

ಸುರೇಶ್ ಕುಷ್ಟಗಿ



"ನಾನು ರಾಯಚೂರಿನ ಕಾಮ್ರೇಡ್, ನಿಮ್ಮನ್ನು ಕಾಣಲು ಬಂದೆ. ನೀವಿರಲಿಲ್ಲ, ಮತ್ತೇ ನಾಳೆ ಬರುತ್ತೇನೆ. ಸಂಜೆ 5 ಗಂಟೆಗೆ, ನೆನಪಿರಲಿ" – ಸುರೇಶ್ ಕುಷ್ಟಗಿ ಎಂಬ ಮಾಹಿತಿಯಿದ್ದ ಚೀಟಿಯ ಮೂಲಕ ನನಗೆ ಪರಿಚಯವಾದದ್ದು, ಅದು 1981–82 ಇರಬೇಕು. ರಾಯಚೂರಿನಿಂದ ಹೊಸಪೇಟೆಗೆ ಬಂದಿದ್ದು ಸುರೇಶ್, ಸರೋಜ್ ಅಲಾಯ್ಸ್ ಅಂಡ್ ಸ್ಟೀಲ್ಸ್ ಲಿ. ನ ಫ್ಯಾಕ್ಟರಿಯಲ್ಲಿ ಕಾರ್ಮಿಕನಾಗಿ ದುಡಿಯುತ್ತಿದ್ದರು. ರಾಯಚೂರಿನ ಸಂಗಾತಿಗಳು ನಮ್ಮ ಮಾಹಿತಿ ನೀಡಿ ಸಂಪರ್ಕಿಸಲು ಹೇಳಿದ್ದರು.

ಸುರೇಶನು ನಮ್ಮ ಸಂಘಟನೆಗೆ, ಸಂಗಾತಿಗಳಿಗೆ ಪರಿಚಯವಾದ ಬಳಿಕ ಸಕ್ರಿಯವಾಗಿ ಭಾಗವಹಿಸತೊಡಗಿದ. ಸರೋಜ್ ಅಲಾಯ್ಸ್‌ನಲ್ಲಿ ಯುವ ಕಾರ್ಮಿಕರ ತಂಡ ಸಿದ್ಧವಾಯಿತು. ಮುಷ್ಕರವೂ ಆಯಿತು. ಆಗ ಹೊಸಪೇಟೆಯಲ್ಲಿ ಕಾರ್ಮಿಕರ ಸಂಘಟನೆ–ಸಿಐಟಿಯು ಇನ್ನೂ ಇರಲಿಲ್ಲ. ಈ ಕಾರ್ಮಿಕರು ಹೊಸಪೇಟೆಯಲ್ಲಿ ನಿವಾಸಿಗಳಾಗಿದ್ದರಿಂದ ಇವರೆಲ್ಲಾ ಡಿವೈಎಫ್ಐ ನ ಭಾಗವಾದರು. ಸುರೇಶ, ಚಿತ್ರವಾಡ್ಗೆಪ್ಪ, ಡಿ. ವೆಂಕಟರಮಣ ಇವರೆಲ್ಲ ಸಕ್ರಿಯವಾಗಿ ಕೆಲಸ ಮಾಡತೊಡಗಿದರು.

ಅದಾಗಲೇ ಹೊಸಪೇಟೆ, ತೋರಣಗಲ್ಲು, ಬಳ್ಳಾರಿಗಳಲ್ಲಿ ಡಿವೈಎಫ್ಐ ಬೆಳೆಯುತ್ತಿದ್ದ ಅವಧಿ. ಜಿಲ್ಲೆಯಲ್ಲಿ ಜಂಬಯ್ಯ ನಾಯಕ್, ರಾಮಚಂದ್ರ ನಾವಡ, ತಾಯಪ್ಪ ನಾಯಕ್, ಚನ್ನಿ, ಮುಂತಾದವರ ತಂಡ ಸಕ್ರಿಯವಾಗಿತ್ತು. ಜಿಲ್ಲೆಯಾದ್ಯಂತ ವಿಸ್ತರಿಸುವ ಕಾರ್ಯವೂ ನಡೆದಿತ್ತು. ಆ ದಿನಗಳಲ್ಲಿ ಹೋರಾಟಗಳು ಇಲ್ಲದ ದಿನಗಳೇ ಇರಲಿಲ್ಲ. ಹೀಗೆ ಸುರೇಶ್ ಬಳ್ಳಾರಿಯನ್ನು ಕೇಂದ್ರವಾಗಿರಿಸಿಕೊಂಡ. ಎರಿಸ್ವಾಮಿ ಕಂಬಾಳಿಮಠ, ಪ್ರಸನ್ನ, ಸಿ. ರಘು, ಯು. ಬಸವರಾಜ್ ಮುಂತಾದವರ ಸಾಥ್‌ನೊಂದಿಗೆ ಸ್ಥಳೀಯ ಪ್ರಶ್ನೆಗಳಿಗೆ ಗಮನ ಹರಿಸಿದ. ಆಗ ಬೆಳೆದು ಬಂದದ್ದು ಮಹಾನಂದಿ ಕೊಟ್ಟಂ ಸ್ಲಂನ ಜನರ ಸಂಘರ್ಷಮಯ ಹೋರಾಟ. ಹೀಗೆ ತೊಡಗಿಸಿಕೊಂಡ ಸುರೇಶ್, ಡಿವೈಎಫ್ಐ ಪ್ರಥಮ ಜಿಲ್ಲಾ ಸಮ್ಮೇಳನದಲ್ಲಿ ಜಿಲ್ಲಾ ಕಾರ್ಯದರ್ಶಿಯಾಗಿ, ರಾಜ್ಯ ಸಮಿತಿಯ ಸದಸ್ಯನಾಗಿ ಆಯ್ಕೆಯಾದ. ಸಿಪಿಐ(ಎಂ) ಬಳ್ಳಾರಿ ಜಿಲ್ಲಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ.

ಈ ಅವಧಿಯಲ್ಲೇ ಕಾಣಿಸಿಕೊಂಡದ್ದು ಬೆನ್ನು ಹುರಿಯಲ್ಲಿ ಸಮಸ್ಯೆ, ತಪಾಸಣೆಯಲ್ಲಿ ಅದು 'ನ್ಯೂರೋ ಫೈಬ್ರಮಾ' ಎಂಬ ಖಾಯಿಲೆ. ಬೆನ್ನುಹುರಿಯಲ್ಲಿ ಅಧಿಕ ಮಾಂಸದ ಬೆಳವಣಿಗೆ. ಇದಕ್ಕೆ ಶಸ್ತ್ರ ಚಿಕಿತ್ಸೆಯೇ ಪರಿಹಾರವೆಂದಾಗ, ಅದು ಮೂರು ತಜ್ಞರಿಂದ ಮಾಡಿಸಬೇಕೆಂದಾಗ, ದೆಹಲಿಯ 'ಏಮ್ಸ್' ನಿಮ್ಹಾನ್ಸ್ ಮುಂತಾದೆಡೆ ಅಲೆದಾಟ ಮಾಡಿದ. ಕೊನೆಗೆ ನಿಮ್ಹಾನ್ಸ್‌ನಲ್ಲಿ ಶಸ್ತ್ರಚಿಕಿತ್ಸೆ. ಆದರೆ ಅಲ್ಲಿ ಆದ ಒಂದು ಪ್ರಮಾದದಿಂದ ಚೇತರಿಸಿಕೊಂಡಿದ್ದ ಸುರೇಶ್ ಇಡೀ ಜೀವನ ಪೂರ್ತಿ ತಾನು ನರಳ ಬೇಕಾಯಿತು ಎಂದು ಹೇಳಿದ. ಹಂತ ಹಂತವಾಗಿ ಕಾಲುಗಳು, ಬೆನ್ನು ಸ್ವಾಧೀನ ಕಳೆದುಕೊಂಡವು. ಬಹುತೇಕ ಸಣ್ಣ–ದೊಡ್ಡ ಸುಮಾರು 7 ಬಾರಿ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದ. ನಿರಂತರ ಚಿಕಿತ್ಸೆ. ಅತೀವ ಯಾತನೆಗಳು ಜೀವನದ ಜೊತೆಗೂಡಿದವು.

ಆದರೆ ಇವೆಲ್ಲವುಗಳಿಂದ ಸುರೇಶ್ ದೃತಿಗೆಡಲಿಲ್ಲ. ನಿರುಪಯೋಗಿಯಂತೆ ಬಾಳಲಿಲ್ಲ. ಇವುಗಳ ನಡುವೆಯೇ ಅತ್ಯಂತ ಕ್ರಿಯಾಶೀಲನಾಗಿ ಸಂಗಾತಿ ಸುರೇಶ್ ತೊಡಗಿಸಿಕೊಂಡಿದ್ದ ಮತ್ತು ಸಾಮೂಹಿಕ ಹಾಗೂ ಸ್ವಯಂ ಪ್ರಯತ್ನದ ಮೂಲಕ ತಿಳುವಳಿಕೆ, ಕಾರ್ಯದ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿದ್ದ. ಆತನಿಗೆ ಸಾಹಿತ್ಯ, ವಿಜ್ಞಾನ, ಕಾನೂನು, ಸಾಮಾಜಿಕ ಹೀಗೆ ವಿವಿಧ ವಿಷಯಗಳ ಓದಿನ ಆಸಕ್ತಿ ಇತ್ತು. ಬಹುತೇಕ ಭಾಷಣಗಳಲ್ಲಿ ವಿಷಯ ಅರ್ಥ ಮಾಡಿಸುವಂತೆ ಕಥೆ, ಹಾಸ್ಯಗಳನ್ನು ಬಳಸುತ್ತಿದ್ದ. ಮಾತನಾಡುವಾಗಲೇ ಈ ನಗುವು, ಬದ್ಧತೆ ಆತನ ಯಾತನೆಗಳನ್ನು ಮರೆಸುತ್ತಿದ್ದವು.

ಒಂದು ಅವಧಿಯಲ್ಲಿ ಬೆಂಗಳೂರಿನ ಕೇಂದ್ರ–ಕ್ಕೆ ಕಾರ್ಯ ಕ್ಷೇತ್ರ ಬದಲಿಸಿಕೊಂಡಾಗ, ಐಕ್ಯರಂಗ ವಾರ ಪತ್ರಿಕೆಯ 'ಮ್ಯಾನೇಜರ್' ಆಗಿ ಕಾರ್ಯ ನಿರ್ವಹಿಸಿದ್ದಾರೆ. ರಾಜ್ಯದಲ್ಲಿ ಕರ್ನಾಟಕ ರಾಜ್ಯ ಅಂಗವಿಕಲರ ಮತ್ತು ಪೋಷಕರ ಸಂಘದ ಸ್ಥಾಪನೆಯಾಗುವಾಗ ಸಂಚಾಲಕರಲ್ಲೊಬ್ಬರಾಗಿ ಜೊತೆಗೂಡಿದ್ದಾರೆ. ಹೊಸಪೇಟೆಯಲ್ಲಿ ಪತ್ನಿ ಶ್ರೀಮತಿ ಯಶಸ್ವಿನಿಯವರೊಂದಿಗೆ ವಾತ್ಸಲ್ಯ ಟ್ರಸ್ಟ್ ಮೂಲಕ ಆಕಾಂಕ್ಷ ಬುದ್ಧಿಮಾಂದ್ಯ ಮಕ್ಕಳ ಶಿಕ್ಷಣ ಕೇಂದ್ರ, ಆರಂಭಿಸಿ ತರಬೇತಿಯನ್ನು ನೀಡುವುದರಲ್ಲಿ ತೊಡಗಿದ್ದರು. ಅತ್ಯಂತ ಸ್ನೇಹಮಯಿ, ಮಾನವೀಯ ಮಿಡಿತದಿಂದ ಎಲ್ಲರಿಗೂ ಹತ್ತಿರವಾಗಿದ್ದರು.

ಅತ್ಯುತ್ತಮ ಸಾಮರ್ಥ್ಯವಿದ್ದ ಸುರೇಶ್ ಕುಷ್ಟಗಿ ಅಂಗವಿಕಲರ ಪ್ರಜಾಸತ್ತಾತ್ಮಕ ಆಂದೋಲನಕ್ಕೆ ಇನ್ನಷ್ಟು ಹೆಚ್ಚಿನ ಕೊಡುಗೆ ನೀಡುವ ಸಾಧ್ಯತೆಗಳಿದ್ದವು. ಅವರ ಅಗಲಿಕೆಯಿಂದ ಅಪಾರ ನಷ್ಟವಾಗಿದೆ.

ಇದೇ ಜೂನ್ 4 ರಂದು ಕಾಣಿಸಿಕೊಂಡ ಎದೆನೋವಿನಿಂದ ತೀವ್ರ ಹೃದಯಾಘಾತಕ್ಕೆ ಒಳಗಾಗಿ ಹೊಸಪೇಟೆಯ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 54 ವರ್ಷ ವಯಸ್ಸಾಗಿತ್ತು. (ಜನವರಿ 14, 1964) ತಂದೆ ವೆಂಕೋಬಾಚಾರ್, ತಾಯಿ ಅನಸೂಯಮ್ಮ. ಸುರೇಶ್ ವೃದ್ಧ ತಾಯಿ, ಪತ್ನಿ, ಅಲ್ಲದೇ ಮೂವರು ಸಹೋದರರು, ಮೂವರು ಸಹೋದರಿಯರಿರುವ ಕುಟುಂಬವನ್ನ ಅಗಲಿದ್ದಾರೆ.

5 ರಂದು ನಡೆದ ಅಂತ್ಯ ಕ್ರಿಯೆಯಲ್ಲಿ ಸಿಪಿಐ(ಎಂ) ನ ರಾಜ್ಯ ಸಮಿತಿಯ ಸದಸ್ಯರಾದ ಎಸ್.ವೈ. ಗುರುಶಾಂತ್, ಜಿಲ್ಲಾ ಕಾರ್ಯದರ್ಶಿ ಹಾಗೂ ರಾಜ್ಯ ಸಮಿತಿಯ ಸದಸ್ಯರಾದ ಆರ್. ಎಸ್. ಬಸವರಾಜ್, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಹೊಸಪೇಟೆ ತಾಲೂಕ್ ಕಾರ್ಯದರ್ಶಿ ಭಾಸ್ಕರರೆಡ್ಡಿ, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಂ. ಜಂಬಯ್ಯನಾಯಕ್, ಕರ್ನಾಟಕ ರಾಜ್ಯ ಅಂಗವಿಕಲರ, ಪಾಲಕರ ಒಕ್ಕೂಟದ ರಾಜ್ಯ ಕಾರ್ಯದರ್ಶಿ ರಂಗಪ್ಪದಾಸರ್, ಎಲ್ಐಸಿ ನೌಕರರ ಮುಖಂಡರಾದ ಚನ್ನಬಸಯ್ಯ ಜೆ.ಎಂ., ಜೆ. ಪ್ರಕಾಶ್, ಡಿವೈಎಫ್ಐನ ಹುಳ್ಳಿಪ್ರಕಾಶ್, ಬಸವರಾಜ್ ಕಮ್ಮಾರ್, ಅಲ್ಲದೆ ಅವರ ಹಿರಿಯ ಸಹೋದರ ರಾಘವೇಂದ್ರ ಕುಷ್ಟಗಿ, ಲೇಖಕ ಗಂಗಾಧರ ಕುಷ್ಟಗಿ, ಸರ್ಕಾರಿ ನೌಕರರ ಒಕ್ಕೂಟದ ತಾಯಪ್ಪ ನಾಯಕ್, ಸಾಫ್ಟ್‌ವೇರ್‌ನ ಖಾಜಾಪೀರ್, ಮತ್ತು ಅಪಾರ ಸಂಖ್ಯೆಯಲ್ಲಿ ಸ್ನೇಹಿತರು, ಬಂಧುಗಳು, ಸಂಗಾತಿಗಳು ಪಾಲ್ಗೊಂಡಿದ್ದರು.

ಎಸ್.ವೈ. ಗುರುಶಾಂತ್

ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡಲು ಎಸ್‌ಎಫ್‌ಐ ಆಗ್ರಹ


ಗಜೇಂದ್ರಗಡ: ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್ಎಫ್ಐ)ನ ಗಜೇಂದ್ರಗಡ ನಗರ ಸಮಿತಿ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡಲು ಆಗ್ರಹಿಸಿ ಸ್ಥಳಿಯ ವಿಶೇಷ ತಹಶೀಲ್ದಾರ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಎಸ್ಎಫ್ಐ ರಾಜ್ಯ ಕಾರ್ಯದರ್ಶಿಗಳಾದ ಗುರುರಾಜ ದೇಸಾಯಿ ಮಾತನಾಡಿ ರಾಜ್ಯ ಸರ್ಕಾರ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುತ್ತಿರುವುದನ್ನು ಎಸ್ಎಫ್ಐ ಸ್ವಾಗತಿಸುತ್ತದೆ. ಬರಗಾಲವಿರುವ ಕಾರಣ ಬಸ್‌ಪಾಸ್ ಯೋಜನೆಯನ್ನು ಎಲ್ಲಾ ವಿದ್ಯಾಥಿಗಳಿಗೆ ವಿಸ್ತರಿಸಬೇಕು. ಎಸ್ಎಫ್ಐ ಎಲ್ಲಾ ಕಾಲೇಜು ಹಂತದವರೆಗೂ ಉಚಿತ ಬಸ್‌ಪಾಸ್ ನೀಡುವಂತೆ ಹೋರಾಟ ನಡೆಸುತ್ತಾ ಬಂದಿದೆ. ಸದ್ಯ ರಾಜ್ಯದಲ್ಲಿ ಬರಗಾಲವಿರುವ ಕಾರಣ ದುಬಾರಿ ಶುಲ್ಕ ಮತ್ತು ದುಬಾರಿ ಬಸ್ ಶುಲ್ಕ ಕಟ್ಟಿ ಶಿಕ್ಷಣ ಪಡೆಯುವುದು ಕಷ್ಟಕರವಾಗಿದೆ. ಹಾಗಾಗಿ ಉಚಿತ ಬಸ್‌ಪಾಸ್ ಸೇರಿದಂತೆ ಪದವಿಯವರೆಗೂ ಉಚಿತ ಶಿಕ್ಷಣ ನೀಡಬೇಕು. ಕೇರಳ ಮತ್ತು ತಮಿಳುನಾಡಿನಲ್ಲಿ ಪದವಿ ಹಂತದವರೆಗೂ ಉಚಿತ ಬಸ್‌ಪಾಸ್ ನೀಡುತ್ತಿದ್ದು ಅದೇ ಮಾದರಿಯಲ್ಲಿ ಬಸ್‌ಪಾಸ್ ನೀಡಬೇಕು.

ರಾಜ್ಯ ಸಮಿತಿ ಸದಸ್ಯ ಗಣೇಶ ರಾಠೋಡ, ಗದಗ ಜಿಲ್ಲಾ ಅ ಧ್ಯಕ್ಷರಾದ ಶಿವಾನಂದ ಬೊಸ್ಲೆ, ಕಾರ್ಯದರ್ಶಿ ಶಿವಾಜಿ ಗಡ್ಡದ, ಜಿಲ್ಲಾ ಉಪಾಧ್ಯಕ್ಷ ಅಶೋಕ ಉಕ್ಕಿಸಲ, ನಗರ ಸಮಿತಿ ಕಾರ್ಯದರ್ಶಿ ಮಹಾಂತೇಶ ಹಡಪದ, ಅಧ್ಯಕ್ಷ ಶಿವರಾಜ ನಾಯಕ, ಮಾರುತಿ ನಿಡಗುಂದಿ, ಮುಖಂಡರುಗಳಾದ ಆರ್ಯಾದ್ ಬಡಿಗೇರ, ಸಿದ್ದಿಂಗ ಹಿರೇಮಠ, ಚಂದ್ರು ರಾಠೋಡ, ರಾಘವೇಂದ್ರ, ಕರಿಯಮ್ಮ, ಪ್ರವೀಣ ತೆಗ್ಗಿನಮನಿ ಮುಂತಾದವರು ಭಾಗವಹಿಸಿದ್ದರು.



'ದೇಶಪ್ರೇಮಿ' ಸಮಾವೇಶದಲ್ಲಿ ಬಿಡುಗಡೆಯಾಗಲಿರುವ ಪುಸ್ತಕ



2014ರ ನಂತರ ಹೊಸ–ಹೊಸ ಪದಪುಂಜಗಳ, ಸುರಿಮಳೆಯನ್ನು ಕಾಣುತ್ತಿದ್ದೇವೆ. ಇವುಗಳಲ್ಲಿ ಹಳೆಯ ಅರ್ಥಗಳನ್ನು ಕಳಕೊಂಡ ಪದಗಳಿವೆ, ವಿರೂಪಗೊಂಡ ಪದಗಳೂ ಇವೆ. ರಾಷ್ಟ್ರೀಯವಾದ, ದೇಶಭಕ್ತಿ, ರಾಜದ್ರೋಹ ಇವುಗಳಲ್ಲಿ ಕೆಲವು. ಅವು ಪ್ರಚಾರ ಪಡೆಯುತ್ತಿರುವ ರೀತಿ ಕೆಲವರನ್ನು ಆತಂಕಕ್ಕೀಡು ಮಾಡಿದರೆ, ಇನ್ನು ಕೆಲವರನ್ನು ಗೊಂದಕ್ಕೀಡುಮಾಡಿದೆ. ಇದು ಕೇವಲ ಭಾವುಕತೆಯಂತೆ ಕಾಣುತ್ತಿಲ್ಲ, ಹಾಗಿದ್ದರೆ ನಿಜವಾಗಿ ರಾಷ್ಟ್ರೀಯವಾದ ಎಂದರೇನು? ಅದೇಕೆ ಈಗ ಭಾರೀ ಪ್ರಚಾರ ಪಡೆಯುತ್ತಿದೆ.

ಇದು ಭಾವನೆಯ ಪ್ರಶ್ನೆ ಮಾತ್ರವೇ? ಅಲ್ಲ, ಇದರ ಹಿಂದೆ ಒಂದು ರಾಜಕೀಯ ಅರ್ಥಶಾಸ್ತ್ರವೇ ಇದೆ ಎನ್ನುತ್ತಾರೆ ಇದರ ಸುತ್ತ ಆಗುತ್ತಿರುವ ಬೆಳವಣಿಗೆಗಳನ್ನು ವಿಶ್ಲೇಷಿಸುತ್ತಿರುವ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್. ನಿಜವಾಗಿ ಈಗ ಚಾಲ್ತಿ ಪಡೆದಿರುವ ರಾಷ್ಟ್ರೀಯವಾದ ಈ ನೆಲದ ಅಥವ 'ರಾಷ್ಟ್ರ'ದ ಚಿಂತನೆ ಅಲ್ಲ, ಅದು ಮೂಲತಃ ಯುರೋಪಿನಿಂದ ಬಂದದ್ದು, ಮತ್ತು ಈ ನೆಲದಲ್ಲಿಯೇ ಬೆಳೆದು ಬಂದ, ಆದರೆ ಕಳೆದ ಕೆಲವು ದಶಕಗಳಲ್ಲಿ ಮರೆವಿಗೆ ಸಂದಿರುವ ರಾಷ್ಟ್ರೀಯವಾದದ ಜಾಗವನ್ನು ಇದೀಗ ಪಡೆದಿದೆ ಎಂಬುದು ವಿಡಂಬನೆಯೇ ಅಲ್ಲವೇ?

ಈ ವಿಡಂಬನೆಯ ಆಳಕ್ಕೆ ಹೋಗಿರುವ ಪ್ರೊ. ಪಟ್ನಾಯಕ್ ಅವರು ಇದಕ್ಕೆ ಸಂಬಂಧಪಟ್ಟಂತೆ ನವ–ಉದಾರವಾದಿ ಅರ್ಥಶಾಸ್ತ್ರ, ಹಿಂದುತ್ವ ಅಜೆಂಡಾ, ಕಾರ್ಪೊರೇಟ್‌ಗಳ ಪಾತ್ರ, ಪ್ರಜಾಪ್ರಭುತ್ವ, ಸರ್ವಾಧಿಕಾರಶಾಹಿ ಇತ್ಯಾದಿ ಪ್ರಶ್ನೆಗಳನ್ನು ಪರಿಶೀಲಿಸುತ್ತ ಬಂದಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ಅವರು ಬರೆದ ಇಂತಹ ಆರು ಲೇಖನಗಳ ಸಂಗ್ರಹ ಇದು. ರಾಷ್ಟ್ರೀಯವಾದದ ಎರಡು ಪರಿಕಲ್ಪನೆಗಳು, ರಾಷ್ಟ್ರೀಯವಾದ ಮತ್ತು ಹಿಂದುತ್ವ ಅಜೆಂಡಾ, ಚಿಂತನೆಯ ಮೇಲೆ ಹಲ್ಲೆ, ಕಾರ್ಪೊರೇಟ್–ಕೋಮುವಾದಿ ಮೈತ್ರಿ ಸಂಭಾಳಿಸಲು ಹಲವು ತಂತ್ರಗಳು, ಸರ್ವಾಧಿಕಾರಶಾಹಿಯೂ ಮತ್ತು ವಿಚಾರಹೀನತೆಯ ಬಗ್ಗೆ ಹೆಮ್ಮೆಯೂ, ಕೋಮುವಾದಕ್ಕೆ ಎದುರಾಗಿ ಕಾರ್ಮಿಕ ವರ್ಗದ ಹೋರಾಟ – ಇವೇ ಆ ಆರು ಲೇಖನಗಳು.

ಬಿಲಿಯಗಟ್ಟಲೆ ಮೂಲರಚನೆ ನಿಧಿ ಕೂಡ ಬಂಡ್ವಾಳವಿಲ್ಲದ ಬಡಾಯಿ ?



ನಮ್ಮ ಮಾನ್ಯ ಪ್ರಧಾನಿಗಳು ಜಗತ್ತೆಲ್ಲ ಸುತ್ತುತ್ತಿದ್ದರೆ, ಅದು ನಮ್ಮ ದೇಶಬಾಂಧವರಿಗೆ ಅಚ್ಛೇ ದಿನ್‌ಗಳನ್ನು ತರುವ ಡಾಲರುಗಳು ಭಾರತಕ್ಕೆ ದಂಡಿಯಾಗಿ ಬರುವಂತೆ ಮಾಡಲು ಎಂದು 'ಭಕ್ತಜನ' ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಆದರೆ ಅವರ ಆಳ್ವಿಕೆಯ ಮೂರು ವರ್ಷ ಕಳೆಯುತ್ತಿರುವಂತೆ ಈ ರಂಗದಲ್ಲೂ ಅದು ಕೇವಲ ಲೊಳಲೊಟ್ಟೆಯಾಗುತ್ತಿದೆ.

ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಕಟವಾಗಿರುವ ಜೂನ್ 3ರ ಒಮದು ವರದಿಯ ಪ್ರಕಾರ ಡಿಸೆಂಬರ್ 2015ರಲ್ಲಿ ಅಚ್ಛೆ ದಿನಗಗಳ ವೈಖರಿಗೆ ಅನುಗುಣವಾಗಿ ವೈಭವೋಪೇತವಾಗಿ ಆರಂಭಿಸಲಾದ 40,000 ಕೋಟಿರೂ.ಗಳ 'ರಾಷ್ಟ್ರೀಯ ಹೂಡಿಕೆ ಮತ್ತು ಮೂಲರಚನೆ ನಿಧಿ(ಎನ್‌ಐಐಎಫ್) ಗೆ ಈ 18 ತಿಂಗಳಲ್ಲಿ ಒಮದು ಡಾಲರೂ ಬಂದಿಲ್ಲ!

ಈ ನಿಧಿಗೆ 49% ಸರಕಾರ ಕೊಡುತ್ತದೆ, ಉಳಿದ 51% ವನ್ನು ದೇಶ–ವಿದೇಶಗಳ ಹೂಡಿಕೆದಾರರಿಂದ ಸಂಗ್ರಹಿಸಲಾಗುತ್ತದೆ, ಅದರಲ್ಲೂ ಅಂತರ್‍ರಾಷ್ಟ್ರೀಯ ಪೆನ್ಶನ್ ಫಂಡ್‌ಗಳು, ವೆಲ್ತ್ ಫಂಡ್‌ಗಳು ಇತ್ಯಾದಿಗಳಿಂದ. ಈ ಬಗ್ಗೆ ಸತತವಾಗಿ ಸರಕಾರ ವಿವಿಧ ಹೂಡಿಕೆದಾರರೊಂದಿಗೆ ಮಾತುಕತೆಗಳನ್ನು ನಡೆಸುತ್ತಲೇ ಇದ್ದರೂ ಇದುವರೆಗೆ ಯಾವ ಹೂಡಿಕೆಯೂ ಬಂದಿಲ್ಲ.

ಇಂಡಿಯನ್ ಎಕ್ಸ್‌ಪ್ರೆಸ್ ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಕೇಳಿದ ಪ್ರಶ್ನೆಗಳಿಗೆ ಮೇ 23ರಂದು ಉತ್ತರಿಸುತ್ತ ಹಣಕಾಸು ಮಂತ್ರಾಲಯ ಇನ್ನೂ ಈ ನಿಧಿ ಮೂಲರಚನೆ ಪ್ರಾಜೆಕ್ಟ್‌ಗಳಲ್ಲಿ ಹೂಡಿಕೆ ಆರಂಭಿಸಿಲ್ಲ, ಯಾವುದೇ ವಿದೇಶಿ ಹೂಡಿಕೆ ಬಂದಿಲ್ಲ ಎಂದು ಹೇಳಿರುವುದಾಗಿ ಪತ್ರಿಕೆ ವರದಿ ಮಾಡಿದೆ.

ಸರಕಾರ ಅಬುಧಬಿ ಇನ್‌ವೆಸ್ಟ್‌ಮೆಂಟ್ ಅಥಾರಿಟಿ, ಕತಾರ್ ಇನ್‌ವೆಸ್ಟ್‌ಮೆಂಟ್ ಅಥಾರಿಟಿ, ರಷ್ಯಾದ ರುಸ್‌ನಾನೊ ಒಜೆಎಸ್‌ಸಿ ಯೊಂದಿಗೆ ಎಂಒಯು ಗಳನ್ನು ಮಾಡಿಕೊಮಡಿದ್ದರೂ ಅದರಿಂದ ಎನ್‌ಐಐಎಫ್‌ಗೆ ಏನೂ ಹೂಡಿಕೆ ಬಮದಿಲ್ಲ ಎಂದು ತಿಳಿಸಲಾಗಿದೆ.

ಕಳೆದ ಹಣಕಾಸು ವರ್ಷದಲ್ಲಿ 40,000 ಕೋಟಿ ರೂ. ಮೂಲರಚನೆ ಹೂಡಿಕೆಗಳಿಗಾಗಿ ಸಂಗ್ರಹಿಸುವ ಗುರಿಯಿಟ್ಟುಕೊಂಡಿರುವ ಈ ನಿಧಿಯ ಆಡಳಿತ ವೆಚ್ಚಕ್ಕೆ ಬಜೆಟಿನಿಂದ 15 ಕೋಟಿ ರೂ. ನೀಡಲಾಗಿದೆಯಷ್ಟೇ.

ಕಳೆದ ವರ್ಷ ಫೆಬ್ರುವರಿ(2016)ಯಲ್ಲಿ ಭಾರತ ಹೂಡಿಕೆ ಶೃಂಗ ಸಭೆಯಲ್ಲಿ ಮಾತಾಡುತ್ತ ಆಗ ಆರ್ಥಿಕ ವಯವಹಾರಗಳ ಇಲಾಖೆಯಲ್ಲಿ ಕಾರ್ಯದರ್ಶಿಗಳಾಗಿದ್ದವರು 2016–17 ಮತ್ತು ನಂತರ ಈ ನಿಧಿ ಬಾರತದ ಮೂಲರಚನೆಯ ಬೆಳವಣಿಗೆಯಲ್ಲಿ ದೊಡ್ಡ ಚಾಲಕಶಕ್ತಿಯಾಗಲಿದೆ, ಭಾರತದ ಮೂಲರಚನೆ ವಲಯಕ್ಕೆ ಅಪಾರ ವಿದೇಶಿ ಹೂಡಿಕೆಗಳನ್ನು ತರುವ ಒಮದು ಪ್ರಧಾನ ವಾಹಕವಾಗುತ್ತದೆ ಎಮದಿದ್ದರು ಎಂಬುದನ್ನು ಇಂಡಿಯನ್ ಎಕ್ಸ್‌ಪ್ರೆಸ್‌ನ ವಿಶ್ಲೇಷಕರು ನೆನಪಿಸಿದ್ದಾರೆ.

ಮೂರು ವರ್ಷಗಳು ಮುಗಿಯುವ ವೇಳೆಗೆ ಕೃಷಿಯನ್ನು ಸಮೃದ್ಧಗೊಳಿಸುವುದು, ರೈತರನು ಸಬಲೀಕರಣ ಕೇವಲ ಬಡಾಯಿ ಎಂದು ಸಾಬೀತಾಗಿದ್ದರೆ, ಮೂಲರಚನೆಯ ಕ್ಷೇತ್ರದಲ್ಲಿ ಅಕ್ಷರಶಃ ಬಂಡ್ವಾಳವಿಲ್ಲದ ಬಡಾಯಿ ಆಗುತ್ತಿದೆಯೇ?

ಭಯೋತ್ಪಾದಕ ಗುಂಪುಗಳಿಗೆ ಸೇರುತ್ತಿರುವ ಕಾಶ್ಮೀರಿ ಯುವಕರ ಸಂಖ್ಯೆ ದ್ವಿಗುಣ

ಕಾಶ್ಮೀರ ಕಣಿವೆಯಲ್ಲಿ ಈ ವರ್ಷದ ಐದು ತಿಂಗಳಲ್ಲಿ ಭಯೋತ್ಪಾದಕ ಗುಂಪುಗಳಿಗೆ ಸೇರಿರುವ ಯುವಕರ ಸಂಖ್ಯೆ 2016 ರ ಇಡೀ ವರ್ಷದ ಸಂಖ್ಯೆಯ ದುಪ್ಪಟ್ಟು ಎಂದು ಬೇಹುಗಾರಿಕೆ ಸಂಸ್ಥೆಗಳು ಗೃಹ ಮಂತ್ರಾಲಯಕ್ಕೆ ಎಚ್ಚರಿಕೆ ನೀಡಿವೆ ಎಂದು ಡೆಕ್ಕನ್ ಕ್ರಾನಿಕಲ್ (ಜೂನ್3) ವರದಿ ಮಾಡಿದೆ.

ಇದರ ಹಿಂದಿನ ದಿನವೇ ಗೃಹಮಂತ್ರಿಗಳು 'ಮಿಂಚಿನ ಪ್ರಹಾರ'(ಸರ್ಜಿಕಲ್ ಸ್ಟ್ರೈಕ್) ನಂತರ ಉಗ್ರಗಾಮಿಗಳ ನುಸುಳಿಕೆ ಕಡಿಮೆಯಾಗಿದೆ ಎಂದು ಹೇಳಿದ್ದರು ಎಂಬುದೂ ಗಮನಾರ್ಹ. ಈ ಮೊದಲು ನೋಟುರದ್ಧತಿಯಿಂದ ಭಯೋತ್ಪಾದನೆ ನಿಗ್ರಹವಾಗುತ್ತದೆ ಎಂದೂ ಹೇಳಲಾಗುತ್ತಿತ್ತು, ಈಗಲೂ 'ಭಕ್ತಜನ' ಹೇಳುತ್ತಿದ್ದಾರೆ.

ಬೇಹುಗಾರಿಕೆ ಸಂಸ್ಥೆಗಳ ಪ್ರಕಾರ ಕಳೆದ ವರ್ಷ 128 ಸ್ಥಳೀಯ ಯುವಕರು ಭಯೋತ್ಪಾದಕ ಗುಂಪುಗಳಿಗೆ ಸೇರಿದ್ದರು, ಈ ವರ್ಷ ಈಗಾಗಲೇ ಮೇ ಕೊನೆಯ ಹೊತ್ತಿಗೆ ಇದು 260ರಿಂದ 300 ಆಗಿರುವ ಸಾಧ್ಯತೆಯಿದೆಯಂತೆ. ಅಲ್ಲದೆ ಈ ಮೊದಲು ದಕ್ಷಿಣ ಕಾಶ್ಮೀರದಿಂದ ಮಾತ್ರ ಯುವಜನರು ಭಯೋತಾದನೆಯತ್ತ ಆಕರ್ಷಿತರಾಗುತ್ತಿದ್ದರು, ಈಗ ಇದು ಉತ್ತರ ಭಾಗಕ್ಕೂ ವಿಸ್ತರಿಸಿದೆ ಎಂದು ಬೇಹುಗಾರಿಕೆ ಸಂಸ್ಥೆಗಳು ಎಚ್ಚರಿಸಿರುವುದಾಗಿಯೂ ಈ ವರದಿ ಹೇಳುತ್ತದೆ.

ಇದಕ್ಕೆ ಕಾರಣ ಭಯೋತ್ಪಾದಕ ಗುಂಪುಗಳು ಸಾಮಾಜಿಕ ಮಾಧ್ಯಮಗಳ ಮೂಲಕ ಮಾಡುತ್ತಿರುವ ತೀವ್ರ ಪ್ರಚಾರ ಎಂದು ಈ ಸಂಸ್ಥೆಗಳು ಹೇಳಿವೆಯಂತೆ. ಆದರೆ ಇತ್ತೀಚಿನ ದಿನಗಳ ಬೆಳವಣಿಗೆಗಳನ್ನು ನೋಡಿದರೆ ಇದಕ್ಕಿಂತ ಮುಖ್ಯ ಕಾರಣ ಕೇಂದ್ರ ಸರಕಾರ ಮತ್ತು ರಾಜ್ಯಸರಕಾರದ ವಿಫಲತೆ ಎಂದು ಕೆಲವು ವಿಶ್ಲೇಷಕರು ಹೇಳುತ್ತಾರೆ.

ಇದು ಪ್ರಧಾನಿಗಳು 2014 ರ ಚುನಾವಣೆಗಳಲ್ಲಿ ರಾಜ್ಯದ ಜನತೆಗೆ ನೀಡಿದ ವಚನಗಳನ್ನು ಪಾಲಿಸದಿರುವುದು ಮಾತ್ರವಲ್ಲ, ಸಂಘಪರಿವಾರದ ಉಗ್ರ ನಿಲುವುಗಳು ಕಾಶ್ಮೀರಿಗಳಲ್ಲಿ, ಅದರಲ್ಲೂ ಯುವಜನರಲ್ಲಿ ಪರಕೀಯ ಭಾವವನ್ನು ಬಹಳಷ್ಟು ಹೆಚ್ಚಿಸಿರುವುದರ ಫಲಿತಾಂಶ, ಯುವಜನರ ಹೊಸ ಪೀಳಿಗೆ ಈಗ ಪ್ರತಿರೋಧದ ಮುಂಚೂಣಿಗೆ ಬಂದಿದೆ ಎಂದು ಕಾಶ್ಮೀರದ ಸಿಪಿಐ(ಎಂ) ಮುಖಂಡ ಎಂ.ವೈ. ತರಿಗಾಮಿ ಆತಂಕದಿಂದ ಹೇಳುತ್ತಾರೆ.

ಕಾಶ್ಮೀರಿಗಳು ದುರಂತಗಳ ಪುನರಾವರ್ತನೆ ಬಯಸುವುದಿಲ್ಲ, ತಮ್ಮ ಮಕ್ಕಳಿಗೆ ಒಂದು ಉತ್ತಮ ಭವಿಷ್ಯ ಬಯಸುತ್ತಾರೆ, ಶಾಂತಿ ಮತ್ತು ಅಭಿವೃದ್ಧಿ ಬಯಸುತ್ತಾರೆ, ಆದರೆ ಘನತೆಯಿಂದ– ಎನ್ನುತ್ತಾರೆ ತರಿಗಾಮಿ.. ಪ್ರಧಾನಿಗಳ 'ಟೆರರಿಸಂ ವರ್ಸಸ್ ಟೂರಿಸಂ' ಕಥನ ಆ ಘನತೆಯನ್ನು ಮಾನ್ಯ ಮಾಡುವಂತೆ ಕಾಣುತ್ತಿಲ್ಲ.

ಏರ್‌ಇಂಡಿಯಾ ಮಾರಾಟ–ಖಾಸಗಿ ಖರೀದಿದಾರರಿಗೆ 50,000 ಕೋಟಿ ರೂ. ಬಕ್ಷೀಸಿನ ಯೋಚನೆ!

ಹಣಕಾಸು ಮಂತ್ರಿಗಳು ದೇಶದ ರಾಷ್ಟ್ರೀಯ ವಿಮಾನ ಸಾರಿಗೆಯಾದ ಏರ್‌ಇಂಡಿಯಾದ ಖಾಸಗೀಕರಣವನ್ನು ಸಮರ್ಥಿಸಿಕೊಂಡಿದ್ದಾರೆ. ಅದರ ಬೆನ್ನಿಗೇ ನೀತಿ ಆಯೋಗ ಏರ್ ಇಂಡಿಯಾದ 30,000 ಕೋಟಿ ರೂ. ಸಾಲಹೊರೆಯನ್ನು ಮನ್ನಾ ಮಾಡಿ ಅದನ್ನು ಪೂರ್ತಿಯಾಗಿ ಖಾಸಗಿಯವರಿಗೆ ಮಾರಿ ಬಿಡಿ ಎಂದು ಶಿಫಾರಸು ಮಾಡಿದೆ. **30,000 ಕೋಟಿ ರೂ. ಮನ್ನಾ ಮಾಡುವುದಾದರೆ ಅದನ್ನು ಖಾಸಗೀಕರಿಸುವ ಅಗತ್ಯವಾದರೂ ಏನಿದೆ, ಸಾಲ ಹೊರೆಯನ್ನು ಮನ್ನಾ ಮಾಡಿ ಸಾರ್ವಜನಿಕ ವಲಯದಲ್ಲೇ ಉಳಿಸಿಕೊಳ್ಳಬಹುದಲ್ಲವೇ ಎಂದು ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಪ್ರಶ್ನಿಸಿದೆ.**

ಇದು ಗಂಭೀರವಾದ ಪ್ರಶ್ನೆ. ಏಕೆಂದರೆ 2008ರಿಂದ ನಷ್ಟದಲ್ಲಿದ್ದ ಏರ್ ಇಂಡಿಯಾ ಈಗ 2015ರಿಂದ ಲಾಭ ಮಾಡುತ್ತಿದೆ ಎಂಬ ಸಂಗತಿಯನ್ನು ಸರಕಾರ ಮತ್ತು ನೀತಿ ಆಯೋಗ ಎರಡೂ ಮರೆಮಾಚಿದಂತಿದೆ. **2015–16ರಲ್ಲಿ ತನ್ನ ನಿರ್ವಹಣಾ ನಷ್ಟಗಳನ್ನು ಭರಿಸಿಕೊಂಡು 105 ಕೋಟಿ ರೂ. ಲಾಭ ಮಾಡಿದ್ದರೆ, 2016–17ರಲ್ಲಿ 300 ಕೋಟಿ ರೂ. ಲಾಭ ಮಾಡುವ ಅಂದಾಜಿದೆ ಎಂಬ ಸಂಗತಿಯತ್ತ ಸಿಐಟಿಯು ಗಮನ ಸೆಳೆದಿದೆ. 30,000 ಕೋಟಿ ರೂ. ಸಾಲ ಹೊರೆ ಆಗಿರುವುದು ಏರ್ ಇಂಡಿಯಾದ ನಿರ್ವಹಣಾ ಕೊರತೆಯಿಂದ ಅಲ್ಲ, ಬದಲಾಗಿ ಆಳುವ ಸರಕಾರಗಳ ಧೋರಣೆಗಳಿಂದಾಗಿಯೇ ಎಂಬುದನ್ನು ಕೂಡ ಗಮನಿಸಬೇಕು. ಆದರೂ ಖಾಸಗಿ ವಿಮಾನ ಕುಳಗಳಂತೆ ಏರ್ ಇಂಡಿಯಾ ಇದುವರೆಗೆ ಸುಸ್ತಿದಾರನಾಗಿಲ್ಲ ಎಂಬುದೂ ಗಮನಾರ್ಹ.**

ಇದಕ್ಕೆ ಮೊದಲು ದೇಶದ ಖಜಾನೆಯಿಂದ, ಅಂದರೆ ಬಜೆಟ್ ಮೂಲಕ 24723.74 ಕೋಟಿ ರೂ.ಗಳನ್ನು ಇಕ್ವಿಟಿಯಾಗಿ ಕೊಡಲಾಗಿದೆ. ಜತೆಗೆ 23 ಹೊಸ ವಿಮಾನಗಳನ್ನು ಖರೀದಿಸಲಾಗಿದೆ, ಇನ್ನೂ 7 ವಿಮಾನಗಳು ಸೇರಿಕೊಳ್ಳಲಿವೆ.. ಇಷ್ಟೆಲ್ಲಾ ಆದ ಮೇಲೆ, ಅದು ನಿರ್ವಹಣಾ ನಷ್ಟಗಳನ್ನು ಭರಿಸಿಕೊಂಡು ಲಾಭ ಮಾಡಲಾರಂಭಿಸಿದ ಮೇಲೆ 30,000 ಕೋಟಿ ರೂ. ಸಾಲವನ್ನೂ ಮನ್ನಾ ಮಾಡಿ ಖಾಸಗೀಕರಿಸುವ ಮಾತಾಡುವುದು, ವಾಸ್ತವವಾಗಿ **ಈ ಎಲ್ಲ ಕ್ರಮಗಳ ಪೂರ್ಣ ಪ್ರಯೋಜನ ಸಾರ್ವಜನಿಕ ವಲಯದ ಏರ್ ಇಂಡಿಯಾಕ್ಕೆ ದೊರೆಯದೆ ಅದನ್ನು ಈಗ ಕಣ್ಣು ಮುಚ್ಚಿ ಖರೀದಿಸಬಹುದಾದ ಖಾಸಗಿ ಕುಳಗಳಿಗೆ ವರ್ಗಾಯಿಸಲು ಎಂಬುದು ಸ್ಪಷ್ಟ ತಾನೇ? ಅದನ್ನು ಸಾರ್ವಜನಿಕ ಹಣದ ಪೋಲನ್ನು ತಡೆಯಲಿಕ್ಕಾಗಿ ಎಂದು ಸಮರ್ಥಿಸಿಕೊಳ್ಳುವುದು ವಂಚನೆಯೆಂದರೆ ತಪ್ಪಾಗುತ್ತದೆಯೇ?**

ಇದು ಸಾರ್ವಜನಿಕ ಹಣವನ್ನು ಉಳಿಸಲಿಕ್ಕಾಗಿ ಅಲ್ಲ, ಬದಲಾಗಿ ಅದನ್ನು ಈಗಾಗಲೇ ತಮ್ಮ ಅಸಮರ್ಥತೆಯನ್ನು ಜಗಜ್ಜಾಹೀರು ಮಾಡಿರುವ ದೇಶಿ–ವಿದೇಶಿ ಖಾಸಗಿ ವಿಮಾನ ಕುಳಗಳಿಗೆ ಧಾರೆಯೆರೆದು, ಒಂದು ರಾಷ್ಟ್ರೀಯ ಆಸ್ತಿಯನ್ನು ಅವರಿಗೆ ವರ್ಗಾಯಿಸಲಿಕ್ಕೆ, ಇದು ಸಂಪೂರ್ಣವಾಗಿ ರಾಷ್ಟ್ರೀಯ ಹಿತಾಸಕ್ತಿಗೆ ಮಾರಕ ಎಂದು ಸಿಐಟಿಯು ಇದನ್ನು ಬಲವಾಗಿ ಖಂಡಿಸಿದೆ. ದುಡಿಯುವ ಜನತೆ ಮತ್ತು ಕಾರ್ಮಿಕ ಆಂದೋಲನ ಇಂತಹ ರಾಷ್ಟ್ರ–ವಿರೋಧಿ ಕ್ರಮವನ್ನು ವಿರೋಧಿಸಬೇಕು ಎಂದು ಅದು ಕರೆ ನೀಡಿದೆ.

ಭಾರತದ ಸಾರ್ವಜನಿಕ ವಲಯದ ಪ್ರತಿಷ್ಠಿತ ಸಂಸ್ಥೆ ಇಸ್ರೊ ಅತ್ಯಂತ ಶಕ್ತಿಯುತ ಜಿಎಸ್‌ಎಲ್‌ವಿ ಮಾರ್ಕ್–3 ರಾಕೆಟನ್ನು ಯಶಸ್ವಿಯಾಗಿ ಹಾರಿಸಿ ಇನ್ನೊಂದು ಮೈಲಿಗಲ್ಲು ದಾಟಿದೆ – ಸುದ್ದಿ



ವ್ಯಂಗ್ಯಚಿತ್ರ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಈಗ ತೈಲಕಂಪನಿಗಳಿಗೆ ನಿರ್ದೇಶನ
ಸರ್ದಾರ್ ಪಟೇಲ್ ಪ್ರತಿಮೆಗೆ 200 ಕೋಟಿ ರೂ.

ಸಾರ್ವಜನಿಕ ವಲಯ(ಪಿಎಸ್‌ಯು)ದ ತೈಲ ಕಂಪನಿಗಳು ಗುಜರಾತಿನ ನರ್ಮದ ಜಿಲ್ಲೆಯಲ್ಲಿ ಸರ್ದಾರ್ ಸರೋವರದ ಬಳಿ ಸರ್ದಾರ್ ಪಟೇಲ್ ಅವರ 182 ಮೀಟರ್ ಎತ್ತರದ 'ಐಕ್ಯತೆಯ ಪ್ರತಿಮೆ' ಸ್ಥಾಪಿಸುವ ಪ್ರಧಾನಿಗಳ ಮೆಚ್ಚಿನ ಪ್ರಾಜೆಕ್ಟಿಗೆ 200 ಕೋಟಿ ರೂ.ಗಳನ್ನು ತಮ್ಮ 'ಕಾರ್ಪೊರೇಟ್ ಹೊಣೆ ನಿಧಿ'ಯಿಂದ 200 ಕೋಟಿ ರೂ. ಕೊಡಬೇಕೆಂದು ನಿರ್ದೇಶನ ನೀಡಲಾಗಿದೆ ಎಂದು ಪತ್ರಿಕೆಗಳು ವರದಿ ಮಾಡಿವೆ. ಒಎನ್‌ಜಿಸಿ ಮತ್ತು ಐಒಸಿ ತಲಾ 50 ಕೋಟಿ ರೂ. ಮತ್ತು ಇತರ ಸಾರ್ವಜನಿಕ ವಲಯದ ತೈಲ ಕಂಪನಿಗಳು ತಲಾ 25 ಕೋಟಿ ರೂ. ನೀಡಬೇಕಂತೆ.

ಕಳೆದ ವಾರ, ಮೋದಿ ಸರಕಾರದ '3ನೇ ವಾರ್ಷಿಕೋತ್ಸವದ ಪ್ರದರ್ಶನಗಳಿಗೆ ಸಾರ್ವಜನಿಕ ವಲಯದ ಕಂಪನಿಗಳು ಹಣ ನೀಡಬೇಕು ಎಂದು ನಿರ್ದೇಶನ ನೀಡಿರುವ ಸುದ್ದಿಯ ಬೆನ್ನಲ್ಲೇ ಈ ಸುದ್ದಿ ಬಂದಿದೆ.

ಸೀತಾರಾಮ್ ಯೆಚುರಿಯವರು ಹೇಳಿರುವಂತೆ, ಸರಕಾರದ ಪ್ರದರ್ಶನಗಳಿಗೆ ಸಾರ್ವಜನಿಕ ಹಣದ ಬಳಕೆ, ನಂತರ ಸಾರ್ವಜನಿಕ ವಲಯದ ಘಟಕಗಳು 'ನಷ್ಟ'ದಲ್ಲಿವೆ ಎಂದು ತಮ್ಮ ಕಾರ್ಪೊರೇಟ್ ಗೆಳೆಯರಿಗೆ ಅವುಗಳಿಗೆ ಕೊಡುಗೆಯಾಗಿ ಸಮರ್ಪಣೆ !

ಎನ್‌ಡಿಟಿವಿ ಕಾರ್ಯಕಾರಿ ಅಧ್ಯಕ್ಷ ಪ್ರಣಯ್ ರಾಯ್ ಬ್ಯಾಂಕ್ ಸಾಲ ತೀರಿಸಿಲ್ಲ ಎಂದು ಅವರ ನಿವಾಸ ಮತ್ತು ಎನ್‌ಡಿಟಿವಿ ಮೇಲೆ ಸಿಬಿಐ ದಾಳಿಯ ಬಗ್ಗೆ ದಿಲ್ಲಿ ಪತ್ರಕರ್ತರ ಸಂಘ (ಡಿಯುಜೆ) ಗಂಭೀರ ಆತಂಕ ವ್ಯಕ್ತಪಡಿಸಿದೆ. ಕಾರ್ಯಕಾರಿ ಸಂಪಾದಕಿ ನಿಧಿ ರಝ್ದಾನ್ ಅವರು ಬಿಜೆಪಿ ವಕ್ತಾರ ಸಂಬಿತ್ ಪಾತ್ರ ಅವರನ್ನು ಪ್ರೈಮ್‌ಟೈಮ್ ಚರ್ಚೆಯಿಂದ ಹೊರಗೆ ಕಳಿಸಿದ್ದಕ್ಕೆ ಇದು ನೇರ ಪ್ರತಿಕ್ರಿಯೆ, ಇದರಲ್ಲಿ ಹಗೆ ತೀರಿಸುವ ವಾಸನೆ ಬರುತ್ತಿದೆ, ಎಂದಿರುವ ಅದು ಎನ್‌ಡಿಟಿವಿ ಬಹಳ ವರ್ಷಗಳಿಂದ ಹಣಕಾಸು ತೊಂದರೆಯಲ್ಲಿದೆ, ಆದರೆ ಅದು ಈಗಲೂ ದೇಶದ ಅತಿ ಹೆಚ್ಚು ಸ್ವತಂತ್ರ ಟಿವಿ ವಾಹಿನಿಯಾಗಿದೆ ಎಂದು ಅಭಿಪ್ರಾಯ ಪಟ್ಟಿದೆ –ಸುದ್ದಿ

ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ



ಮಾಂಸಕ್ಕಾಗಿ ಜಾನುವಾರು ಮಾರಾಟ ನಿಷೇಧ: ಕಾರ್ಪೊರೇಟ್ ಹಿಂದುತ್ವದ ಅತ್ಯುತ್ತಮ ಉದಾಹರಣೆ



ಮಾಂಸಕ್ಕಾಗಿ ಜಾನುವಾರು ಮಾರಾಟ ನಿಷೇಧ ಕೇವಲ ಸಂಸ್ಕೃತಿ ಮತ್ತು ಧರ್ಮಕ್ಕೆ ಸಂಬಂಧಿಸಿದ್ದಲ್ಲ ಇದು ಕಾರ್ಪೊರೇಟ್ ಬಂಡವಾಳವನ್ನು ಬೆಂಬಲಿಸುವ ಒಂದು ಆರ್ಥಿಕ ಯೋಚನೆಯ ಮೇಲೆಯೇ ದೃಢವಾಗಿ ನಿಂತಿರುವಂತದ್ದು. ಅಥವ ಇದು ತನ್ನ ಸಾಂಸ್ಕೃತಿಕ ಯಜಮಾನಿಕೆಯನ್ನು ಹೇರುವ, ಮತ್ತು ಅದೇ ವೇಳೆಗೆ ಕಾರ್ಪೊರೇಟ್ ಮಂದಿಯ ಹಿತಗಳನ್ನು ರಕ್ಷಿಸುವ ಮೋದಿ ಸರಕಾರದ ಕಾರ್ಪೊರೇಟ್ ಹಿಂದುತ್ವದ ಅತ್ಯುತ್ತಮ ಉದಾಹರಣೆ ಎನ್ನುತ್ತಾರೆ

ಅರ್ಚನಾ ಪ್ರಸಾದ್

ಕೇಂದ್ರ ಸರಕಾರದ ಅಧಿಸೂಚನೆ ಮಾಂಸ ಮಾರಾಟ ಸರಣಿಯ ಕಾರ್ಪೊರೇಟೀಕರಣದ ಮೊದಲ ಹೆಜ್ಜೆಯೇ ಎಂದು ಸಂದೇಹ ವ್ಯಕ್ತಪಡಿಸುತ್ತ ಅವರು ಇದು ಕೋಮುವಾದಿ ಕ್ರಮವಷ್ಟೇ ಅಲ್ಲ, ಕಾರ್ಮಿಕ-ವಿರೋಧಿ ಕ್ರಮ ಕೂಡ ಎನ್ನುತ್ತಾರೆ. **ಅನುವಾದ: ಮುರಳಿ**

ಕಾರ್ಪೊರೇಟ್ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ತನ್ನ ಮೂರು ವರ್ಷಗಳ ಅವಧಿಯನ್ನು ಪೂರ್ಣಗೊಳಿಸಿದ ಎರಡು ದಿನಗಳ ನಂತರ ಅಂದರೆ ಮೇ.25ರಂದು ಪ್ರಾಣಿಗಳಿಗೆ ಹಿಂಸೆ ತಡೆ (ನಿಯಂತ್ರಣ ಮತ್ತು ಜಾನುವಾರು ಮಾರುಕಟ್ಟೆ) ನಿಯಮ, 2017ನ್ನು ಪ್ರಕಟಿಸಲಾಯಿತು. ಈ ನಿಯಮಗಳ ಮೂಲಕ ತಮ್ಮ ಅನುಪಯೋಗಿ ಜಾನುವಾರುಗಳನ್ನು ಮಾರಾಟ ಮಾಡುವ ರೈತರು, ವರ್ತಕರು, ಮಧ್ಯವರ್ತಿಗಳು ಎಲ್ಲರಿಗೂ ಹೊಡೆತ ನೀಡಿದೆ. ಇದರ ಜೊತೆಗೆ ಮಾಂಸ ರಫ್ತು ವಲಯ ಮತ್ತು ಆಧುನಿಕ ಕಸಾಯಿಖಾನೆಗಳಿಗೆ ಜಾನುವಾರುಗಳನ್ನು ಸರಬರಾಜು ಸಂಪೂರ್ಣವಾಗಿ ಅನೌಪಚಾರಿಕ ಮತ್ತು ಅನಧಿಕೃತತೆ ಮೇಲೆ ನಿಂತಿದೆ. ಹೀಗಿರುವಾಗ ಜಾನುವಾರುಗಳ ಮಾರಾಟದ ಮೇಲೆ ನಿಷೇಧ ಹೇರುವುದೆಂದರೆ ಕೇವಲ ಕೋಮುವಾದಿ ವಿಷಯ ಮಾತ್ರವಲ್ಲ, ಕಾರ್ಮಿಕ ವಿರೋಧಿ ನೀತಿಯೂ ಹೌದು. ಹೀಗಾಗಿ ಇದರ ಹಿಂದಿನ ಸಂಪೂರ್ಣ ಹುನ್ನಾರವನ್ನು ಬಯಲಿಗೆಳೆಯಬೇಕಿದೆ.

ಹೊಸ ಆದೇಶದಲ್ಲಿನ ನಿಯಮಗಳು ಮತ್ತು ಕುಸಿಯುತ್ತಿರುವ ಜಾನುವಾರು ಬೆಲೆಗಳು:

ದೇಶದ ಹಲವಾರು ರಾಜ್ಯಗಳಲ್ಲಿ ಗೋ ಹತ್ಯೆ ನಿಷೇಧ ಕಾನೂನುಗಳಿವೆ, ಅದರಲ್ಲೂ ವಿಶೇಷವಾಗಿ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇದು ಹೆಚ್ಚಿದೆ. ಆದರೆ ಇದೇ ಮೊದಲ ಬಾರಿಗೆ ಕೇಂದ್ರ ಸರ್ಕಾರ ಹತ್ಯೆ ನಿಷೇಧಿಸಲು ಹಿಂಬಾಗಿಲಿನಿಂದ ಕ್ರಮ ಜರುಗಿಸುವ ಮಟ್ಟಕ್ಕೆ ಇಳಿದಿದೆ. ಅಧಿಸೂಚನೆ ಹೊರಡಿಸಿರುವ ನಿಯಮಗಳಲ್ಲಿ 22ನೇ ಸೆಕ್ಷನ್ ಪ್ರಕಾರ ಜಾನುವಾರುಗಳನ್ನು ಖರೀದಿಸುವವರು ಕೃಷಿ ಉದ್ದೇಶಕ್ಕಾಗಿ, ಕಸಾಯಿಖಾನೆಗಲ್ಲ ಎಂದು ಪ್ರಮಾಣೀಕರಿಸಬೇಕು. ಜಾನುವಾರು ಮರು ಮಾರಾಟ ಆರು ತಿಂಗಳು ಮತ್ತು ಅಂತಾರಾಜ್ಯ ಮಾರಾಟವನ್ನೂ ನಿಷೇಧಿಸಲಾಗಿದೆ. ರಫ್ತು ಕಂಪನಿಗಳಿಗೂ ಜಾನುವಾರುಗಳನ್ನು ಸರಬರಾಜು ಮಾಡಬಾರದು ಎಂಬುದು ಇದರಿಂದ ಸ್ಪಷ್ಟ. ಈ ನಿಯಮಗಳು ಜಾರಿಗೆ ಬಂದಿದ್ದೇ ಆದರೆ ರೈತರು ಮಾರುಕಟ್ಟೆಯಲ್ಲಿ ಜಾನುವಾರುಗಳನ್ನು ಮಾರುವಂತಿಲ್ಲ ಮತ್ತು ತಮ್ಮ ತೋಟ ಮನೆಗಳ ಬಳಿಯೇ ಕದ್ದುಮುಚ್ಚಿ ಅಗ್ಗದ ದರಕ್ಕೆ ಮಾರಬೇಕು. ರೈತರಿಗೆ ಚೌಕಾಸಿ ಮಾಡುವ ಅಧಿಕಾರವೂ ಹೋಗಲಿದೆ. ಇನ್ನು ದಲ್ಲಾಳಿಗಳ ಪರಿಸ್ಥಿತಿಯೂ ಇದೆ. ಕಂಪನಿಗಳಿಗೆ ಜಾನುವಾರುಗಳನ್ನು ಕದ್ದುಮುಚ್ಚಿ ಮಾರಾಟ ಮಾಡಬೇಕು. ಕಂಪನಿಗಳು ನೀಡಿದ್ದೇ ಬೆಲೆ.

ಇದುವರೆಗೆ ಗೋಹತ್ಯೆ ನಿಷೇಧಿಸಿರುವ ರಾಜ್ಯಗಳಲ್ಲಿನ ಅನುಭವಗಳನ್ನು ಗಮನಿಸಿದಾಗ ಜಾನುವಾರು ದರಗಳು ಭಾರಿ ಪ್ರಮಾಣದಲ್ಲಿ ಕುಸಿದಿವೆ. ಮಾಂಸ ಮತ್ತು ಜಾನುವಾರು ರಫ್ತು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಸ್.ಪಿ.ಸಭರವಾಲ್ ಪ್ರಕಾರ ಈ ನಿಷೇಧ ಮಾಂಸ ರಫ್ತುದಾರರಿಗಿಂತಲೂ ಕೃಷಿಕರಿಗೆ ಅತಿಹೆಚ್ಚು ಹೊಡೆತ ಎಂದಿದ್ದಾರೆ. ಸದ್ಯ ನಾವು ಹಾಲು ನೀಡುವುದನ್ನು ನಿಲ್ಲಿಸಿರುವ, ವಯಸ್ಸಾದ ಎಮ್ಮೆಗಳನ್ನು ಮಧ್ಯವರ್ತಿಗಳ ಮೂಲಕ ಜಾನುವಾರು ಮಾರುಕಟ್ಟೆಯಲ್ಲಿ ಖರೀದಿಸುತ್ತೇವೆ. ಅವರು ಬಿಡ್ ಮಾಡುತ್ತಾರೆ ಮತ್ತು ಒಂದು ಎಮ್ಮೆ 20 ರಿಂದ 25 ಸಾವಿರವರೆಗೂ ಹೋಗುತ್ತದೆ. ಈಗ ರೈತರು ತಾವಿರುವೆಡೆಯಲ್ಲಿ ಮಾರಾಟ ಮಾಡಿದರೆ ಕಂಪನಿಗಳು ನೀಡುವ ದರಕ್ಕೆ ಕೊಡಬೇಕು. ಮಾರುಕಟ್ಟೆಯಲ್ಲಿ ಬಿಡ್ ಆಗುವ ದರ ಸಿಗುವುದಿಲ್ಲ. ಈ ಕಾರಣದಿಂದಾಗಿಯೇ ಗೋಹತ್ಯೆ ನಿಷೇಧಿಸಿರುವ ಮಹಾರಾಷ್ಟ್ರದಂತಹ ರಾಜ್ಯಗಳಲ್ಲಿ ದರಗಳು ಗಣನೀಯವಾಗಿ ಕುಸಿದಿವೆ.

ಒಂದು ಅಧ್ಯಯನ ವರದಿ ಅನುಸಾರ ಹಾಲು ನೀಡುವ ಹಸುವೊಂದರ ದರ 65 ಸಾವಿರದಿಂದ 50 ಸಾವಿರಕ್ಕೆ ಕುಸಿದಿದೆ. ಹೋರಿ ಕರು ಎತ್ತು ಮತ್ತು ವಯಸ್ಸಾದ ಜಾನುವಾರುಗಳ ದರ 19 ಸಾವಿರದಿಂದ 16 ಸಾವಿರಕ್ಕೆ ಕುಸಿದಿದೆ. ಹಳೆ ಜಾನುವಾರುಗಳ ಮಾರಾಟ, ಹೊಸದರ ಖರೀದಿ ಇಂತಹ ಎಲ್ಲ ಪ್ರಕ್ರಿಯೆಗಳೂ ಅಯೋಮಯಗೊಂಡಿವೆ, ಗೊಂದಲದಿಂದ ಕೂಡಿವೆ.

ಈ ಗೊಂದಲ, ಗೋಜಲು ಅನುಪಯೋಗಿ ಜಾನುವಾರುಗಳನ್ನು ಖರೀದಿಸುವವರ ಕೊರತೆಯೊಂದಿಗೆ ಮಾತ್ರ ಸಂಬಂಧ ಹೊಂದಿಲ್ಲ. ಇದು ಹೈನುಗಾರಿಕೆ ಮತ್ತು ಮಾಂಸ ಉತ್ಪಾದನೆಯೊಂದಿಗೂ ನಿರ್ದಿಷ್ಟ ಸಂಬಂಧಗಳನ್ನು ಹೊಂದಿದೆ. ಹಲವಾರು ವಿಶ್ಲೇಷಕರು ವಿವರಿಸುವಂತೆ ಭಾರತದೊಳಗೆ ಮಾಂಸ ಮತ್ತು ಹಾಲಿಗಾಗಿ ಪ್ರತ್ಯೇಕ ತಳಿಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮಗಳೇ ಇಲ್ಲ. ಹೈನುಗಾರಿಕೆಗಾಗಿ ಜಾನುವಾರುಗಳನ್ನು ಸಾಕುವ ರೈತರೇ ಮಾಂಸ ಉದ್ಯಮಕ್ಕೂ ಜಾನುವಾರುಗಳನ್ನು ಸರಬರಾಜು ಮಾಡುವವರು. ಹಸುವೊಂದು ಹಾಲು ಕೊಡುವುದನ್ನು ನಿಲ್ಲಿಸುತ್ತಿದ್ದಂತೆ ಮಾಂಸಕ್ಕೆ ಮಾರಾಟ ಮಾಡಲಾಗುವುದು. ಅಮೆರಿಕ, ಆಸ್ಟ್ರೇಲಿಯಾದಂತೆ ಇನ್ನೂ ಹಲವಾರು ದೇಶಗಳಲ್ಲಿ ಮಾಂಸಕ್ಕೆಂದು ವಿಶೇಷ ತಳಿಗಳನ್ನು ಅಭಿವೃದ್ಧಿಪಡಿಸಿಲ್ಲ. ಜಾನುವಾರುಗಳನ್ನು ಕೃಷಿ ಉದ್ದೇಶಕ್ಕೆ ಮಾತ್ರ ಮಾರಾಟ ಮಾಡಬೇಕು ಎಂದರೆ ಅನುತ್ಪಾದಕ ಜಾನುವಾರುಗಳನ್ನು ತೀರಾ ಅಗ್ಗದ ದರಕ್ಕೆ ಮಾರಾಟ ಮಾಡುವ ಒತ್ತಡಕ್ಕೆ ರೈತರು ಸಿಲುಕಲಿದ್ದಾರೆ.

ಮಹಾರಾಷ್ಟ್ರದಲ್ಲಿನ ಒಂದು ಉದಾಹರಣೆಯನ್ನು ನೋಡೋಣ. ಪ್ರಸ್ತುತ ಪ್ರತಿದಿನ 20 ಲೀಟರ್ ಹಾಲು ನೀಡುವ ಹಸುವೊಂದು ವಾರದ ಸಂತೆಯಲ್ಲಿ ಸರಿಸುಮಾರು 45 ಸಾವಿರ ರೂ.ಗಳ ಬೆಲೆ ಇದ್ದು ಉತ್ತರ ಮಹಾರಾಷ್ಟ್ರದಲ್ಲೇ ಅತಿ ಹೆಚ್ಚಿನ ದರವಾಗಿದೆ. ಒಂದು ವರ್ಷದ ಹಿಂದೆ ಈ ದರ ಸರಾಸರಿ 80 ಸಾವಿರ ರೂ. ಇತ್ತು. ನಾಲ್ಕು ವರ್ಷ ವಯಸ್ಸಿನ ಮತ್ತು ಆರೋಗ್ಯವಂತ ಎತ್ತಿನ ದರ ವರ್ಷದ ಹಿಂದೆ 50 ಸಾವಿರ ರೂ. ಇದ್ದದು ಈಗ 30 ಸಾವಿರಕ್ಕೆ ಕುಸಿದಿದೆ.

ಮತ್ತೊಬ್ಬ ವರ್ತಕ ಹೇಳುವುದೇನೆಂದರೆ ಈ ಮೊದಲು ನಾನು ದಿನಕ್ಕೆ ಹತ್ತು ಜಾನುವಾರು ಮಾರಾಟ ಮಾಡುತ್ತಿದ್ದರೆ ಈಗ ಎರಡು ಮಾರುವುದು ಕಷ್ಟ ಎಂದಿದ್ದಾರೆ. ಗೋಹತ್ಯೆ ನಿಷೇಧ ಜಾರಿಯಾದ ನಂತರ ಒಳ್ಳೆಯ ವಯಸ್ಸಿನ ಹಸುವನ್ನು ಕೇವಲ 20 ಸಾವಿರಕ್ಕೆ ಮಾರಾಟ ಮಾಡಿದೆ. ನಿಷೇಧ ಇಲ್ಲದಿದ್ದರೆ ಸಾಮಾನ್ಯವಾಗಿ 60 ಸಾವಿರ ಬರುತ್ತಿತ್ತು ಎಂದು ರೈತರೊಬ್ಬರು ಹೇಳಿದ್ದಾರೆ.

ಮಾಂಸ ಸರಬರಾಜು ಸರಪಳಿ ಮರು ಸಂಘಟನೆ ಸಂಭವನೀಯತೆ:

ಆಸಕ್ತಿಕರ ವಿಷಯು ಎಂದರೆ ಮಾಂಸ ರಫ್ತು ಮಾಡುವ ಬಹುತೇಕ ಕಂಪನಿಗಳು ಈ ನಿಷೇಧವನ್ನು ರೈತ ವಿರೋಧಿ ಎಂತಲೂ, ತಮ್ಮ ಹಿತಾಸಕ್ತಿಗಳಿಗೆ ಯಾವುದೇ ತೊಂದರೆ ಇಲ್ಲ ಎಂದು ಹೇಳಿರುವುದು. ಏಕೆಂದರೆ ಜಾನುವಾರು ಮಾರಾಟ ನಿಷೇಧ ಮಾಂಸ ಸರಬರಾಜು ಉದ್ಯಮದ ದಿಕ್ಕನ್ನೇ ಬದಲಾಯಿಸಲಿದೆ ಎಂದು. ಸರ್ಕಾರಿ, ಸಾರ್ವಜನಿಕ ಪಾಲುದಾರಿಕೆ ಅಡಿಯಲ್ಲಿ ಕೇಂದ್ರ ಸರ್ಕಾರ ಸಬ್ಸಿಡಿ ಹೊಂದಿರುವ ಹೊಸ ತಳಿಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮಗಳನ್ನು ರೂಪಿಸುವ ಸಾಧ್ಯತೆಗಳೂ ಇಲ್ಲದಿಲ್ಲ.

ರಾಷ್ಟ್ರೀಯ ಜಾನುವಾರು ಮಿಷನ್‌ನ್ನು 2015-16ರಲ್ಲಿ ಪರಿಷ್ಕರಿಸಿದ್ದು ಅದರಲ್ಲಿನ ಕಾರ್ಯಾಚರಣೆ ನಿಯಮಗಳ ಅನುಸಾರ ಎಮ್ಮೆಗಳ ಸಾಕಣೆ ಪ್ರಮುಖ ಉದ್ಯೋಗ ಸೃಜನೆ ಯೋಜನೆಗಳಲ್ಲಿ ಒಂದು. ಕಳೆದ ಬಜೆಟ್‌ನಲ್ಲಿ ಈ ಯೋಜನೆಗೆ ಹಣವನ್ನೂ ಮೀಸಲಿಡಲಾಗಿದೆ. ಇದು ಮೂರು ಅಂಶಗಳನ್ನು ಒಳಗೊಂಡಿದೆ. ಮೊದಲನೆಯದು ದಲಿತರು, ಆದಿವಾಸಿಗಳು ಮತ್ತು ಮಹಿಳೆಯರಿಗೆ ಎಮ್ಮೆ ಸಾಕಣೆಗೆ ಪ್ರತ್ಯೇಕ ಘಟಕಗಳನ್ನು ಸ್ಥಾಪಿಸುವುದು. ಎರಡನೆಯದು ವಾಣಿಜ್ಯ ಘಟಕಗಳನ್ನು ಮತ್ತು ಮೂರನೆಯದಾಗಿ ಕೈಗಾರಿಕೆಗಳನ್ನು ಸ್ಥಾಪಿಸುವುದು. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಈ ಕಾರ್ಯಕ್ರಮ ಕೇವಲ ಯುವಕರು ಮತ್ತು ರೈತರಿಗೆ ಮಾತ್ರ ಸೀಮಿತವಾಗಿಲ್ಲ. ಇಲ್ಲಿ ಕಂಪನಿಗಳನ್ನು ಸ್ಥಾಪಿಸಬಹುದು, ಪಾಲುದಾರಿಕೆ ಮಾಡಿಕೊಳ್ಳಬಹುದು ಮತ್ತು ದೊಡ್ಡ ದೊಡ್ಡ ಕಾರ್ಪೊರೇಟ್‌ಗಳನ್ನು ಸ್ಥಾಪಿಸಬಹುದು. ಈ ಯೋಜನೆ ಸಂಪೂರ್ಣವಾಗಿ ನಬಾರ್ಡ್‌ನ ಹಣಕಾಸು ನೆರವನ್ನು ಅವಲಂಬಿಸಿದ್ದು ಎಮ್ಮೆ ಸಾಕಣೆ ಮಾಡುವವರೇ ಮಾರುಕಟ್ಟೆಯನ್ನು ಹುಡುಕಿಕೊಳ್ಳಬೇಕು. ಈ ಕಾರಣದಿಂದಾಗಿ ಅವರು ಕಾರ್ಪೊರೇಟ್‌ಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳುವ ಒತ್ತಡಕ್ಕೆ ಸಿಲುಕಲಿದ್ದಾರೆ. ಅಂದರೆ ಈ ಯೋಜನೆಯ ಪ್ರಮುಖ ಉದ್ದೇಶವೆಂದರೆ ಚರ್ಮ ಮತ್ತು ಮಾಂಸ ರಫ್ತು ಉದ್ಯಮಕ್ಕೆ ಅಗತ್ಯವಾದುದನ್ನು ಸಿದ್ಧಪಡಿಸುವುದಾಗಿದೆ. ಗೋ ಹತ್ಯೆ ನಿಷೇಧಿಸುವುದರಿಂದಲೂ ರೈತರು ಅತ್ಯಂತ ಕಡಿಮೆ ದರಕ್ಕೆ ಜಾನುವಾರುಗಳನ್ನು ಮಾರಾಟ ಮಾಡುವ ಅನಿವಾರ್ಯಕ್ಕೆ ಒಳಗಾಗಲಿದ್ದಾರೆ. ಈಗಿನ ಸನ್ನಿವೇಶದಲ್ಲಿ ರಾಷ್ಟ್ರೀಯ ಜಾನುವಾರು ಮಿಶನ್ ಈ ಪ್ರಕ್ರಿಯೆಗೇ ನೆರವಾಗುತ್ತದೆ.

ಇದರಿಂದಾಗುವ ಮತ್ತೊಂದು ಸಮಸ್ಯೆ ಎಂದರೆ ಸ್ಥಳೀಯವಾಗಿ ಮಾಂಸದ ಅಗತ್ಯ ಪೂರೈಸುವ ಕಸಾಯಿಖಾನೆಗಳ ಮೇಲೆ ಇದು ವ್ಯತಿರಿಕ್ತ ಪರಿಣಾಮ ಬೀರಲಿದೆ. ಸರ್ಕಾರ ಹಿಂದಿನ ಬಾಗಿಲಿನಿಂದ ತಂದಿರುವ ಈ ನಿಯಮಗಳಿಂದ ಸ್ಥಳೀಯ ಗ್ರಾಹಕರು ದನದ ಮಾಂಸ ಪಡೆಯುವುದು ಅಸಾಧ್ಯವಾಗಲಿದೆ. ಇದು ಜಾನುವಾರು ಹತ್ಯೆ ನಿಷೇಧಕ್ಕೆ ಸಂಬಂಧಿಸಿದಂತೆ ಕೇರಳ ಸರ್ಕಾರ ನೀಡಿರುವ ಸ್ಪಷ್ಟ ಪ್ರತಿಕ್ರಿಯೆಯಲ್ಲಿ ಈ ಅಂಶವನ್ನು ಎತ್ತಿ ತೋರಿಸಿದೆ. ಅಂದರೆ ಕೇರಳದಲ್ಲಿ ದನದ ಮಾಂಸದ ಮೇಲೆ ನಿಷೇಧ ಇಲ್ಲದಿದ್ದರೂ ಗ್ರಾಹಕರು ಸೂಪರ್ ಮಾರುಕಟ್ಟೆಗಳಲ್ಲಿಯೇ ಖರೀದಿಸಬೇಕಾಗುತ್ತದೆ. ಇದು ದೇಶೀಯ ಪೂರೈಕೆ ಸರಪಳಿಯ ಒಂದು ತುದಿಯಾಗುತ್ತದೆ.ಇದರಿಂದ ಸಣ್ಣ ಮತ್ತು ರಿಟೇಲ್ ಮಾಂಸ ಮಾರುಕಟ್ಟೆ ಸಂಪೂರ್ಣವಾಗಿ ಮುಚ್ಚಲಿದೆ. ಈ ಸ್ಥಳೀಯ ಮಾರುಕಟ್ಟೆ ಉಳಿಯಬೇಕೆಂದರೆ ಈ ವರ್ತಕರು ಸಹ ಮಾಂಸ ಉತ್ಪಾದನೆಯ ಕಾರ್ಪೊರೇಟ್ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕು ಮತ್ತು ರೈತರಿಂದ ದನ'ಗಳನ್ನು ಖರೀದಿಸಲು ದೊಡ್ಡ ದೊಡ್ಡ ಕಂಪನಿಗಳ ಫ್ರಾಂಚೈಸಿಗಳಾಗಬೇಕು.

ಹೀಗಾಗಿ ಜಾನುವಾರು ಮಾರಾಟ ನಿಷೇಧ ಕೇವಲ ಸಂಸ್ಕೃತಿ ಮತ್ತು ಧರ್ಮಕ್ಕೆ ಸಂಬಂಧಿಸಿದ್ದಲ್ಲ ಇದು ಕಾರ್ಪೊರೇಟ್ ಬಂಡವಾಳವನ್ನು ಬೆಂಬಲಿಸುವ ಒಂದು ಆರ್ಥಿಕ ಯೋಚನೆಯ ಮೇಲೆಯೇ ದೃಢವಾಗಿ ನಿಂತಿರುವಂತದ್ದು. ಅಥವ ಇದು ತನ್ನ ಸಾಂಸ್ಕೃತಿಕ ಯಜಮಾನಿಕೆಯನ್ನು ಹೇರುವ, ಮತ್ತು ಅದೇ ವೇಳೆಗೆ ಕಾರ್ಪೊರೇಟ್ ಮಂದಿಯ ಹಿತಗಳನ್ನು ರಕ್ಷಿಸುವ ಮೋದಿ ಸರಕಾರದ ಕಾರ್ಪೊರೇಟ್ ಹಿಂದುತ್ವದ ಅತ್ಯುತ್ತಮ ಉದಾಹರಣೆ.

ಕೇಂದ್ರ ಸರಕಾರದ ಮಾಂಸಕ್ಕಾಗಿ ಮಾರಾಟವನ್ನು ನಿಷೇಧಿಸುವ ಅಧಿಸೂಚನೆಗೆ ದೇಶಾದ್ಯಂತ ಪ್ರತಿಭಟನೆಯ ಭಾಗವಾಗಿ ಚೆನ್ನೈನಲ್ಲಿ ಐಐಟಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಪಿಹೆಚ್‌ಡಿ ವಿದ್ಯಾರ್ಥಿ ಆರ. ಸೂರಜ್ ಮೇಲೆ ಹಿಂದುತ್ವ ಮಂದಿ ದಾಳಿ ಮಾಡಿ ಆತನ ಬಲ ಕಣ್ಣಿಗೆ ತೀವ್ರ ಏಟು ಬಿದ್ದಿದೆ. ಶಸ್ತ್ರಕ್ರಿಯೆಗಾಗಿ ಆತನನ್ನು ಅಪೊಲೊ ಆಸ್ಪತ್ರೆಗೆ ಸೇರಿಸಬೇಕಾಯಿತು. ಎಸ್‌ಎಫ್‌ಐ ಕೇಂದ್ರೀಯ ಕಾರ್ಯಕಾರಿ ಸಮಿತಿ ಈ ದಾಳಿಯನ್ನು ಬಲವಾಗಿ ಖಂಡಿಸುತ್ತ ಐಐಟಿ ಆಡಳಿತ ತಪ್ಪಿತಸ್ಥರ ವಿರುದ್ಧ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ಜೂನ್ 3ರಂದು ಚೆನ್ನೈಗೆ ಭೇಟಿ ನೀಡಿದ್ದಾಗ ಆಸ್ಪತ್ರೆಗೆ ಹೋಗಿ ಸೂರಜ್ ಅವರನ್ನು ಭೇಟಿಯಾದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಸರಕಾರ ಯಾರು ಏನು ತಿನ್ನಬೇಕು, ಏನು ತಿನ್ನಬಾರದು ಎಂದು ವಿಧಿಸಬೇಕೇ, ಅದು ಗಂಭೀರವಾಗಿ ಪರಿಶೀಲಿಸಬೇಕಾದ ಬೇರೆ ಹಲವು ವಿಷಯಗಳಿವೆ, ಅಲ್ಲದೆ ಕೇಂದ್ರದಿಂದ ಬರುವ ಎಲ್ಲ ಅಧಿಸೂಚನೆಗಳನ್ನು ಪಾಲಿಸಬೇಕೆಂದಿಲ್ಲ, ಏಕೆಂದರೆ ಇದು ರಾಜ್ಯ ಪಟ್ಟಿಯಲ್ಲಿರುವ ವಿಷಯ ಎಂದು ನೆನಪಿಸಿದ್ದಾರೆ.



ಮೋದಿ ಸರಕಾರದ ಮೂರು ವರ್ಷಗಳು ಜನತೆಗೆ ವಿಶ್ವಾಸಘಾತದ ವರ್ಷಗಳು

-ಪುಟ 2 ರಿಂದ

ದೇಶದಲ್ಲಿ ಆರೆಸ್ಸೆಸ್/ಬಿಜೆಪಿ ನಿರ್ದಿಷ್ಟವಾಗಿ ಸಿಪಿಐ(ಎಂ) ಮೇಲೆ ಗುರಿಯಿಟ್ಟಿರುವ-ಕೇರಳದಲ್ಲಿ ಭಯೋತ್ಪಾದನೆ ಮತ್ತು ಹಿಂಸಾಚಾರದ ತಂತ್ರಗಳ ಮೂಲಕ ಎಡ ಪ್ರಜಾಪ್ರಭುತ್ವ ರಂಗದ ಸರಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನಗಳು ಮತ್ತು ಪಶ್ಚಿಮ ಬಂಗಾಲದಲ್ಲಿ ತೃಣಮೂಲ ಕಾಂಗ್ರೆಸ್‌ನ ಜೊತೆ ಸ್ಪರ್ಧಾತ್ಮಕ ಕೋಮುವಾದವನ್ನು ಉದ್ರೇಕಿಸುತ್ತ ತಾಳ ಹಾಕುತ್ತಿರುವ-ಹಿನ್ನೆಲೆಯಲ್ಲಿ ತ್ರಿಪುರದಲ್ಲಿನ ಈ ಚುನಾವಣೆಗಳು ದೇಶದಲ್ಲಿ ಎಡ ಮತ್ತು ಕೋಮುವಾದಿ ಶಕ್ತಿಗಳ ನಡುವಿನ ಒಂದು ಸಮರವಾಗಿ ಮಹತ್ವ ಪಡೆದಿದೆ.

ಸಿಪಿಐ(ಎಂ) ಈ ಎಡ ಭದ್ರಕೋಟೆಯನ್ನು ರಕ್ಷಿಸಿಕೊಳ್ಳಲು ಮತ್ತು ಒಂದು ಬಲವಾದ ವಿಜಯ ಗಳಿಸಿ ಸರಕಾರಕ್ಕೆ ಮರಳಲು ದೃಢನಿರ್ಧಾರ ಮಾಡಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಕಾಶ್ಮೀರ

ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಸನ್ನಿವೇಶ ಗಂಭೀರವಾಗಿ ಹದಗೆಟ್ಟಿದೆ. ಕಾಶ್ಮೀರಿ ಜನತೆಯ ಪರಕೀಯ ಭಾವ ಈಗ ಸುಮಾರಾಗಿ ಪೂರ್ಣಗೊಳ್ಳುತ್ತಿರುವಂತೆ ಕಾಣುತ್ತಿದೆ. ಬಿಜೆಪಿ ಕೇಂದ್ರ ಸರಕಾರದ ಕಾಶ್ಮೀರ ಧೋರಣೆ ಶೋಚನೀಯವಾಗಿ ವಿಫಲವಾಗಿದೆ. ಬಿಜೆಪಿ ಸರಕಾರ ಜಮ್ಮು ಮತ್ತು ಕಾಶ್ಮೀರದ ಜನತೆಗೆ ನೀಡಿದ ಆಶ್ವಾಸನೆಗಳನ್ನು ಮುರಿದಿರುವುದೇ ಈ ಪರಕೀಯ ಭಾವ ಹೆಚ್ಚಲು ಮುಖ್ಯ ಕಾರಣ. ಕೇಂದ್ರ ಗೃಹಮಂತ್ರಿಗಳ ನೇತೃತ್ವದ ಸರ್ವಪಕ್ಷ ಸಂಸದೀಯ ನಿಯೋಗ ಜಮ್ಮು ಮತ್ತು ಕಾಶ್ಮೀರ ಜನತೆಗೆ ಮತ್ತು ದೇಶಕ್ಕೆ ಸರಕಾರ ವಿಶ್ವಾಸ ಕುದುರಿಸುವ ಕ್ರಮಗಳ ಮೂಲಕ ಪರಿಸ್ಥಿತಿಯನ್ನು ಸಾಮಾನ್ಯಗೊಳಿಸಲು ಪ್ರಯತ್ನಿಸುತ್ತದೆ ಎಂದು ಭರವಸೆ ನೀಡಿತ್ತು. ಇವುಗಳಲ್ಲಿ ಪೆಲೆಟ್ ಗನ್‌ಗಳನ್ನು ಬಳಸದಿರುವುದು ಮತ್ತು ಕಾಶ್ಮೀರಿ ಯುವಜನತೆಗೆ ಉದ್ಯೋಗಾವಕಾಶಗಳನ್ನು ನಿರ್ಮಿಸುವುದು ಹಾಗೂ ರಾಜ್ಯದಲ್ಲಿ ಒಂದು ರಾಜಕೀಯ ಪರಿಹಾರಕ್ಕೆ ಬರಲು ಸಂಬಂಧಪಟ್ಟ ಎಲ್ಲರೊಂದಿಗೆ ಒಂದು ಸಂವಾದದ ರಾಜಕೀಯ ಪ್ರಕ್ರಿಯೆಯನ್ನು ಆರಂಭಿಸುವುದು ಸೇರಿತ್ತು.

ಬಿಜೆಪಿಯೂ ಭಾಗೀದಾರನಾಗಿರುವ ರಾಜ್ಯ ಸರಕಾರ ಪರಿಸ್ಥಿತಿಯನ್ನು ಹತೋಟಿಗೆ ತರುವಲ್ಲಿಯೂ ಮತ್ತು ಯಾವುದೇ ರಾಜಕೀಯ ಮುತುವರ್ಜಿ ವಹಿಸುವಲ್ಲಿಯೂ ಶೋಚನೀಯವಾಗಿ ವಿಫಲವಾಗಿದೆ ಎಂಬುದು ಸ್ಪಷ್ಟವಾಗಿದೆ.

“ಕಾಶ್ಮೀರ:ಮುನ್ನಡೆಯ ದಾರಿ” ಎಂಬಂತಹ ವಿಷಯದೊಂದಿಗೆ ಒಂದು ರಾಷ್ಟ್ರೀಯ ಮಧ್ಯಪ್ರವೇಶ ನಡೆಸಲು ಜಾತ್ಯತೀತ ರಾಜಕೀಯ ಪಕ್ಷಗಳ ಸಹಕಾರಕ್ಕೆ ಸಿಪಿಐ(ಎಂ) ಪ್ರಯತ್ನಿಸುವುದಾಗಿ ಪೊಲಿಟ್‌ಬ್ಯುರೊ ಹೇಳಿದೆ.

ಬಿಜೆಪಿಯೇತರ ರಾಜ್ಯ ಸರಕಾರಗಳ ಸಂಯೋಜನ

ಕೇಂದ್ರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ ಕಡಿಯುವುದಕ್ಕಾಗಿ ಜಾನುವಾರುಗಳ ಮಾರಾಟವನ್ನು ನಿಷೇಧಿಸಿ ಹೊರಡಿಸಿರುವ ಅಧಿಸೂಚನೆಯನ್ನು ಬಹಳಷ್ಟು ಬಿಜೆಪಿಯೇತರ ರಾಜ್ಯ ಸರಕಾರಗಳು ವಿರೋಧಿಸಿವೆ. ಕೇಂದ್ರ ಸರಕಾರದ ಈ ಪ್ರಯತ್ನ ರಾಜ್ಯಗಳ ಹಕ್ಕುಗಳ ಉಲ್ಲಂಘನೆ ಎಂಬ ಆಧಾರದಲ್ಲಿ ಇದನ್ನು ಜಂಟಿ-ಯಾಗಿ ವಿರೋಧಿಸಬೇಕು ಎಂದು ಕೇರಳ ಮುಖ್ಯ ಮಂತ್ರಿಗಳು ಎಲ್ಲ ಬಿಜೆಪಿಯೇತರ ರಾಜ್ಯಸರಕಾರಗಳಿಗೆ ಮನವಿ ಮಾಡಿದ್ದಾರೆ. **ಈ ಪ್ರಶ್ನೆಯ ಮೇಲೆ ನಾವು ಮುತುವರ್ಜಿ ವಹಿಸಿ ಪ್ರಮುಖ ಬಿಜೆಪಿಯೇತರ ಮುಖ್ಯಮಂತ್ರಿಗಳೊಂದಿಗೆ ಸಭೆಗಳನ್ನು ನಡೆಸುವುದಾಗಿ ಪೊಲಿಟ್‌ಬ್ಯುರೊ ಹೇಳಿದೆ.**

ಜನತಾ ಹೋರಾಟಗಳ ವೇದಿಕೆ

ಎಡಪಕ್ಷಗಳ ವಿವಿಧ ವರ್ಗ ಮತ್ತು ಸಾಮೂಹಿಕ ಸಂಘಟನೆಗಳು ಮತ್ತು ಪ್ರಗತಿಶೀಲ ಜಾತ್ಯತೀತ ಜನತಾ ಆಂದೋಲನಗಳ ಸಂಘಟನೆಗಳ ಒಂದು ಪ್ರಸ್ತಾವಿತ ವೇದಿಕೆ ಸದ್ಯ ಭವಿಷ್ಯದಲ್ಲಿ ಒಂದು ರಾಷ್ಟ್ರೀಯ ಮಟ್ಟದ ಸಮಾವೇಶವನ್ನು ನಡೆಸುವುದು ಮತ್ತು ಈ ಸರಕಾರದ ಧೋರಣೆಗಳು ನಮ್ಮ ಬಹು ದೊಡ್ಡ ಜನವಿಭಾಗಗಳ ಮೇಲೆ ಹೇರುತ್ತಿರುವ ಸರ್ವತೋಮುಖಿ ಆರ್ಥಿಕ ಹೊರೆಗಳು ಮತ್ತು ಸಂಕಟಗಳ ವಿರುದ್ಧ ಬೃಹತ್ ಸ್ವರೂಪದ ಜನತಾ ಪ್ರತಿಭಟನಾ ಕಾರ್ಯಕ್ರಮಗಳನ್ನು ಆರಂಭಿಸುವ ಕುರಿತ ವರದಿಗಳನ್ನು ಪೊಲಿಟ್‌ಬ್ಯುರೊ ಆಲಿಸಿತು.

ಮಾಧ್ಯಮಗಳ ಮೇಲೆ ಹಲ್ಲೆ

ಸಂಸದೀಯ ಪ್ರಜಾಪ್ರಭುತ್ವದ ಎಲ್ಲ ಸಂಸ್ಥೆಗಳು ಬಿಜೆಪಿ ನೇತೃತ್ವದ ಸರಕಾರದ ಅಡಿಯಲ್ಲಿ ದಾಳಿಗೊಳಗಾಗುತ್ತಿವೆ. ಇದೊಂದು ಅಪಾಯಕಾರಿ ಸರ್ವಾಧಿಕಾರಶಾಹಿ ಪ್ರವೃತ್ತಿ. ಇದು ಬೆಳೆಯುತ್ತಿದೆ.

ಇವುಗಳಲ್ಲಿ ಮಾಧ್ಯಮಗಳ ಮೇಲೆ ದಾಳಿಗಳೂ ಸೇರಿವೆ. ಇವು ಮಾಧ್ಯಮಗಳು ತಮ್ಮ ಜವಾಬ್ದಾರಿಯನ್ನು ನಿರ್ವಹಿಸದಂತೆ ತಡೆಯಲು ಪ್ರಯತ್ನಿಸುವ ದಾಳಿಗಳು. ಸ್ವಾತಂತ್ರ್ಯ ನಮ್ಮ ಪ್ರಜಾಪ್ರಭುತ್ವದ ಯಾರೂ ಉಲ್ಲಂಘಿಸಬಾರದ ನೀತಿ. ಕಾನೂನಿನ ಕೈಮೇಲಾಗಬೇಕು, ಆದರೆ ಮಾಧ್ಯಮ ಗುಂಪುಗಳಿಗೆ ಕಿರುಕುಳಗಳನ್ನು ಒಪ್ಪಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ○

ಮಧ್ಯಪ್ರದೇಶದಲ್ಲಿ ರೈತರ ಮೇಲೆ ಗೋಲೀಬಾರ್:ಸಿಪಿಐ(ಎಂ) ಖಂಡನೆ

ಮಧ್ಯಪ್ರದೇಶದ ಮಂದ್‌ಸೌರ್‌ನಲ್ಲಿ ಪ್ರತಿಭಟನಾ ನಿರತ ರೈತರ ಮೇಲೆ ಜೂನ್ 6ರಂದು ನಡೆದ ಗೋಲೀಬಾರಿಗೆ ಬಲಿಯಾದವರ ಸಂಖ್ಯೆ ಈಗ 6ಕ್ಕೆ ತಲುಪಿದೆ ಎಂದು ವರದಿಯಾಗಿದೆ. ಸಿಪಿಐ(ಎಂ) ಪೊಲಿಟ್‌ಬ್ಯುರೊ ಇದು ಅಮಾನುಷ ಹತ್ಯೆ ಎಂದು ಖಂಡಿಸಿದೆ. ಈ ಪೋಲೀಸ್ ಕಾರ್ಯಾಚರಣೆಯಲ್ಲಿ ಬಹಳಷ್ಟು ರೈತರು ತೀವ್ರವಾಗಿ ಗಾಯಗೊಂಡಿದ್ದಾರೆ ಎಂದೂ ವರದಿಯಾಗಿದೆ.

ಮಧ್ಯಪ್ರದೇಶದಲ್ಲಿ ರೈತರು ಹಲವು ದಿನಗಳಿಂದ ರಾಜ್ಯ ಸರಕಾರ ಹೆಚ್ಚಿನ ಫಲದಾಯಕ ಬೆಲೆಗಳನ್ನು ಕೊಡುವ ಮತ್ತು ಸಾಲ ಪರಿಹಾರ ನೀಡುವುದಾಗಿ ಕೊಟ್ಟಿರುವ ತನ್ನ ಭರವಸೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ನಿಷ್ಕಾರಣ ಪೋಲೀಸ್ ಗೋಲೀಬಾರ್ ಒಟ್ಟಾರೆಯಾಗಿ ಬಿಜೆಪಿಯ ಮತ್ತು ನಿರ್ದಿಷ್ಟವಾಗಿ ಮಧ್ಯಪ್ರದೇಶ ಸರಕಾರದ ರೈತ-ವಿರೋಧಿ ಸ್ವರೂಪವನ್ನು ಸ್ಪಷ್ಟವಾಗಿ ಬಯಲು ಮಾಡಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಪೋಲೀಸ್ ಗೋಲೀಬಾರಿನಲ್ಲಿ ಪ್ರಾಣ ಕಳಕೊಂಡಿರುವ ರೈತರ ಕುಟುಂಬಗಳಿಗೆ ಸಾಕಷ್ಟು ಪರಿಹಾರ ನೀಡಬೇಕು ಮತ್ತು ಗಾಯಗೊಂಡವರಿಗೆ ಸಕಲ ವೈದ್ಯಕೀಯ ನೆರವನ್ನು ನೀಡಬೇಕೆಂದು ಆಗ್ರಹಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ನಿಷ್ಕಾರಣ ಗೋಲೀಬಾರಿನ ಬಗ್ಗೆ ಸರಿಯಾದ ತನಿಖೆ ಆಗುವ ವರೆಗೆ ಇದಕ್ಕೆ ಹೊಣೆಯಾದವರನ್ನು ತಕ್ಷಣವೇ ಅಮಾನತು ಮಾಡಬೇಕು, ರಾಜ್ಯ ಸರಕಾರ ರೈತ ಚಳುವಳಿಯ ನ್ಯಾಯ ಬೇಡಿಕೆಗಳನ್ನು ತಕ್ಷಣವೇ ಒಪ್ಪಿಕೊಳ್ಳಬೇಕು ಎಂದು ಕರೆ ನೀಡಿದೆ.

ರೈತ-ವಿರೋಧಿ ಬಿಜೆಪಿ ಸರಕಾರದ ಮೂರನೇ ವಾರ್ಷಿಕೋತ್ಸವಕ್ಕೆ ಐಕ್ಯ ರೈತ ಹೋರಾಟಗಳ ಕೊಡುಗೆ!

-ಜೂನ್ 9ರಂದು ದೇಶವ್ಯಾಪಿ ಸೌಹಾರ್ದ ಕಾರ್ಯಾಚರಣೆಗೆ ಕರೆ

ಮಹಾರಾಷ್ಟ್ರದ ರೈತರು ಸ್ಫೂರ್ತಿ ತುಂಬುವ ಐಕ್ಯ ಹೋರಾಟವನ್ನು ನಡೆಸುತ್ತಿದ್ದಾರೆ, ಜೂನ್ 5ರಂದು ವಿವಿಧ ರೈತ ಸಂಘಟನೆಗಳು ಜಂಟಿಯಾಗಿ ನೀಡಿರುವ ಕರೆಯಂತೆ ಯಶಸ್ವಿ ಮಹಾರಾಷ್ಟ್ರ ಬಂದ್ ನಡೆದಿದೆ. ಇದೊಂದು ರೈತರ ಐತಿಹಾಸಿಕ ಐಕ್ಯ ಆಂದೋಲನ ಎಂದು ಅಖಿಲ ಭಾರತ ಕಿಸಾನ್ ಸಭಾ ತನ್ನ ಸೌಹಾರ್ದವನ್ನು ವ್ಯಕ್ತಪಡಿಸಿದೆ. ಹೋರಾಟನಿರತ ರೈತರಿಗೆ ಬೆಂಬಲವಾಗಿ ದೊಡ್ಡ ಸಂಖ್ಯೆಯಲ್ಲಿ ಜನಗಳು ಭಾಗವಹಿಸಿರುವ ಮಹಾರಾಷ್ಟ್ರ ಬಂದ್ ಸಂಘಟಿಸುವಲ್ಲಿ ಎಐಕೆಎಸ್‌ಗೆ ಸೇರಿರುವ ಮಹಾರಾಷ್ಟ್ರ ರಾಜ್ಯ ಕಿಸಾನ್ ಸಭಾ ನೇತೃತ್ವದ ಪಾತ್ರ ವಹಿಸಿದೆ.

ಜೂನ್ 1ರಂದು ಆರಂಭವಾದ ಈ ಅಭೂತಪೂರ್ವ ಮುಷ್ಕರ ಐದನೇ ದಿನ ಪ್ರವೇಶಿಸಿದ ವೇಳೆಗೆ ಈ ಬಂದ್ ನಡೆದಿದೆ. ಜಯಾಜಿ ಸೂರ್ಯವಂಶಿ ಮತ್ತು ಸಂದೀಪ್ ಗಿಡ್ಡೆ ಎಂಬ ರೈತ ಮುಖಂಡರೆಂದು ಹೇಳಿಕೊಳ್ಳುವ ವ್ಯಕ್ತಿಗಳ ವಿಶ್ವಾಸಘಾತದ ನಂತರ ಹೋರಾಟ ತೀವ್ರಗೊಂಡಿತು. ಈ ಇಬ್ಬರು ಯಾವುದೇ ಬೇಡಿಕೆಗಳನ್ನು ಪಡೆಯದೆ ಮುಖ್ಯಮಂತ್ರಿಗಳೊಂದಿಗೆ ರಾಜಿ ಮಾಡಿಕೊಂಡು ಮುಷ್ಕರವನ್ನು ಹಿಂತೆಗೆದುಕೊಂಡಿರುವುದಾಗಿ ಜೂನ್ 3 ರಂದು ಏಕಪಕ್ಷೀಯವಾಗಿ ಘೋಷಿಸಿದರು. ಈ ವಿಶ್ವಾಸಘಾತವನ್ನು ಬಯಲಿಗೆಳೆಯಲು ಮತ್ತು ಕಾರ್ಯಾಚರಣೆಯನ್ನು ಮುಂದುವರೆಸಲು ಕಿಸಾನ್ ಸಭಾ ರೈತರನ್ನು ಅಣಿನೆರೆಸಿತು. ಈಗ ಹೊಸದಾಗಿ ರಚನೆಗೊಂಡಿರುವ ಸಂಯೋಜಕ ಸಮಿತಿ ಜೂನ್ 8ರಂದು ನಾಶಿಕ್‌ನಲ್ಲಿ ಸಭೆ ಸೇರಿ ಮುಂದಿನ ದಾರಿಯನ್ನು ನಿರ್ಧರಿಸುತ್ತದೆ. ಎಲ್ಲ ಎಡ ಮತ್ತು ಇತರ ಪ್ರತಿಪಕ್ಷಗಳು, ಸಿಐಟಿಯು, ಎಐಟಿಯುಸಿ ಮತ್ತಿತರ ಕಾರ್ಮಿಕ ಸಂಘಟನೆಗಳು, ಎಐಎಡಬ್ಲ್ಯುಯು, ಎಐಡಿಡಬ್ಲ್ಯುಎ, ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ಈ ರೈತ ಹೋರಾಟವನ್ನು ಸಕ್ರಿಯವಾಗಿ ಬೆಂಬಲಿಸುತ್ತಿವೆ.

ದೇಶಾದ್ಯಂತ ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರದ ವಿಶ್ವಾಸಘಾತದ ವಿರುದ್ಧ ಮತ್ತು ವಿವಿಧ ರಾಜ್ಯಗಳಲ್ಲಿ ರಾಜ್ಯ ಸರಕಾರಗಳ ರೈತ-ವಿರೋಧಿ ಧೋರಣೆಗಳ ವಿರುದ್ಧ ಬೃಹತ್ ಪ್ರತಿಭಟನೆಗಳು ಎದ್ದು ಬಂದಿವೆ.

ಮೇ 22 ರಂದು ಕೊಲ್ಕತದಲ್ಲಿ ನಬನ್ನ ರ‍್ಯಾಲಿಯಲ್ಲಿ ಭಾಗವಹಿಸಲು ಲಕ್ಷಾಂತರ ರೈತರು ಮತ್ತು ಕೃಷಿಕೂಲಿಕಾರರು ಬೀದಿಗಿಳಿದರು. ಅದನ್ನು ಅಮಾನುಷವಾಗಿ ದಮನ ಮಾಡಲಾಯಿತು. ಇದರಲ್ಲಿ ಒಬ್ಬರು ಪ್ರಾಣ ತೆತ್ತಿದ್ದಾರೆ.

ಮಧ್ಯಪ್ರದೇಶದಲ್ಲಿ ರೈತರು ಸಾಲಮನ್ನಾ, ಈರುಳ್ಳಿ, ಬೇಳೆಕಾಳುಗಳಿಗೆ ಫಲದಾಯಕ ಬೆಲೆಗಳನ್ನು ಆಗ್ರಹಿಸಿ ಹೋರಾಟ ನಡೆಸುತ್ತಿದ್ದಾರೆ. (ಪೋಲೀಸರ ಗೋಲೀಬಾರಿಗೆ 5 ರೈತರು ಬಲಿಯಾಗಿದ್ದಾರೆ ಎಂದು ಈಗ ವರದಿ ಬಂದಿದೆ)

ತೆಲಂಗಾಣ ಮತ್ತು ಆಂಧ್ರಪ್ರದೇಶದಲ್ಲಿ ಮೆಣಸು ಬೆಲೆ ಕುಸಿದಿರುವುದರ ವಿರುದ್ಧ ಪ್ರತಿಭಟನೆಗಳು ನಡೆದಿವೆ.

ತಮಿಳುನಾಡಿನಲ್ಲಿ ಬರದ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಕೇಂದ್ರ ಮತ್ತು ರಾಜ್ಯಸರಕಾರಗಳು ತೋರುತ್ತಿರುವ ಉಪೇಕ್ಷೆಯ ವಿರುದ್ಧ ಬೃಹತ್ ಐಕ್ಯ ಹೋರಾಟ ನಡೆಯುತ್ತಿದೆ.

ದೇಶಾದ್ಯಂತ ಜಾನುವಾರು ವ್ಯಾಪಾರವನ್ನು ಸೀಮಿತಗೊಳಿಸುವ ರೈತ-ವಿರೋಧಿ ಅಧಿಸೂಚನೆಯ ವಿರುದ್ಧ ಪ್ರತಿಭಟನೆಗಳು ನಡೆಯುತ್ತಿವೆ.

ಜೂನ್ 9ರಂದು ಈ ಅಧಿಸೂಚನೆಯ ವಿರುದ್ಧ ಮತ್ತು ಐಕ್ಯ ರೈತ ಹೋರಾಟಗಳಿಗೆ ಬೆಂಬಲವಾಗಿ ಸೌಹಾರ್ದ ಕಾರ್ಯಾಚರಣೆಗಳನ್ನು ನಡೆಸಬೇಕು ಎಂದು ಎಐಕೆಎಸ್ ಕರೆ ನೀಡಿದೆ.

ಜೂನ್ 9ರಂದು ಪ್ರತಿ ಹಳ್ಳಿಯಲ್ಲಿ ಕೇಂದ್ರೀಯ ಅಧಿಸೂಚನೆಗೆ ಬೆಂಕಿ

1. ಜಾನುವಾರು ಮಾರುಕಟ್ಟೆಯಲ್ಲಿ ಜಾನುವಾರು ವ್ಯಾಪಾರವನ್ನು ನಿಷೇಧಿಸುವ ಕೇಂದ್ರೀಯ ಅಧಿಸೂಚನೆಯನ್ನು ಹಿಂದಕ್ಕೆ ಪಡೆಯಬೇಕು, 2. ಸರಕಾರ ರೈತರಿಗೆ ಮಾರುಕಟ್ಟೆ ಬೆಲೆ ನೀಡಬೇಕು, ರೈತರ ಅನುಪಯುಕ್ತ ದನ, ಎಮ್ಮೆ ಮತ್ತು ಗಂಡು ಜಾನುವಾರುಗಳನ್ನು ಖರೀದಿಸಬೇಕು ಮತ್ತು 3. ಸರಕಾರ ಬೀಡಾಡಿ ಜಾನುವಾರುಗಳನ್ನು ಪಡೆದು ಅವನ್ನು ಗೋಶಾಲೆಗಳಲ್ಲಿ ಸಾರ್ವಜನಿಕರಿಗೆ ಹೊರೆಯಾಗದಂತೆ ಇಟ್ಟುಕೊಳ್ಳಬೇಕು ಎಂದು ಈ ಮೂರು ಬೇಡಿಕೆಗಳನ್ನು ಆಗ್ರಹಿಸಿ ಜೂನ್ 9ರಂದು ಪ್ರತಿಭಟನಾ ದಿನಾಚರಣೆ ನಡೆಸಬೇಕೆಂದು ಎಐಕೆಎಸ್ ಕರೆ ನೀಡಿದೆ. ಅಂದು ದೇಶದ ಪ್ರತಿ ಹಳ್ಳಿಯಲ್ಲಿ ನಡೆದುಕೊಂಡು ಬಂದಿರುವ ರೈತರ ಜಾನುವಾರು ಸಂಪತ್ತಿನ ಹಕ್ಕಿನ ಮೇಲೆ ದಾಳಿಯ ಬಗ್ಗೆ ಆಕ್ರೋಶದ ಸಂಕೇತವಾಗಿ ಈ ಕೇಂದ್ರೀಯ ಅಧಿಸೂಚನೆಯನ್ನು ಸಾರ್ವಜನಿಕವಾಗಿ ಸುಡಲಾಗುವುದು ಎಂದು ಅದು ಹೇಳಿದೆ.

ಈ ಅಧಿಸೂಚನೆ ಸಣ್ಣ ಮತ್ತು ಬಡ ಹಸು ಸಾಕಣೆದಾರರ ಮೇಲೆ ಕಾಂಟ್ರಾಕ್ಟ್ ಬೇಸಾಯವನ್ನು ಹೇರುವ ಗುತ್ತೇದಾರಿ ಕಾರ್ಪೊರೇಟ್ ಮನೆತನಗಳು ಮತ್ತು ಮಾಂಸ ಹಾಗೂ ಡೈರಿ ವಲಯದ ದೊಡ್ಡ ಅಗ್ರೊ ಇಂಡಸ್ಟ್ರಿ ಮಾಲಕರ ಭಾರೀ ಲೆಕ್ಕಾಚಾರದಿಂದ ಕೈಗೊಂಡಿರುವ ಕ್ರಮ ಎಂದು ಈ ಅಧಿಸೂಚನೆಯನ್ನು ಎಐಕೆಎಸ್ ದೃಢವಾಗಿ ತಿರಸ್ಕರಿಸಿದೆ. ರೈತರ ಚೌಕಾಶಿ ಸಾಮರ್ಥ್ಯವನ್ನು ಚಚ್ಚಿ ಹಾಕಲು ಅವರಿಂದ ಜಾನುವಾರು ಸಂಪತ್ತಿನ ಹಕ್ಕನ್ನು ಪ್ರಧಾನ ಮಂತ್ರಿಗಳು ಕಸಿದುಕೊಂಡಿದ್ದಾರೆ ಎಂದು ಎಐಕೆಎಸ್ ಆಕ್ರೋಶ ವ್ಯಕ್ತಪಡಿಸಿದೆ.

ಭೂಮಿಯ ಒಡೆತನ ಪಡೆದಿರುವವರಲ್ಲಿ 48.5% ಸಣ್ಣ ಮತ್ತು ಬಡರೈತರು, ಇವರು ದೇಶದ 50% ಜಾನುವಾರು ಸಂಪತ್ತನ್ನು ಹೊಂದಿದ್ದಾರೆ. ಈ ಅಧಿಸೂಚನೆ ಈ ರೈತರಿಗೆ ಹೈನುಗಾರಿಕೆ ಹೊರೆಯಾಗಿ ಮಾಡುತ್ತದೆ. ಈ ಕಾರಣಕ್ಕಾಗಿ ಮೇಲೆ ಹೇಳಿದ ಮೂರು ಬೇಡಿಕೆಗಳ ಮೇಲೆ ಜೂನ್ 9 ರಂದು ದೇಶವ್ಯಾಪಿ ಪ್ರತಿಭಟನೆಗೆ ಎಐಕೆಎಸ್ ಕರೆ ನೀಡಿದೆ.

ಮಹಾರಾಷ್ಟ್ರ ರೈತರ ಹೋರಾಟಕ್ಕೆ ಸಿಪಿಐ(ಎಂ) ಬೆಂಬಲ

ಜೂನ್ 1ರಿಂದ ಮಹಾರಾಷ್ಟ್ರದ ರೈತರು ನಡೆಸುತ್ತಿರುವ ಮುಷ್ಕರದ ಅಭೂತಪೂರ್ವ ಕಾರ್ಯಾಚರಣೆಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ..

ನಗರಗಳಿಗೆ ತರಕಾರಿಗಳು, ಹಣ್ಣುಗಳು ಮತ್ತು ಹಾಲು ಮುಂತಾದ ಉತ್ಪನ್ನಗಳನ್ನು ತರಲು ಅವರು ನಿರಾಕರಿಸಿದ್ದಾರೆ. ಸತತ ಬರದ ಹಿನ್ನೆಲೆಯಲ್ಲಿ ಸಾಲ ಮನ್ನಾ ಮತ್ತಿತರ ರೈತರ ನ್ಯಾಯ ಬೇಡಿಕೆಗಳನ್ನು ಪರಿಗಣಿಸಲು ರಾಜ್ಯ ಸರಕಾರದ ನಿರಾಕರಣೆಗೆ, ಕನಿಷ್ಟ ಬೆಂಬಲ ಬೆಲೆಗಳನ್ನು ಬೆಳೆಗೆ ತಗಲುವ ಖರ್ಚಿನ ಒಂದೂವರೆ ಪಟ್ಟಿಗೆ ಹೆಚ್ಚಿಸುವ ಬಿಜೆಪಿ ಚುನಾವಣಾ ಆಶ್ವಾಸನೆಯ ಜಾರಿಗೆ, ರೈತರು ಮತ್ತು ಕೃಷಿ ಕಾರ್ಮಿಕರಿಗೆ ಪೆನ್ಷನ್ ನೀಡುವ ಆಶ್ವಾಸನೆಯ ಈಡೇರಿಕೆಗೆ ಮತ್ತು ಕೃಷಿ ಸೀಜನ್ನಿನಲ್ಲಿ ವಿದ್ಯುತ್ ಮತ್ತು ನೀರನ್ನು ಅಡೆತಡೆಯಿಲ್ಲದೆ ಪೂರೈಸಬೇಕು ಎಂದು ಆಗ್ರಹಿಸಿ ಅವರು ಈ ಕಾರ್ಯಾಚರಣೆಗೆ ಇಳಿದಿದ್ದಾರೆ.

ಒಂದು ವರ್ಷಕ್ಕೂ ಹೆಚ್ಚು ಸಮಯದಿಂದ ಮಹಾರಾಷ್ಟ್ರದ ರೈತರು ಈ ಬೇಡಿಕೆಗಳ ಮೇಲೆ ಚಳುವಳಿ ನಡೆಸುತ್ತಿದ್ದಾರೆ, ಸರಕಾರ ಈ ಬಗ್ಗೆ ಮತ್ತೆ-ಮತ್ತೆ ಸಮಯಾವಕಾಶವನ್ನು ಕೇಳುತ್ತ ಬಂದಿದೆ. ರಾಜ್ಯ ಸರಕಾರ ಮತ್ತೆ-ಮತ್ತೆ ಮಾಡುತ್ತಿರುವ ವಿಶ್ವಾಸಘಾತದಿಂದ ಬೇಸತ್ತು ರೈತರು ಈ ಅಪೂರ್ವ ಕಾರ್ಯಾಚರಣೆಗೆ ಇಳಿದಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಜೂನ್ 5ರಂದು ರೈತರ ಹೋರಾಟಕ್ಕೆ ಬೆಂಬಲವಾಗಿ ಹಲವು ರೈತ ಸಂಘಟನೆಗಳ ಕರೆಯಂತೆ ರಾಜ್ಯವ್ಯಾಪಿ ಬಂದ್ ನಡೆದಿದೆ.

ರಾಜ್ಯ ಸರಕಾರ ಮುಂಚೆ ಆಶ್ವಾಸನೆ ನೀಡಿರುವ ಮಹಾರಾಷ್ಟ್ರದ ರೈತರ ನ್ಯಾಯ ಬೇಡಿಕೆಗಳನ್ನು ಕೂಡಲೇ ಜಾರಿಗೊಳಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.



ಕಹಿ ಗುಳಿಗೆ

ಆನ್‌ಲೈನ್ ಮೂಲಕ ಔಷಧ ಮಾರಾಟ ಮಾಡುವ ಮುಂಗಟ್ಟೆಗಳು ಮತ್ತು ಅಂತರ್ಜಾಲ ಔಷದ ಅಂಗಡಿ (ಇ–ಫಾರ್ಮಸಿ)ಗಳನ್ನೂ ಒಳಗೊಂಡಂತೆ ಎಲ್ಲಾ ಬಗೆಯ ಔಷಧಿ ಮಾರಾಟಗಳನ್ನು ನಿಯಂತ್ರಣ ಮಾಡಲು ಸರ್ಕಾರವು ಹೊಸ ನಿಯಮಾವಳಿಗಳ ಪ್ರಸ್ತಾಪವನ್ನು ಮಂಡಿಸಿದೆ. ದೇಶದ ಎಲ್ಲಾ ಚಿಲ್ಲರೆ ಔಷಧಿ ಮಾರಾಟಗಾರರು ಈ ಹೂಸ ನಿಯಮಗಳನ್ನು ವಿರೋಧಿಸಿದ್ದಾರೆ. ಮತ್ತು ಒಂದು ದಿನದ ಮುಷ್ಕರವನ್ನೂ ಕೂಡಾ ಮಾಡಿದ್ದಾರೆ. ಈಗಾಗಲೇ ಔಷಧಿಗಳು ಆನ್‌ಲೈನ್‌ನಲ್ಲಿ ಮಾರಾಟವಾಗುತ್ತಿದ್ದಲ್ಲಿ ಅದನ್ನು ನಿಲ್ಲಿಸುವುದು ಒಳ್ಳೆಯದೋ ಅಥವಾ ನಿಯಂತ್ರಿಸುವುದು ಒಳ್ಳೆಯದೋ? ಎರಡನೆಯದ್ದನ್ನು ಒಪ್ಪಿಕೊಂಡರೆ ಕೇಂದ್ರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಸ್ತಾಪವಾದ ಇ–ಪ್ಲಾಟ್‌ಫಾರ್ಮ್ (ಮಾರುಕಟ್ಟೆಗಳ ಅಂತರ್ಜಾಲ ಉಸ್ತುವಾರಿ) ಒಳ್ಳೆಯದನ್ನು ಮಾಡುತ್ತದೋ? ಅಥವಾ ಹೊಸ ಬಗೆಯ ಸಮಸ್ಯೆಗಳನ್ನು ಸೃಷ್ಟಿಸುತ್ತದೋ?

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು 2017ರ ಮಾರ್ಚ್ 16ರಂದು ಪ್ರಕಟಿಸಿರುವ ಸಾರ್ವಜನಿಕ ಸೂಚನಾ ಪತ್ರದಲ್ಲಿ "ದೇಶದಲ್ಲಿ ಔಷಧಿಗಳ ಮಾರಾಟವನ್ನು ನಿಯಂತ್ರಿಸುವ ಬಗ್ಗೆ ಸಾರ್ವಜನಿಕ ಸಮಾಲೋಚನೆ"ಯನ್ನು ನಡೆಸಲು ಕರೆನೀಡಿದೆ. "ಔಷಧಿ ಮತ್ತು ಸೌಂದರ್ಯ ವರ್ಧಕ ನಿಯಮ"ಗಳಿಗೆ ತಿದ್ದುಪಡಿಯನ್ನು ತಂದು, ಔಷಧಿಗಳು ಔಷಧಿ ಉತ್ಪಾದಕರಿಂದ ಸ್ಟಾಕಿಸ್ಟ್/ಸಗಟು ಮಾರಾಟದಾರರಿಗೆ, ಅವರಿಂದ ಚಿಲ್ಲರೆ ಮಾರಾಟದಾರರಿಗೆ (ಕಟ್ಟಡದ ಅಂಗಡಿಯಲ್ಲಿ ಮತ್ತು ಅಂತರ್ಜಾಲ ಅಂಗಡಿಯಲ್ಲಿ ಮಾರುವರಿಬ್ಬರನ್ನು ಒಳಗೊಂಡಂತೆ)ಮತ್ತು ಅಂತಿಮವಾಗಿ ಬಳಕೆದಾರರಿಗೆ ಮಾರಾಟವಾಗುವ ಪ್ರತಿಹಂತದ ಜಾಡನ್ನು ದಾಖಲಿಸುವ ಒಂದು ಇ–ಪ್ಲಾಟ್‌ಫಾರ್ಮ್ (ಮಾರುಕಟ್ಟೆಗಳ ಅಂತರ್ಜಾಲ ಉಸ್ತುವಾರಿ) ಅನ್ನು ರೂಪಿಸುವ ಪ್ರಸ್ತಾಪವನ್ನು ಮುಂದಿಟ್ಟಿದೆ. ಈ ಪ್ರಸ್ತಾಪದ ಪ್ರಕಾರ ಎಲ್ಲಾ ಔಷಧಿ ಉತ್ಪಾದಕರು, ಸಗಟು ಮತ್ತು ಚಿಲ್ಲರೆ ಮಾರಾಟದಾರರು ಈ ಪ್ಲಾಟ್‌ಫಾರ್ಮಿನಲ್ಲಿ ನೊಂದಾಯಿಸಿಕೊಳ್ಳಬೇಕು. ಔಷಧ ಮಾರಾಟಗಾರರು ಇದರಲ್ಲಿ ನೊಂದಾಯಿಸಿಕೊಳ್ಳುವುದಲ್ಲದೆ, ತಾವು ಕೊಳ್ಳುವ ಮತ್ತು ಮಾರಾಟ ಮಾಡಿದ ಎಲ್ಲಾ ಔಷಧಗಳ ವಿವರಗಳನ್ನೂ, ವೈದ್ಯರು ನೀಡಿದ ಔಷಧಿಗಳ ಸೂಚನೆಗಳ ವಿವರಗಳನ್ನೂ ಹಾಗೂ ವೈದ್ಯರ ಮತ್ತು ರೋಗಿಯ ವಿವರಗಳನ್ನೂ ದಾಖಲಿಸಬೇಕು. ಇವನ್ನು ಮಾಡದೆ ಅವರು ಔಷಧಿಗಳನ್ನು ಮಾರುವಂತಿಲ್ಲ. ಇಷ್ಟು ಮಾತ್ರವಲ್ಲದೆ ಈ ಪ್ಲಾಟ್‌ಫಾರ್ಮನ್ನು ನಿರ್ವಹಣೆ ಮಾಡಲು ಬೇಕಾದ ಹಣಕಾಸಿಗೂ ಅವರು ತಮ್ಮ ಕೊಡುಗೆಯನ್ನು ನೀಡಬೇಕು.

ಯಾವುದೇ ನಿಯಂತ್ರಣವನ್ನು ರೂಪಿಸದೆ ಅಂತರ್ಜಾಲ ಔಷಧಿ ಮಾರಾಟಕ್ಕೆ ಅವಕಾಶ ಕೊಡುವುದನ್ನು ವಿರೋಧಿಸುತ್ತಿದ್ದ ಔಷಧಿ ವ್ಯಾಪಾರಿಗಳ ಸಂಘಟನೆಯು ಈಗ ಈ ಇ–ಪ್ಲಾಟ್‌ಫಾರ್ಮಿನ ರಚನೆಗೂ ವಿರೋಧ ವ್ಯಕ್ತಪಡಿಸುತ್ತಿದೆ. ಇದು ಹೀಗೆ–ಯೇ ಮುಂದುವರೆದರೆ ಭವಿಷ್ಯದಲ್ಲಿ ಅನಿರ್ದಿಷ್ಟ ಕಾಲ ಮುಷ್ಕರವನ್ನು ನಡೆಸುವುದಾಗಿಯೂ ಎಚ್ಚರಿಕೆಯನ್ನು ನೀಡಿದೆ. ಕಡ್ಡಾಯವಾಗಿ ಈ ಪ್ಲಾಟ್‌ಫಾರ್ಮಿನಲ್ಲಿ ನೊಂದಾವಣೆ ಮಾಡಿಕೊಳ್ಳಬೇಕಾದ ನಿಯಮಗಳು ಮತ್ತು ಅದರ ಪರಿಣಾಮವಾಗಿ ಹೆಚ್ಚುವರಿಯಾಗಿ ಹೊರಬೇಕಾಗಿ ಬರುವ ಮಾನವ ಮತ್ತು ಹಣಕಾಸು ಸಂಪನ್ಮೂಲಗಳ ಸಮಸ್ಯೆಗಳ ಜೊತೆಗೆ ಇವನ್ನೆಲ್ಲಾ ಜಾರಿಮಾಡಬೇಕೆಂದಿದ್ದರೂ ಗ್ರಾಮೀಣ ಪ್ರದೇಶದಲ್ಲಿ ಕಣ್ಣಿಗೆ ರಾಚುವಂತಿರುವ ಮೂಲಭೂತ ಸೌಕರ್ಯಗಳ ಕೊರತೆಗಳೂ ಸಹ ಈ ತಿದ್ದುಪಡಿಗಳ ಬಗ್ಗೆ ಕೆಲವು ಆತಂಕಗಳನ್ನು ಹುಟ್ಟಿಸುತ್ತದೆ.

ಅಂತರ್ಜಾಲ ಔಷಧಿ ಅಂಗಡಿಗಳ ನಿಯಂತ್ರಣದ ಬಗ್ಗೆ ಇರುವ ವಿವಾದಗಳು ಹೊಸದೇನಲ್ಲ.

ವೈದ್ಯಕೀಯ ಸಲಹೆಗಳನ್ನು ಮತ್ತು ಔಷಧಗಳ ಬಳಕೆಯನ್ನು ನಿಯಂತ್ರಿಸದೆ ಔಷಧಗಳ ಇ–ಪ್ಲಾಟ್‌ಫಾರ್ಮ್ (ಔಷಧ ಮಾರುಕಟ್ಟೆಗಳ ಅಂತರ್ಜಾಲ ಉಸ್ತುವಾರಿ) ಕೆಲಸ ಮಾಡುವುದಿಲ್ಲ.

ಔಷಧಿಗಳ ಆನ್‌ಲೈನ್ ಮಾರಾಟದ ನಿಯಂತ್ರಣದ ಬಗ್ಗೆ ಸಲಹೆ–ಸೂಚನೆಯನ್ನು ನೀಡಲು ಕೇಂದ್ರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು 2015ರಲ್ಲಿ ಒಂದು ಉಪಸಮಿತಿಯನ್ನು ರಚಿಸಿತ್ತು. ಅದು 2016ರ ಸೆಪ್ಟೆಂಬರ್‌ನಲ್ಲಿ ಒಂದು ವಿವರವಾದ ವರದಿಯನ್ನು ನೀಡಿತ್ತು. ಔಷಧಿಗಳ ಬಗ್ಗೆ ವೈದ್ಯರು ನೀಡುವ ಸೂಚನೆಗಳನ್ನು ಒಂದು ರಾಷ್ಟ್ರೀಯ ಪೋರ್ಟಲ್ ಜಾಲದ ಮೂಲಕ ಹೆಣೆಯುವ ಒಂದು ಕಾರ್ಯಸಾಧು ಮಾದರಿಯನ್ನು ಅದು ಸಲಹೆ ಮಾಡಿತ್ತು. ಆ ವರದಿಯು ಆನ್‌ಲೈನ್ ಅಥವಾ ಆಫ್ ಲೈನ್ ಎರಡು ಸಂದರ್ಭಗಳಲ್ಲೂ ವೈದ್ಯರಿಗೂ ರೋಗಿಗೂ ಮತ್ತು ಔಷಧಿ ಅಂಗಡಿಗೂ ಸಂಪರ್ಕ ಏರ್ಪಡಿಸುವ ಒಂದು ಇ–ಪೋರ್ಟಲ್ ಅನ್ನು ಶಿಫಾರಸ್ಸು ಮಾಡಿತ್ತು. ಅಂಥಾ ಒಂದು ವ್ಯವಸ್ಥೆಯು ಸರ್ಕಾರದ ಗುರಿಗಳಾದ: "ಸೂಚಿಸಲಾದ ಗುಣಮಟ್ಟದ ಮತ್ತು ಸರಿಯಾದ ಔಷಧಗಳು ದೊರೆಯುವಂತೆ ಮಾಡುವ", "ಆಂಟಿ–ಮೈಕ್ರೋಬಿಅಲ್ ರೆಸಿಸ್ಟೆನ್ಸ್ (ಎಎಂಆರ್– ಆಂಟಿ–ಮೈಕ್ರೋಬಿಅಲ್ ರೆಸಿಸ್ಟೆನ್ಸ್– ಸೂಕ್ಷ್ಮಾಣು ಪ್ರೇರಿತ ರೋಗ ನಿಗ್ರಹಗಳ ನಿರೋ ಧಕ – ಎಂದರೆ ವೈರಸ್, ಬ್ಯಾಕ್ಟೀರಿಯಾಗಳಂಥ ಸೂಕ್ಷಾಣುಗಳಿಂದ ಉಂಟಾಗುವ ರೋಗಳನ್ನು ನಿಗ್ರಹಿಸಲು ಸೂಕ್ಷಾಣು ನಿಗ್ರಹ ಔಷಧಿಗಳನ್ನು ತೆಗೆದುಕೊಂಡಾಗ ಈ ಔಷಧಿಗಳು ತಮ್ಮ ಕಾರ್ಯ ನಿರ್ವಹಿಸದಂತೆ ಪ್ರತಿರೋಧಿಸಬಲ್ಲ ಈ ರೋಗಕಾರಕ ಸೂಕ್ಷ್ಮಾಣುಗಳ ಸಾಮರ್ಥ್ಯವನ್ನು ಆಂಟಿ–ಮೈಕ್ರೋಬಿಅಲ್ ರೆಸಿಸ್ಟೆನ್ಸ್ ಎಂದು ಕ–ರೆಯುತ್ತಾರೆ– ಅನುವಾದಕನ ಟಿಪ್ಪಣಿ) ಅನ್ನು ತಡೆಗಟ್ಟುವಂಥ" ಮತ್ತು "ಅಂತರ್ಜಾಲದ ಮೂಲಕ ಸರಬರಾಜಾಗುವ ಔಷಧಿಗಳನ್ನು ನಿಯಂತ್ರಿಸುವ" ಎಲ್ಲಾ ಆಶಯಗಳನ್ನೂ ಈಡೇರಿಸುತ್ತಿತ್ತು.

ಆದರೆ, ವಾಸ್ತವದಲ್ಲಿ ಸರ್ಕಾರವು ನೀಡಿರುವ ಸಾರ್ವಜನಿಕ ಸೂಚನೆಯೇ 2015ರ ಉಪಸಮಿತಿಯು ನೀಡಿದ ವರದಿಯ ಶಿಫಾರಸ್ಸುಗಳ ದುರ್ಬಲ ರೂಪವಾಗಿದೆ. ಮತ್ತು ಅದು ಮುಂದಿಟ್ಟಿರುವ ಇ–ಪ್ಲಾಟ್‌ಫಾರ್ಮ್ ಸಾರಾಂಶದಲ್ಲಿ ಈ ದೇಶದಲ್ಲಿ ಉತ್ಪಾದಕನಿಂದ ಬಳಕೆದಾರನಿಗೆ ನಡೆಯುವ ಔಷಧಗಳ ಮಾರಾಟದ ಜಾಡನ್ನು ದಾಖಲಿಟ್ಟುಕೊಳ್ಳಲು ಮಾತ್ರ ವಿನ್ಯಾಸಗೊಳಿಸಿದಂತಿದೆ.

ಇವಲ್ಲದೆ ಆ ಸಾರ್ವಜನಿಕ ಸೂಚನೆಯಲ್ಲಿ ಕೆಲವು ಅಸ್ಪಷ್ಟವಾದ ಅಂಶಗಳನ್ನೂ ಸೇರ್ಪಡೆ ಮಾಡಲಾಗಿದೆ. ಉದಾಹರಣೆಗೆ ಆ ಸಾರ್ವಜನಿಕ ಸೂಚನೆಯಲ್ಲಿ "ಶೆಡ್ಯೂಲ್ ಎಚ್, ಎಚ್1 ಮತ್ತು ಎಕ್ಸ್‌ಗಳಿಗೆ ಸೇರದ ಔಷಧಗಳನ್ನು ಒಬ್ಬ ನೊಂದಾಯಿತ ವೈದ್ಯರ ಸೂಚನೆಯಿಲ್ಲದೆ ಮಾರಾಟ ಮಾಡಬಾರದು" ಎಂಬ ವಾಕ್ಯವಿದೆ. ಇದು ಲಿಖಿತ ಸೂಚನೆಯಿಲ್ಲದ ಔಷಧಿಗಳಿಗೂ ಅನ್ವಯಿಸುತ್ತದೆಯೇ? ಇದು ಭಾರತ ಔಷಧ ಮಾರಾಟ ಎದುರಿಸುತ್ತಿರುವ ಮೂಲಭೂತ ಸಮಸ್ಯೆಯನ್ನು ಎತ್ತಿತೋರಿಸುತ್ತದೆ. ಅದೆಂದರೆ ನಮ್ಮ ದೇಶದಲ್ಲಿ ವೈದ್ಯರ ಲಿಖಿತ ಸೂಚನೆಯಿಲ್ಲದ ಅರ್ಥಾತ್ "ಓವರ್ ದಿ ಕೌಂಟರ್" (ಓಟಿಸಿ– ವೈದ್ಯರ ಸೂಚನೆಯಿಲ್ಲದೆ ಔಷದಿ ಅಂಗಡಿಯಲ್ಲೇ ಕೇಳಿ ಪಡೆದುಕೊಳ್ಳುವ) ಔಷಧಿಗಳ ಬಗ್ಗೆ ಸ್ಪಷ್ಟ ವರ್ಗೀಕರಣವಾಗಲೀ, ನಿಯಂತ್ರಣವಾಗಲೀ ಇಲದಿರುವುದು. ಇತ್ತೀಚೆಗೆ ಔಷಧ ಸಮಾಲೋಚನಾ ಸಮಿತಿಯು (ಡರ್ಗ್ ಕನ್ಸಲ್ಟೇಟೀವ್ ಕಮಿಟಿ) 2016ರ ನವಂಬರ್‌ನಲ್ಲಿ ಸಭೆ ಸೇರಿದ್ದಾಗ ಈ ಒಟಿಸಿ ಔಷಧಗಳ ಮಾರಾಟವನ್ನು ನಿಯಂತ್ರಿಸುವ ಬಗ್ಗೆ ಸಲಹೆ ಮಾಡಲು ಒಂದು ಉಪಸಮಿತಿಯನ್ನು ರಚಿಸಿದೆ.

ಇಂಥಾ ಹಲವು ವಿಷಯಗಳ ಬಗ್ಗೆ ಯಾವುದೇ ಸ್ಪಷ್ಟತೆ ಇಲ್ಲದೆ ಬೇಕಾಬಿಟ್ಟಿಯಾಗಿ ರೂಪಿಸಲಾಗಿರುವ ಇ–ಪ್ಲಾಟ್‌ಫಾರ್ಮ್ ಬಗೆಗಿನ ನಿಯಮಾವಳಿಗಳನ್ನು ಮತ್ತೊಮೆ ಪುನರ್‌ಪರಿಶೀಲಿಸಲೇಬೇಕಿದೆ. 2015ರ ಉಪಸಮಿತಿಯ ಶಿಫಾರಸ್ಸುಗಳನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಆದರೆ ಈಗಿರುವ ಔಷಧ ಕಾಯಿದೆ., ಔಷಧ ಮಾರಾಟ ನಿಯಮಗಳು ಮತ್ತು ಔಷಧ ಮತ್ತು ಸೌದರ್ಯವರ್ಧಕ ಕಾಯಿದೆಗಳಲ್ಲಿರುವ ನಿಯಂತ್ರಣಗಳನ್ನೇ ಸರಿಯಾಗಿ ಮತ್ತು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಲಾಗಿಲ್ಲ.

ಈ ದೇಶದಲ್ಲಿ ವೈದ್ಯರ ಲಿಖಿತ ಸೂಚನೆ ಇದ್ದರೆ ಮಾತ್ರ ಪಡೆಯಬಹುದಾದ ಔಷಧಿಗಳನ್ನು ಅದಿಲ್ಲದೆಯೂ ಪಡೆದುಕೊಳ್ಳಬಹುದೆಂಬುದು ದೊಡ್ಡ ರಹಸ್ಯವೇನಲ್ಲ. ಜನರು ತಮಗೆ ಬಂದಿರುವ ಬೇನೆಗೆ ವೈದ್ಯರ ಬದಲಿಗೆ ಔಷಧಿ ಅಂಗಡಿಗೆ ಹೋಗಿ ತಮಗೆ ತೋಚಿದ ಔಷಧಗಳನ್ನು ತೆಗೆದುಕೊಳ್ಳುವುದು ಈ ದೇಶದಲ್ಲಿ ದೊಡ್ಡ ರೀತಿಯಲ್ಲಿ ಚಾಲ್ತಿಯಲ್ಲಿದೆ. ಇದರ ಜೊತೆಗೆ ಯಾವುದೇ ತರ್ಕ–ಕಾರಣಗಳಿಲ್ಲದೆ ಔಷಧಿಗಳನ್ನು ಸಲಹೆ ಮಾಡುವ ವೈದ್ಯರುಗಳ ಅಭ್ಯಾಸಗಳ ಬಗ್ಗೆಯೂ ಗಂಭೀರವಾಗಿ ಗಮನಹರಿಸಬೇಕಿದೆ. ಅಂತರ್ಜಾಲ ಔಷಧಿ ಅಂಗಡಿಗಳನ್ನು ಯಾವುದೇ ನಿಯಂತ್ರಣಗಳಿಲ್ಲದೆ ವ್ಯವಹರಿಸಲು ಅವಕಾಶ ಕೊಡಬಾರದೆಂಬುದು ಸರಿಯಾದ ಒತ್ತಾಯವೇ ಆಗಿದ್ದರೂ ಔಷಧ ಮಾರಾಟ ಸಂಘಟನೆಗಳು ಈಗಿರುವ ನೀತಿ ಮತ್ತು ನಿಯಮಾವಳಿಗಳನ್ನಾದರೂ ಜಾರಿಗೊಳಿಸುವ ಬಗ್ಗೆ ಮತ್ತು ಒಂದು ಸ್ವಪ್ರೇರಿತ ಸ್ವಯಂ ಜಾರಿ ವ್ಯವಸ್ಥೆಯ ಬಗ್ಗೆ ಖಾತರಿ ನೀಡಬೇಕು.

ಇ ಪ್ಲಾಟ್‌ಫಾರ್ಮ್ ಎಂಬುದು ಸರಿಯಾದ ದಿಕ್ಕಿನಲ್ಲಿಟ್ಟಿರುವ ಹೆಜ್ಜೆಯೇ ಆಗಿರಬಹುದು. ಆದರೂ ಅದನ್ನು ಜಾರಿ ಮಾಡಲು ಬೇಕಾದ ಮೂಲಭೂತ ಸೌಕರ್ಯಗಳು ಇಲ್ಲ. ಪರಿಕಲ್ಪನಾತ್ಮಕ ಮತ್ತು ಕಾನೂನಾತ್ಮಕ ಸ್ಪಷ್ಟತೆಗಳಿಲ್ಲ. ಮತ್ತು ಇರುವ ಕಾನೂನುಗಳನ್ನೇ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೂ ತರಲಾಗುತ್ತಿಲ್ಲ. ಹೀಗಾಗಿ ಈ ಹೊಸ ನಿಯಮಾವಳಿಗಳನ್ನು ನಿರ್ವಾತದಲ್ಲಿ ಜಾರಿ ಮಾಡಬಾರದು. ಔಷಧಿ ವ್ಯಾಪಾರಿಗಳು ಹೇಳಿರುವಂತೆ ಔಷಧ ಮಾರಾಟವನ್ನು ಇತ–ರೆ ಸರಕುಗಳ ಮಾರಾಟದಂತೆ ಪರಿಗಣಿಸಬಾರದು. ಏಕೆಂದರೆ ಔಷಧಿ ಮಾರಾಟವು ವೈದ್ಯರ ಮತ್ತು ಔಷಧ ಮಾರಾಟಗಾರರ ಮಧ್ಯಪ್ರವೇಶವನ್ನು ಒಳಗೊಂಡಿರುತ್ತದೆ ಮತ್ತು ಈ ಮಾರಾಟದಲ್ಲಿ ಅತಿಹೆಚ್ಚು ದುರ್ಬಳಕೆಯ ಅವಕಾಶವೂ ಇರುತ್ತದೆ. ಅಂತಿಮವಾಗಿ ಇಲ್ಲಿ ಪಣದಲ್ಲಿರುವುದು ಬಳಕೆದಾರನ ಜೀವ, ಸ್ವಾಸ್ಥ್ಯ ಮತ್ತು ಆರೋಗ್ಯ.

ಕೃಪೆ: Economic and Political Weekly June 3, 2017. Vol. 52. No. 22

ಅನು: ಶಿವಸುಂದರ್

ಎಂ.ಪಿ. ಮನೆ ಚಲೋ............

ಪುಟ 16 ರಿಂದ

ಮೀರಿ, ಈಗಾಗಲೇ ದೇಶದಲ್ಲಿ 11.43 ಲಕ್ಷ ಪ್ರಾಥಮಿಕ ಶಾಲೆಗಳ 9 ಕೋಟಿ ಮಕ್ಕಳಿಗೆ ತಾಜಾ ಬಿಸಿಬಿಸಿ ಅಡುಗೆ ಮಾಡಿ ಹಾಕುವ 25 ಲಕ್ಷ ಮಹಿಳಾ ಕೆಲಸಗಾರರು, ರಾಜ್ಯದಲಿರುವ 1 ಲಕ್ಷ 19 ಸಾವಿರ ದುಡಿಯುವ ಮಹಿಳೆಯರು ಉದ್ಯೋಗ್ಯಸ್ಥರಾಗಿರುವ ಬಿಸಿಯೂಟವನ್ನು ಕೇಂದ್ರೀಕರಿಸಿದರೆ ಕೆಲಸ ಕಳೆದುಕೊಳ್ಳಬೇಕಾಗುತ್ತದೆ.

ಪ್ರಪಂಚದಲ್ಲಿಯೇ ಅತ್ಯಂತ ವಿಶಾಲವಾದ ಯೋಜನೆ ಎಂಬ ಹೆಗ್ಗಳಿಕೆ ಭಾರತದ ಬಿಸಿಯೂಟಕ್ಕಿದೆ. ಆದರೆ ಸರ್ಕಾರ ಎಲ್ಲಾ ಶಿಕ್ಷಕರಿಗೆ ಹೊರೆಯನ್ನು ಕಡಿಮೆ ಮಾಡುವ ಉದ್ದೇಶ ನಿಜವಾದಲ್ಲಿ ಈ ಯೋಜನೆಯ ಸಂಪೂರ್ಣ ಜವಾಬ್ದಾರಿಯನ್ನು ಬಿಸಿಯೂಟ ಮಹಿಳೆಯರಿಗೆ ಮತ್ತು ಅಕ್ಷರದಾಸೋಹ ಯೋಜನೆಗೆ ಪ್ರತ್ಯೇಕವಾದ ಆಡಳಿತ ಮಂಡಳಿಗೆ ಕೊಡಬೇಕೆಂದು ಸಂಘ ಮನವಿಯಲ್ಲಿ ಒತ್ತಾಯಿಸಿದೆ. ಕೇಂದ್ರಿಕೃತ ಅಡುಗೆ ಕೇಂದ್ರಗಳನ್ನು ನಿರ್ಮಿಸಿ ಶಿಕ್ಷಕರ ಮೇಲಿನ ಹೊರೆಯನ್ನು ತಗ್ಗಿಸಲಾಗುವದೆಂದೂ ತಿಳಿಸಲಾಗಿದೆ.

45ನೇ ಭಾರತ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನದ ಶಿಫಾರಸ್ಸು ಪ್ರಕಾರ ಬಿಸಿಯೂಟ ಕಾರ್ಮಿಕರನ್ನು "ಕಾರ್ಮಿಕ"ರೆಂದು ಗುರ್ತಿಸಿ, ಬೆಲೆ ಏರಿಕೆಗೆ ಅನುಗುಣವಾಗಿ ಕನಿಷ್ಟ ಕೂಲಿ 18 ಸಾವಿರ ರೂ., ಪ್ರತಿ ತಿಂಗಳು 3000 ರೂ.ಗೆ ಕಡಿಮೆ ಇಲ್ಲದಂತೆ ಮಾಸಿಕ ಪಿಂಚಣಿ, ಗ್ರ್ಯಾಚ್ಯುಟಿ, ಭವಿಷ್ಯ ನಿಧಿ, ಆರೋಗ್ಯ ಸೌಲಭ್ಯಗಳು ಮತ್ತು ಇತರ ಸಾಮಾಜಿಕ ಸೌಲಭ್ಯಗಳನ್ನು ನೀಡಬೇಕೆಂದೂ ಪ್ರತಿಭಟನಾಕಾರರು ಆಗ್ರಹಿಸಿದರು..

ಸುಪ್ರಿಂ ಕೋರ್ಟ ಇತ್ತೀಚೆಗೆ ನೀಡಿರುವ ತೀರ್ಪಿನಂತೆ "ಸಮಾನ ಕೆಲಸಕ್ಕೆ ಸಮಾನ ವೇತನ" ನಿಯಮವನ್ನು ನಮಗೂ ಅನ್ವಯಿಸಬೇಕು. ಬಿಸಿಯೂಟ ನೌಕರರಿಗೆ ಕನಿಷ್ಠ ವೇತನ ನಿಗದಿಗೊಳಿಸಿ, ಕನಿಷ್ಠ ಕೂಲಿ ಕಾಯ್ದೆಯ ವ್ಯಾಪ್ತಿಗೆ ತರಬೇಕು. ಬಿಸಿಯೂಟ ನೌಕರರ ಈ ಕೂಲಿಯನ್ನು ಗ್ರಾಹಕರ ಬೆಲೆ ಸೂಚ್ಯಂಕಕ್ಕೆ ಹೊಂದಿಸಬೇಕು ಎಂದೂ ಪ್ರತಿಭಟನಾಕಾರರು ಒತ್ತಾಯಿಸಿದರು.

JANASHAKTHI KANNADA VARA PATRIKE JUN 12-18, 2017 Price : Rs. 10/- Date of Publication : 09 JUN 2017 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಸಂವಿಧಾನದ ಮೂಲಭೂತ ಆಶಯಗಳ ಅನುಷ್ಟಾನದಲ್ಲಿ ವಿಫಲ: ನ್ಯಾ. ಗೋಪಾಲಗೌಡ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂವಿಧಾನದ ಮೂಲಭೂತ ಆಶಯಗಳನ್ನು ಅನುಷ್ಟಾನದಲ್ಲಿ ವಿಫಲವಾಗಿವೆ. ಅವುಗಳು ಮಾಡುತ್ತಿರುವ ಕಾನೂನುಗಳ ಅನುಸರಿಸುತ್ತಿರುವ ನೀತಿಗಳು ಈ ಮೂಲಭೂತ ಆಶಯಗಳಿಗೆ ವಿರುದ್ಧವಾಗಿವೆ ಎಂದು ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಾಧೀಶ ವಿ. ಗೋಪಾಲಗೌಡ ಅಭಿಪ್ರಾಯ ಪಟ್ಟರು. ಅವರು "ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಜನಸಂಘಟನೆ" ಮೈಸೂರಿನಲ್ಲಿ ಜೂನ್ 7ರಂದು ಏರ್ಪಡಿಸಿದ್ದ "ಸಂವಿಧಾನದ ಮೂಲಭೂತ ಆಶಯಗಳು ಮತ್ತು ಸವಾಲುಗಳು" ಎಂಬ ವಿಚಾರ ಸಂಕಿರಣವನ್ನು ಉದ್ಘಾಟಿಸುತ್ತಾ ಮಾತನಾಡುತ್ತಿದ್ದರು.

ಸಂವಿಧಾನದ ಮೂಲಭೂತ ಆಶಯಗಳು ಯಾವುವು ಎಂದು ಸುಪ್ರೀಂ ಕೋರ್ಟು ಕೇಶವಾನಂದ ಭಾರತಿ ಪ್ರಕರಣಧಲ್ಲಿ ಮತ್ತು ಆ ಮೇಲಿನ ಹಲವು ಪ್ರಕರಣಗಳಲ್ಲಿ ತೀರ್ಮಾನಿಸಿದೆ. ಅವನ್ನು ಪಾರ್ಲಿಮೆಂಟು ಬದಲಾಯಿಸುವಂತಿಲ್ಲ ಎಂದೂ ಹೇಳಿದೆ. ಸಂವಿಧಾನದ ಪೀಠಿಕೆಯಲ್ಲಿ ಹೇಳಿದ ಅಂಶಗಳೇ ಮೂಲಭೂತ ಆಶಯಗಳು. ಸಾರ್ವಭೌಮತೆ, ಸಮಾಜವಾದ, ಸೆಕ್ಯುಲರ್ ವಾದ, ಪ್ರಜಾಪ್ರಭುತ್ವ ವ್ಯವಸ್ಥೆ ಈ ಮೂಲಭೂತ ಆಶಯಗಳು. ಎಲ್ಲಾ ನಾಗರಿಕರಿಗೆ – ಸಾಮಾಜಿಕ, ರಾಜಕೀಯ, ಆರ್ಥಿಕ ನ್ಯಾಯ; ಚಿಂತನೆ, ಅಭಿವ್ಯಕ್ತಿ, ನಂಬಿಕೆ, ಪೂಜೆಯ ಸ್ವಾತಂತ್ರ್ಯ; ವ್ಯಕ್ತಿಯ ಘನತೆ ಮತ್ತು ದೇಶದ ಐಕ್ಯತೆ ಸಾಧಿಸುವ ಸೌಹಾರ್ದತೆ – ಸಿಗುವಂತೆ ಖಚಿತ ಪಡಿಸುವುದು ಸಹ ಮೂಲಭೂತ ಆಶಯಗಳು. ಸಂವಿಧಾನದಲ್ಲಿ ಕೊಡಲಾಗಿರುವ ಮೂಲಭೂತ ಹಕ್ಕುಗಳು ನಮ್ಮ ಸಂವಿಧಾನದ ಹೃದಯವಾದರೆ, ನಿರ್ದೇಶಕ ತತ್ವಗಳು ಅದರ ಆತ್ಮ ಎಂದ ಅವರು, ಕಳೆದ 67 ವರ್ಷಗಳಲ್ಲಿ ಇವುಗಳ ಅನುಷ್ಟಾನದಲ್ಲಿ ನಮ್ಮ ಸರಕಾರ ಸೋತಿದೆ ಮಾತ್ರವಲ್ಲ, ಅದಕ್ಕೆ ವ್ಯತಿರಿಕ್ತವಾದ ಕಾನೂನುಗಳು ಮತ್ತು ನೀತಿಗಳನ್ನು ಅನುಸರಿಸುತ್ತಿವೆ ಎಂದು ಟೀಕಿಸಿದರು.

ಕಡ್ಡಾಯ ಶಿಕ್ಷಣ ಎಂಬ ಸಂವಿಧಾನದ ಆಶಯವನ್ನು ಸರಕಾರಗಳು ಎಷ್ಟರ ಮಟ್ಟಿಗೆ ಅನುಷ್ಟಾನಗೊಳಿಸಿವೆ, ಅದಕ್ಕೆ ಕಾರಣಗಳೇನು ಎಂದು



ಪರಿಶೀಲಿಸುವ ಮೂಲಕ ಅವರು ಸಂವಿಧಾನದ ಮೂಲಭೂತ ಆಶಯಗಳಿಗೆ ಇರುವ ಸವಾಲುಗಳನ್ನು ವಿವರವಾಗಿ ನಿರೂಪಿಸಿದರು. ಖಾಸಗಿ ಶಾಲೆಗಳು ಈ ಆಶಯವನ್ನು ಹೈಜಾಕ್ ಮಾಡಿವೆ. "ಅಂತರ್ರಾಷ್ಟ್ರೀಯ ವಸತಿ ಶಾಲೆ ಸ್ಥಾಪಿಸಲು ಅವಕಾಶ ಮಾಡಿಕೊಟ್ಟ ಸರ್ಕಾರ ಇದೀಗ ಕಡ್ಡಾಯ ಶಿಕ್ಷಣ (ಆರ್.ಟಿ.ಇ.) ಕಾಯಿದೆ ಮುಂದಿಟ್ಟು ಅದೇ ಖಾಸಗಿ ಶಾಲೆಗಳ ಮುಂದೆ ಶೇ. 25 ಸೀಟು ನಮಗೆ ಕೊಡಿ ಎಂದು ಅಂಗಲಾಚುತ್ತಿದೆ. ಭಿಕ್ಷೆ ಬೇಡುತ್ತಿದೆ. ಭೂಮಿ, ಅಧಿಕಾರ, ಶಕ್ತಿ ಮತ್ತು ಶಿಕ್ಷಣ ಮಂಡಳಿ ಸರ್ಕಾರದ ಹಿಡಿತದಲ್ಲಿದ್ದರೂ ಈ ಪರಿಸ್ಥಿತಿ ಇದೆ" ಎಂದು ವಿಷಾದಿಸಿದರು.

"ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ವೈದ್ಯಕೀಯ ಕೋರ್ಸು ಪೂರೈಸಲು ಒಂದು ಸೀಟಿಗೆ 1.5 ಕೋಟಿ ರೂ. ಬೇಕು. ಅಷ್ಟು ಹಣ ಕಟ್ಟಲು ಬಡವನಿಗೆ ಸಾಧ್ಯವಿಲ್ಲ. ಹಣ ಇದ್ದವರಿಗೆ ಮಾತ್ರ ಶಿಕ್ಷಣ ದೊರೆಯುತ್ತಿದೆ. 1.5 ಕೋಟಿ ರೂ. ಕೊಟ್ಟು ವೈದ್ಯರಾದವರು ಗ್ರಾಮೀಣ ಜನರ ಸೇವೆಗೆ ಮುಂದಾಗುವುದಿಲ್ಲ. ದೇಶದಲ್ಲಿ ಸಂವಿಧಾನದ ಆಶಯ ಈಡೇರಿಲ್ಲ ಎಂಬುದಕ್ಕೆ ಶಿಕ್ಷಣ ಕ್ಷೇತ್ರವೇ ಉತ್ತಮ ಉದಾಹರಣೆ" ಎಂದರು ನ್ಯಾ. ಗೋಪಾಲಗೌಡರು.

ಆಸ್ತಿ ಪಡೆಯುವ ಮತ್ತು ಜೀವನೋಪಾಯದ ಹಕ್ಕು ಖಚಿತ ಪಡಿಸಲು ಹಾಗೂ ಆರ್ಥಿಕ ಸಮಾನತೆಯ ಆಶಯ ಈಡೇರಿಸಲು ಭೂಸುಧಾರಣೆ ಮತ್ತು ಹಂಚಿಕೆ ಅನಿವಾರ್ಯವಾಗಿತ್ತು. ಆದರೆ ಭೂಸುಧಾರಣೆ ಸಮಗ್ರವಾಗಿ ಜಾರಿಗೊಳಿಸಲು ಎಲ್ಲಿ ಪ್ರಯತ್ನಿಸಲಾಗಿದೆ ಎಂದು ಅವರು ಪ್ರಶ್ನಿಸಿದರು.

ಸಾಮಾಜಿಕ ನ್ಯಾಯ ಸ್ಥಾಪಿಸುವ ಉದ್ದೇಶದಿಂದ ಸರ್ಕಾರ ಹಲವು ವರ್ಷಗಳ ಹಿಂದೆಯೇ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿತ್ತು. ಆದರೂ ಹೆಚ್ಚಿನ ಪರಿಣಾಮ ಉಂಟಾಗಿಲ್ಲ. ಕೆಲವರಿಗೆ ಸಾವಿರಾರು ಕೋಟಿ ರೂ. ಸಾಲ ಕೊಡುವ ಬ್ಯಾಂಕುಗಳು ಅವನ್ನು ವಸೂಲಿ ಮಾಡಲು ಮುಂದಾಗುವುದಿಲ್ಲ. ಒಬ್ಬ ಬಡ ರೈತ ಕೇಲವೇ ಸಾವಿರ ರೂ. ಸಾಲ ಮರುಪಾವತಿ ಮಾಡದಿದ್ದರೆ ಅವನ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುತ್ತದೆ. ದೇಶದಲ್ಲಿ ಸಮಾನತೆ ಎಲ್ಲಿದೆ ಎಂದು ಅವರು ಪ್ರಶ್ನಿಸಿದರು. ಇದೇ ರೀತಿಯಲ್ಲಿ ಉದ್ಯೋಗವನ್ನು ಖಚಿತ ಪಡಿಸುವಲ್ಲಿ ಸಹ ಸರಕಾರಗಳು ಸೋತಿವೆ. ಲಾಭದಾಯಕವಾಗಿ ನಡೆಯುತ್ತಿರುವ ಬೆಮೆಲ್ ಸೇರಿದಂತೆ ಅನೇಕ ಸರ್ಕಾರಿ ಸ್ವಾಮ್ಯದ ಕಂಪನಿಗಳನ್ನು ಖಾಸಗೀಕರಣ ಮಾಡಲು ಹೊರಟಿದ್ದು ಉದ್ಯೋಗ ಸೃಷ್ಟಿಯ ಬದಲು ಉದ್ಯೋಗ ನಾಶ ಮಾಡಲಾಗುತ್ತಿದೆ, ಎಂದರು.

ಸಂವಿಧಾನದ ಪ್ರಕಾರ ಆಡಳಿತ ನಡೆಸಬೇಕಿದ್ದ ಸರಕಾರಗಳು ಅದರ ಆಶಯಗಳಿಗೆ ವ್ಯತಿರಿಕ್ತವಾದ ಕಾನೂನುಗಳು ಮತ್ತು ನೀತಿಗಳನ್ನು ಅನುಸರಿಸುತ್ತಿವೆ. ನವ–ಉದಾರೀಕರಣದ ನೀತಿಗಳೆಲ್ಲಾ ಸಂವಿಧಾನದ ಆಶಯಗಳಿಗೆ ವಿರುದ್ಧವಾದವು. ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟು ನೀಡಿರುವ ಕೆಲವು ತೀರ್ಪುಗಳು ದ್ವಂದ್ವದಿಂದ ಕೂಡಿವೆ ಎಂದೂ ನ್ಯಾ. ಗೋಪಾಲಗೌಡರು ಹೇಳಿದರು.

ವಿಚಾರ ಸಂಕಿರಣದಲ್ಲಿ ಸಂವಿಧಾನ ತಜ್ಞ ಡಾ.ಸಿ.ಕೆ.ಎನ್. ರಾಜಾ, ಬಾಲಾಜಿರಾವ್, ಎಸ್.ಬಿ.ಬಲರಾಂ, ಕೆ ಬಸವರಾಜು ಅವರೂ ವೇದಿಕೆಯಲ್ಲಿ ಉಪಸ್ಥಿತರಿದ್ದು ಮಾತನಾಡಿದರು. ●

ಕೇಂದ್ರೀಕೃತ ಅಡುಗೆ ವ್ಯವಸ್ಥೆ ಕೈಬಿಡಲು ಆಗ್ರಹಿಸಿ "ಎಂ.ಪಿ. ಮನೆ ಚಲೋ"



ಬಿಸಿಯೂಟ ಯೋಜನೆಯಡಿ ಸರ್ಕಾರಿ ಶಾಲೆಗಳಲ್ಲಿ ಅಡುಗೆ ತಯಾರಿಸಿ ಮಕ್ಕಳಿಗೆ ಬಡಿಸುವ ಕ್ರಮವನ್ನು ಕೈಬಿಟ್ಟು 'ಕೇಂದ್ರೀಕೃತ ಅಡುಗೆ ಕೇಂದ್ರ'ಗಳ ಮೂಲಕ ಬಿಸಿಯೂಟ ಪೂರೈಸಬೇಕು ಎಂಬ ಕೇಂದ್ರ ಸರ್ಕಾರದ ಆದೇಶ ವಿರೋಧಿಸಿ ಜೂನ್ 7ರಂದು ರಾಜ್ಯಾದ್ಯಂತ "ಎಂ.ಪಿ. ಮನೆಗೆ ಚಲೋ" ನಡೆಸಿ ಪ್ರತಿಭಟನೆ ನಡೆಸಲಾಯಿತು. ಬೆಂಗಳೂರು, ಬಾಗಲಕೋಟೆ, ಬಿಜಾಪುರ, ಮಂಗಳೂರು, ಉಡುಪಿ, ಉತ್ತರ ಕನ್ನಡ, ಕೊಪ್ಪಳ, ಗದಗ, ಬಳ್ಳಾರ, ಶಿವಮೊಗ್ಗ, ಮೈಸೂರು – ಈ 11 ಜಿಲ್ಲೆಗಳಿಂದ ಬಿಸಿಯೂಟ ನೌಕರರು "ಎಂ.ಪಿ. ಮನೆ ಚಲೋ" ಮತ್ತು ಮನೆ ಮುಂದೆ ಧರಣಿ ನಡೆಸಿದ ವರದಿಗಳು ಬಂದಿವೆ. ಕೇಂದ್ರ ಸರಕಾರದ ಎಂ.ಎಚ್.ಆರ್.ಡಿ. ನಿರ್ದೇಶನದಂತೆ ಮೇ 24ರಂದು ಸಾರ್ವಜನಿಕ ಶಿಕ್ಷನ ಇಲಾಖೆಯ ಸುತ್ತೋಲೆ ಸಂಖ್ಯೆ 4/2017–18 ರಲ್ಲಿ ರಾಜ್ಯದಲ್ಲಿಯೂ ಕೂಡಾ ಕೇಂದ್ರೀಕೃತ ಅಡುಗೆ ಕೇಂದ್ರ'ಗಳಿಗೆ ಅವಕಾಶ ನೀಡಲಾಗಿದೆ. ಪ್ರತಿಭಟನಾಕಾರರು "25 ಲಕ್ಷ ಬಡ ಮಹಿಳೆಯರ ಕೆಲಸ ಕಸಿಯಬೇಡಿ", "ಖಾಸಗಿಯರ ಲಾಭಮಾಡಿಸಲು ಮಕ್ಕಳಿಗೆ ತಂಗಳನ್ನ ನೀಡಬೇಡಿ", "ಕೆಲಸ ಖಾಯಂ ಮಾಡಿ", "ಬಜೆಟ್ಟಿನಲ್ಲಿ ಕಡಿತಮಾಡಿದ ಅನುದಾನ ವಾಪಸ್ ನೀಡಿ" ಎಂಬಿತ್ಯಾದಿ ಘೋಷಣೆಗಳನ್ನು ಕೂಗಿದರು. ಎಂ.ಪಿ.ಗಳ ಮೂಲಕ ಪ್ರಧಾನಿಗೆ ಮನವಿ ಸಲ್ಲಿಸಿದರು.

ಈಗಾಗಲೇ ಹಲವು ಎನ್.ಜಿ.ಓ ಗಳು ಸ್ವಲ್ಪಮಟ್ಟಿಗೆ ದೇಶಾದ್ಯಂತ ಬಿಸಿಯೂಟ ಕೆಲಸ ಮಾಡುತ್ತಿವೆ. ಆ ಎನ್.ಜಿ.ಓ ಗಳಲ್ಲಿ ಇಸ್ಕಾನ್, ಅಕ್ಷಯಪಾತ್ರೆ, ಅದಮ್ಯಚೇತನ, ವೇದಾಂತ ಕಂಪನಿಯ ಸಂಸ್ಥೆಗಳು ಮುಖ್ಯವಾಗಿವೆ. ಇಸ್ಕಾನ್ ಸರಬರಾಜು ಮಾಡುವ ಊಟದಲ್ಲಿ ಈರುಳ್ಳಿ, ಬೆಳ್ಳುಳ್ಳಿ ಇರುವುದಿಲ್ಲ. ಊಟವನ್ನು ವಾಹನಗಳಲ್ಲಿ ಸರಬರಾಜು ಮಾಡುವುದರಿಂದ ಮಧ್ಯಾನ್ಹ 1–30 ಗಂಟೆಗೆ ಮಕ್ಕಳು ಊಟ ಮಾಡುವ ಸಮಯಕ್ಕೆ ಊಟ ತಣ್ಣಗಾಗುತ್ತದೆ. ಕೇಂದ್ರೀಕೃತ ಅಡುಗೆ–ಯೆಂದರೆ 40 ರಿಂದ 50 ಶಾಲೆಗಳು ಒಂದೇ ಪ್ರದೇಶದಲ್ಲಿ ಅಥವಾ ಒಂದೇ ರಸ್ತೆಯ ಹಾದಿಯಲ್ಲಿ ಬಂದರೆ ಅಷ್ಟು ಶಾಲೆಗಳಿಗೆ ಒಂದೇ ಸ್ಥಳದಿಂದ ಆಹಾರ ಸರಬರಾಜು ಮಾಡಿದರೆ, ಆ ಶಾಲೆಗಳಲ್ಲಿ ಅಡುಗೆ ಮಾಡುವ ಕನಿಷ್ಟ 100–150 ಜನರು ಕೆಲಸ ಕಳೆದು ಕೊಳ್ಳುತ್ತಿದ್ದಾರೆ ಅಲ್ಲದೇ ಈ ಯೋಜನೆಯಡಿಯಲ್ಲಿ ಕೆಲಸ ಮಾಡುವ ಲಕ್ಷಾಂತರ ಮಹಿಳೆಯರು ಕೆಲಸ ಕಳೆದುಕೊಳ್ಳುವದಲ್ಲದೇ ಈ ಯೋಜನೆಯ ಮುಖ್ಯ ಉದ್ದೇಶಗಳಿಗೂ ಧಕ್ಕೆ ಬರುತ್ತದೆ. ಆದರೆ ಸರ್ಕಾರದ ಬೊಕ್ಕಸದ ಹಣವನ್ನು ಲೂಟಿಮಾಡಲು ಧರ್ಮಾಧಾರಿತವಾದ ಸಂಘಟನೆಗೆ ಮತ್ತು ತಮ್ಮ ಹಿತಾಸಕ್ತಿ ಕಾಪಾಡುವ ಕಂಪನಿಗಳಿಗೆ ಎನ್.ಜಿ.ಓ ಗಳಿಗೆ ಕೊಡಲು ಇಂದಿನ ಎಂ.ಹೆಚ್.ಆರ್.ಡಿ ಇಲಾಖಾ ಕಾರ್ಯದರ್ಶಿಗಳು ಎಂ.ಹೆಚ್.ಆರ್.ಡಿ ನಿಯಮಗಳಿಗೆ "ಕೇಂದ್ರೀಕೃತ ಅಡುಗೆ" ತಯಾರಿಸಲು ನೆರವಾದ ತಿದ್ದುಪಡಿ ತಂದಿವೆ.

ಈ ನಿರ್ದೇಶನ ವಾಪಸು ಪಡೆದು ಖಾಸಗೀಕರಣ ನಿಲ್ಲಿಸದಿದ್ದರೆ ಇದೇ ವಿಚಾರವಾಗಿ "ಜೂನ್ 13ರಂದು 'ವಿಧಾನಸೌಧ ಚಲೋ' ರಾಜ್ಯ ಮಟ್ಟದ ಪ್ರತಿಭಟನೆ ಮಾಡುತ್ತೇವೆ. ಅಡುಗೆ ಕೆಲಸಗಾರರಿಗೆ ಅನ್ಯಾಯವಾಗಲು ಬಿಡುವುದಿಲ್ಲ." ಎಂದು ಕೇಂದ್ರ ಸಚಿವ ಅನಂತಕುಮಾರ್ ಅವರ ಮನೆ ಮುಂದೆ ಧರಣಿನಿರತ ಬಿಸಿಯೂಟ ಕಾರ್ಮಿಕರನ್ನು ಉದ್ದೇಶೀಸಿ ಮಾತನಾಡುತ್ತಾ, ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತ, ಎಚ್ಚರಿಸಿದರು.

2014 ರಲ್ಲಿ ಕೇಂದ್ರಸರ್ಕಾರ ಬದಲಾವಣೆಯ ನಂತರ, ಇತರ ಸಾಮಾಜಿಕ ಕಲ್ಯಾಣ ಯೋಜನೆಗಳಂತೆ ಬಿಸಿಯೂಟ ಯೋಜನೆಗೂ ಕೂಡಾ 60% ಅನುದಾನ ಕಡಿತ ಮಾಡಿ, ರಾಜ್ಯ ಸರ್ಕಾರಗಳ ಮೇಲೆ ಹೊರೆ ಹಾಕಿದೆ. ಈ ಕಡಿತ ವಾಪಸು ಪಡೆಯಬೇಕು ಎಂದೂ ಪ್ರತಿಭಟನಾಕಾರರು ಆಗ್ರಹಿಸಿದರು. 2001 ಮತ್ತು 2004 ರಲ್ಲಿ ಸುಪ್ರೀಂಕೋರ್ಟ್ ಅಡುಗೆ ತಯಾರಿಸುವ ಬಗ್ಗೆ ನೀಡಿರುವ ಮಾರ್ಗದರ್ಶನದ ಪ್ರಕಾರ "ಆಗತಾನೆ ಅಡುಗೆ ಬೇಯಿಸಿ ಬಿಸಿ ಬಿಸಿಯಾದ ತಾಜಾ ಆಹಾರವಾಗಿ ನೀಡಬೇಕು. ಸಂಪೂರ್ಣ ಸ್ವಚ್ಚತೆಯನ್ನು ಕಾಪಾಡಬೇಕು. ಅಡುಗೆ ಮಾಡುವ ಮಹಿಳೆಯರನ್ನು ವಿಧವೆ, ದಲಿತ, ಸಂತ್ರಸ್ಥ ಮತ್ತು ಸ್ಥಳೀಯ ಮಹಿಳೆಯರಿಗೆ ಆದ್ಯತೆ ಕೊಡಬೇಕೆಂದು" ತಿಳಿಸಿದೆ. ಆದರೆ ಕೇಂದ್ರ ಸರ್ಕಾರ ಸುಪ್ರೀಂಕೋರ್ಟ ನಿರ್ದೇಶನವನ್ನು

ಪುಟ 15 ಕ್ಕೆ





JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**